
ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 38

ಸೆಪ್ಟೆಂಬರ್ 21, 2003 ಬೆಲೆ ರೂ. 3.00




ಸಂಘರ್ಷದ ಸಂದೇಶ ಚಿತ್ತರಿಸಿದ ರ್‍ಯಾಲಿ



ಸಂಘ ಪರಿವಾರ ಹಬ್ಬಿಸುತ್ತಿದೆ ದಳ್ಳುರಿ




ವಾಜಪೇಯಿ-ಶೆರೂನ್ ಇದು ಭಯೋತ್ಪಾದಕ ಮೈತ್ರಿ !



ಕ್ಯಾನ್‌ಕುನ್ WTO ಸಭೆ ಎಲ್ಲೆಡೆ ಪ್ರತಿಭಟನೆ

ವಂಚಕ ಕೃಷ್ಣರ ಜನಘಾತುಕ ವರಸೆ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

44

ಕಳೆದ ಸಂಚಿಕೆಯಲ್ಲಿ ಶಾಂತ ಸ್ವಭಾವದ ರೈತ ಮಕ್ಕಳಿಗೂ ತೆಲಂಗಾಣದ ಹೋರಾಟದ ರೈತ ವೀರರ ನಡುವೆ ಅಗಾಧ ವ್ಯತ್ಯಾಸ ಗುರುತಿಸಿದ ಜಯಪಾಲ್; ತಮ್ಮ ಬಾಲ್ಯ ನೆನಪಿನತ್ತ ಪಯಣಿಸಿದ ಜಯಪಾಲ್; ಕೈ ಕಾಲುಗಳಲ್ಲಿ ರಕ್ತ ಸೋರುತ್ತಿದ್ದರೂ ಮುಳ್ಳು ಪೊದೆಗಳ ಮಧ್ಯೆ ಸಮರಕ್ಕಾಗಿ ಮುಂದುವರೆದದ್ದು ಮತ್ತು ರೋಮಾಂಚನ ಉಂಟು ಮಾಡಿದ 'ಗೆರಿಲ್ಲಾ ಸಿಗ್ನಲ್' ಬಗ್ಗೆ ಓದಿರುವಿರಿ. ಮುಂದೆ...



ಕನ್ನಡಕ್ಕೆ: ವಿಶ್ವ ಕುಂದಾಪುರ

ಕಲ್ಲು, ಬಂಡೆಗಳೇ ದಿಂಬು, ಹಾಸಿಗೆ!

ಇಲ್ಲಿ ಈ 'ಕರೆ ಸಿಗ್ನಲ್'ಗಳು ಈ ಅತೃಪ್ತ ರೈತ ಮಕ್ಕಳು ಯುದ್ಧ ಕಲೆಯ 'ಸಾಧನಗಳಲ್ಲಿ' ಸಾಧಿಸಿದ ಪ್ರಗತಿಯ ಸಂಕೇತವಷ್ಟೇ ಆಗಿರಲಿಲ್ಲ, ಅದಕ್ಕೆ ಸಾಂಕೇತಿಕಕ್ಕಿಂತ ಇನ್ನೂ ಹೆಚ್ಚಿನ ಮಹತ್ವವಿತ್ತು. ಅವು ದುಡಿಯುವ ವರ್ಗದ ಕ್ರಾಂತಿಕಾರಿ ಪಕ್ಷದ 'ಕರೆಸಿಗ್ನಲ್' ಅನ್ನು ಪ್ರತಿನಿಧಿಸುತ್ತಿದ್ದವು. ಕಾರ್ಮಿಕವರ್ಗ ಮಿತ್ರನಾದ ರೈತನನ್ನು ಅವರದೇ ಪುತ್ರ- ಪುತ್ರಿಯರ ಮೂಲಕ 'ಕ್ರಾಂತಿಕಾರಿ ಕಾರ್ಯಾಚರಣೆಗೆ', 'ಕಾರ್ಯಾಚರಣೆ ಕೇಂದ್ರಗಳಿಗೆ' ಕರೆಯುವುದಾಗಿದೆ.

ನಮ್ಮ ಕಡೆ ತೇಲಿಬಂದ 'ಮಂಗಗಳ' ಕೂಗು, ಅದನ್ನೊಂದು 'ಕರೆಸಿಗ್ನಲ್' ಆಗಿ ರೂಪುಗೊಳಿಸುವಲ್ಲಿ ಅನುಭವಿಸಿದ ನೋವುಗಳ ಕತೆಯನ್ನು ಹೊತ್ತು ತಂದಿತ್ತು- ಹುತಾತ್ಮರಾದ ಸಾವಿರಾರು ಜನರ ದೇಹಗಳ ನೆರಳು ಮತ್ತು 'ಗಾಂಧಿ ಟೋಪಿಗಳ' ಕಟುಕರ ಮಾನಗೇಡಿತನವನ್ನು ನೆನಪಿಸಿದವು. ಇದು .... ರೋಮಾನ್ಸ್ ಅಲ್ಲ, ಮೌನವಾಗಿ ನೋವು ಅನುಭವಿಸಿದವರ ಕೇಕೆಯಲ್ಲ. ಆದರೆ ಅದು ಹೇಳಲಾಗದ ನೋವು-ಸಂಕಷ್ಟಗಳ ಮಧ್ಯೆ, ತಮ್ಮ ಆತ್ಮೀಯರ ಶವಗಳ ನಡುವೆ ಕುಳಿತು ಸಂತಾಪ ಪಡುತ್ತಿರುವವರ ರಣಕಹಳೆಯಾಗಿದೆ. ಮೌನವಾಗಿ ಕುಳಿತುಕೊಳ್ಳಬಾರದು ಹಾಗೂ ಹೆಣಗಳನ್ನು ಕಂಡು ಸುಮ್ಮನೆ ಅಳುತ್ತಾ ಕುಳಿತರಾಗದು ಎಂದು ಅವರು ನಿರ್ಧರಿಸಿದ್ದಾರೆ. ತಮ್ಮ ಕಣ್ಣುಗಳ ಆರದ ಬೆಂಕಿಯಲ್ಲಿ ಕಣ್ಣೀರನ್ನು ಸುಟ್ಟು ಹಾಕಲು ಅವರು ನಿರ್ಧರಿಸಿದ್ದಾರೆ. ಕಟುಕರ ಬಗ್ಗೆ ಹೃದಯದಲ್ಲಿ ಅಡಗಿಸಿಟ್ಟುಕೊಂಡ ವೈರವನ್ನು ಸುಡಲು ನಿರ್ಧರಿಸಿದ್ದಾರೆ.

ಈ ಕರೆಸಿಗ್ನಲ್ ದುಡಿಯುವವರ್ಗದ ವಿಜ್ಞಾನದ ಛಾಪನ್ನು ಹೊಂದಿತ್ತು, ಭಾವುಕ ರೈತಾಪಿ ಜನತೆಯ ಭಾವನಾತ್ಮಕತೆಯನ್ನು ಮೀರಿದ ವೈಚಾರಿಕತೆಯಿತ್ತು. ಭಾರತದ ಗ್ರಾಮೀಣ ಪ್ರದೇಶದಲ್ಲಿನ ರೈತ ಸಂಘರ್ಷಗಳ ಇತಿಹಾಸದಲ್ಲೇ ಮೊದಲಬಾರಿಗೆ ಶ್ರಮಿಕವರ್ಗದ ಛಾಪನ್ನು ಹೊಂದಿದ ಪ್ರಪ್ರಥಮ 'ಕರೆಸಿಗ್ನಲ್' ಇದಾಗಿತ್ತು. ಅದು ನಿಜಕ್ಕೂ ರೋಮಾಂಚನವಾಗಿತ್ತು. ಅದ್ಭುತವಾಗಿತ್ತು. ಮಿಲಿಟರಿ ದೃಷ್ಟಿಯಿಂದ ನೋಡಿದರೆ ದಕ್ಷವಾಗಿತ್ತು. ಅನತಿ ದೂರದಲ್ಲಿ ಅದೇ ರೀತಿಯ ಕರೆಸಿಗ್ನಲ್ ಕೇಳಿಬಂತು. ಅಂದರೆ ತಂಡವನ್ನು ಸಂಪರ್ಕಿಸಲಾಗಿದೆ ಎಂದಾಯಿತು.

ರೆಡ್‌ಸೆಲ್ಯೂಟ್......

ಬೆಟ್ಟದ ಬುಡದ ಪೊದೆಗಳ ಹಿಂದಿನಿಂದ ಒಂದು, ಎರಡು, ಮೂರು, ನಾಲ್ಕು ನೆರಳುಗಳು ಎದ್ದುಬಂದವು. ಅವರು ಬರಿಗಾಲಲ್ಲಿದ್ದರು. ಅವರ ಕಾಲುಗಳೋ ಉಕ್ಕಿನಿಂದ ಮಾಡಿದಂತೆ ಇದ್ದವು. ತಂಡದ ನಾಯಕ ವೇಗವಾಗಿ ನಮ್ಮತ್ತ ಧಾವಿಸಿ ಬಂದರು. ಅವರು ಬಲಗೈನಿಂದ ವಂದಿಸುತ್ತಾ 'ರೆಡ್‌ಸೆಲ್ಯೂಟ್' ಎಂದು ಹೇಳಿದರು. ಮನೆಯಲ್ಲೇ ತಯಾರಿಸಿದ ಚರ್ಮದ ಬೆಲ್ಟ್‌ನಲ್ಲಿ ಭುಜದ ಮೇಲೆ ಜಪಾನಿ ರೈಫಲ್ ತೂಗಾಡುತ್ತಿತ್ತು. ಉತ್ಸಾಹ ತುಂಬಿ ತುಳುಕುತ್ತಿದ್ದ ಈ ಯುವನಾಯಕ ನಮ್ಮನ್ನು ಕ್ರಾಂತಿಕಾರಿ ಭಾವನೆಯಿಂದ ಬಿಗಿಯಾಗಿ ಅಪ್ಪಿಕೊಂಡ. ಆ ನಂತರ ನನ್ನ ಕೈಗಳನ್ನು, ತನ್ನ ಕೈಗೆ ತೆಗೆದುಕೊಂಡು ಕುಲುಕಿ "ರೆಡ್‌ಸೆಲ್ಯೂಟ್ ಕಾಮ್ರೇಡ್' ಎಂದು ನುಡಿದ. ತದನಂತರ ಒಬ್ಬರಾದ ಮೇಲೆ ಇನ್ನೊಬ್ಬರು ಅಪ್ಪಿಕೊಂಡು 'ರೆಡ್‌ಸೆಲ್ಯೂಟ್ ಕಾಮ್ರೇಡ್' 'ರೆಡ್‌ಸೆಲ್ಯೂಟ್ ಕಾಮ್ರೇಡ್' ಎಂದು ಹೇಳಿದರು. ಇತರ ಇಬ್ಬರ ಬಳಿ 303 ರೈಫಲ್ ಇದ್ದವು.

ಕ್ರಾಂತಿಕಾರಿ ಭಾವನೆಯಿಂದ ಸಂಗಾತಿಗಳನ್ನು ಭೇಟಿ ಮಾಡುವುದು ಯಾವತ್ತೂ ಮಹೋನ್ನತವಾದುದು. ಅದರಲ್ಲೂ ಆಯಾಸಕರ ಪ್ರಯಾಣದ ನಂತರ ಅದು ಇನ್ನೂ ಹೆಚ್ಚು ಮಹತ್ವವಾದುದು. ಒಂದೇ ಸಮನೆ 30 ಮೈಲಿ ನಡೆದು ಆದ ದಣಿವನ್ನು ಒಂದೇ ಒಂದು ನಿಮಿಷದಲ್ಲಿ ಮರೆತುಬಿಟ್ಟೆವು. ಅಲ್ಲದೆ ರೈತಾಪಿ ಪ್ರದೇಶದ ಕಟ್ಟುನಿಟ್ಟಿನ ತಾಂತ್ರಿಕ ಅಂಶಗಳನ್ನು ಕೂಡ ಮರೆತೆವು. ಬದಲಿಗೆ. ಪಿಸುಗುಟ್ಟುತ್ತಾ ಮಾತನಾಡುತ್ತಿದ್ದ ನಾವು ಈಗ ತುಂಬಾ ಜೋರಾಗಿಯೇ ಮಾತಾಡತೊಡಗಿದೆವು. ಗೆರಿಲ್ಲಾ ಕಮಾಂಡರ್ 'ಆರ್ಡರ್' ಎಂದು ಕೂಗಿದ. ಮತ್ತೆ ಎಂದಿನಂತೆ ಮೌನ, ನೀರವ ಮೌನ ಆವರಿಸಿತು.

> **ಲಗುಬಗನೆ ನಮ್ಮತ್ತ ಧಾವಿಸಿ ಬಂದ ತಂಡದ ಕಮಾಂಡರ್ ಕೈಗೆತ್ತಿ ವಂದಿಸಿ 'ರೆಡ್‌ಸೆಲ್ಯೂಟ್' ಎಂದು ಹೇಳಿದರು. ಕೈ ಎತ್ತಿ ವಂದಿಸಿ 'ರೆಡ್‌ಸೆಲ್ಯೂಟ್' ಎಂದು ಹೇಳಿದರು. ಕ್ರಾಂತಿಕಾರಿ ಭಾವನೆಯಿಂದ ಬಿಗಿದಪ್ಪಿಕೊಂಡು 'ರೆಡ್‌ಸೆಲ್ಯೂಟ್ ಕಾಮ್ರೇಡ್' ಎಂದರು. ಈ ಕ್ರಾಂತಿಕಾರಿ ಭಾವನೆ, ಬಿಗಿಯಪ್ಪುಗೆ ಸತತ 30 ಮೈಲು ನಡೆದದ್ದರಿಂದ ಉಂಟಾದ ದಣಿವನ್ನು ಕೂಡ ಮರೆಯುವಂತೆ ಮಾಡಿತು. ಕ್ರಾಂತಿಕಾರಿ ಭ್ರಾತೃತ್ವಕ್ಕೆ ಇರುವ ಶಕ್ತಿ ಅಂಥದ್ದು.**

"ನಾವು ಆ ಬೆಟ್ಟಕ್ಕೆ ಹೋಗೋಣ" - ಎಂದು ಕಮಾಂಡರ್ ಮೇಲುದನಿಯಲ್ಲಿ ಹೇಳಿದರು. ಸಮತಟ್ಟು ಪ್ರದೇಶವೊಂದರಲ್ಲಿ ಧುತ್ತೆಂದು ಎದ್ದು ನಿಂತಂತಿದ್ದ ಬೆಟ್ಟವೊಂದನ್ನು ಅವರು ತೋರಿಸಿದರು.

ಚೌಕಾಕಾರದ ಕಲ್ಲನ್ನು ದಿಂಬನ್ನಾಗಿ, ಸಮತಟ್ಟಾದ ಬಂಡೆಯನ್ನು ಹಾಸಿಗೆಯನ್ನಾಗಿ ಮಾಡಿಕೊಂಡು ಆಯಾಸಗೊಂಡ ನಮ್ಮ ಕಾಲುಗಳನ್ನು ಚಾಚಿದೆವು. ನಿದ್ದೆ ಮಾಡಲಾಗದೆ ನಾನು ಎಚ್ಚರಗೊಂಡಿದ್ದಾಗ ಇತರ ಸಂಗಾತಿಗಳು ಗೊರಕೆ ಹೊಡೆಯುತ್ತ ಮಲಗಿದ್ದರು. ವರ್ಷಾನುಗಟ್ಟಲೆ ಕಳೆದ ಕಷ್ಟದ ದಿನಗಳಿಂದಾಗಿ ಬಂಡೆ ಹಾಗೂ ಹಾಸಿಗೆ ನಡುವಿನ ಅಂತರವೇ ಮಾಯವಾಗಿತ್ತು.

ಬೆಳಗಾಯಿತು. ನಿತ್ಯ ಜೀವನದ ದೃಶ್ಯಗಳು ಕಂಡುಬಂದವು. ಆ ಪ್ರದೇಶದಲ್ಲಿ ತಂಡದ ಜೀವನ ಹಾಗೂ ಇತರ ಗೊತ್ತಿಲ್ಲದ ಸಂಗತಿಗಳನ್ನು ಕಂಡೆ.

ನರಭಕ್ಷಕ ಹಲ್ಲುಗಳುಳ್ಳವರು ಹಾಗೂ ನರಮಾಂಸ ಪ್ರಿಯರೆಂದು ನೆಹರೂ ಆಡಳಿತ ವರ್ಣಿಸಿದ್ದ ಈ 'ಭಯೋತ್ಪಾದಕರು' ಇನ್ನೂ ತಾರುಣ್ಯಾವಸ್ಥೆಯಲ್ಲಿದ್ದರು. ಹಾಲುಗಲ್ಲ ಈಗಷ್ಟೇ ಬಿದ್ದು ಹೋಗಿದ್ದವರಾಗಿದ್ದರು. ಶೋಷಿತ ಕೃಷಿಕರು ಹಾಗೂ ಕೃಷಿಕಾರ್ಮಿಕರ ಮಕ್ಕಳಾಗಿದ್ದ ಇವರು ಅಕಾಲಿಕವಾಗಿ ವಿವೇಕ ಬೆಳೆಸಿಕೊಂಡಿದ್ದರು, ದೃಢ ನಿರ್ಧಾರ ತಳೆದಿದ್ದರು. ಪರಿಪೂರ್ಣವಾದ ಮಾನವೀಯ ಭಾಷೆಯನ್ನೇ ಮಾತನಾಡುತ್ತಿದ್ದರು. ಅವರು ಮಾತಾಡುತ್ತಿದ್ದುದು ನರಭಕ್ಷಣೆ ವಿರೋಧಿಯಾಗಿತ್ತು.

ಹದಿನಾಲ್ಕರ ಪೋರ - ಗೆರಿಲ್ಲಾ ಹೋರಾಟಗಾರ

ದೃಢ ನಿಶ್ಚಯದ ಯುವ ಮುಖಗಳು, ಪಕ್ಷ, ಶಿಸ್ತುಬದ್ಧ ಹಾಗೂ ಜವಾಬ್ದಾರಿಯುತ ಕ್ರಾಂತಿಕಾರಿಗಳು. ಕ್ರಾಂತಿಕಾರಿ ಹೋರಾಟ ತಮ್ಮ ಎಳೆಯ ಭುಜಗಳ ಮೇಲೆ ಹೊರಿಸಲಾದ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿರುವವರು ಈ ತರುಣರು. ಇಂಥವರ ಬಗ್ಗೆ 'ನರಭಕ್ಷಕರು', 'ಭಯೋತ್ಪಾದಕರು', 'ದುಷ್ಕರ್ಮಿಗಳು', 'ದರೋಡೆಕೋರರು' - ಇತ್ಯಾದಿಯಾಗಿ ಪದ ಬಳಕೆ ಮಾಡಿ ವರ್ಣಿಸುತ್ತಿದ್ದುದನ್ನು ಕಂಡು ಆಶ್ಚರ್ಯವೆನಿಸಿತು.

ಬನ್ನಿ, ಈ 'ಭಯೊತ್ಪಾದಕರ' ಒಂದು ಸ್ಯಾಂಪಲ್ ನೋಡೋಣ.

ಈತ ಕುಂದನ್, ತರುಣ ಸಂಗಾತಿ. ವಲಯ ರಾಜಕೀಯ ಮತ್ತು ಮಿಲಿಟರಿ ಸಂಘಟಕ. ನಾನಾತನನ್ನು ಭೇಟಿಯಾದಾಗ ಅವನಿಗಿನ್ನೂ 17 ವರ್ಷ ಆಗಿರಲಿಲ್ಲ. 1947 ರಲ್ಲಿ ಕ್ರಾಂತಿ ಕಿಡಿ ತೆಲಂಗಾಣದ ಪಾಳೇಗಾರಿ ಕೋಟೆಯನ್ನು ಆವರಿಸಿದಾಗ, ರಾಜ್ಯದೊಳಗಿನ ಗಾಂಧಿ ಟೋಪಿಧಾರಿ ನಾಯಕತ್ವ ಮದ್ರಾಸ್ ಪ್ರಾಂತ್ಯದ ನೆಹರೂ ಆಡಳಿತದ ರಕ್ಷಣೆಗೆ ಧಾವಿಸಿದಾಗ, ದುಡಿಯುವ ವರ್ಗದ ಪಕ್ಷ ಪರಿಸ್ಥಿತಿಗೆ ಸ್ಪಂದಿಸಿ ರಜಾಕಾರರ ದಬ್ಬಾಳಿಕೆಯಿಂದ ರೈತರ ಗೌರವ, ಮನೆ ಮಠ ಮತ್ತು ಆಸ್ತಿಪಾಸ್ತಿ ರಕ್ಷಿಸಿಕೊಳ್ಳಲು ಕೈಯಲ್ಲಿ ಶಸ್ತ್ರ ಹಿಡಿದು ತೆಲಂಗಾಣ ರೈತರನ್ನು ಸಂಘಟಿಸಿದಾಗ ತರುಣ ಕುಂದನ್ ಬಹುತೇಕ ಪಕ್ಷದ ಕೇಂದ್ರ ಕಾರ್ಯಾಲಯದವರೆಗೆ ತಲುಪಿದ್ದ. ತನ್ನ ಮಗನನ್ನು ಹಿಡಿಯಲು ತಾಯಿ ಆತನ ಹಿಂದೆ ಓಡಿದ್ದಳು. ನನ್ನ ಮಗ ಬೆಂಕಿಯಲ್ಲಿ ಬೆಂದು ಸಾಯಲು ಬಿಡಬಾರದು ಎಂಬುದು ಆಕೆಯ ಉದ್ದೇಶವಾಗಿತ್ತು. ಆತ ನಿಂತುಕೊಂಡಿದ್ದರೆ ಆತನ ದೀರ್ಘಕಾಲದ ಬಯಕೆಯನ್ನು ಈಡೇರಿಸಿಕೊಳ್ಳಲು ತಾಯಿ ಅವನಿಗೆ ದುಡ್ಡುಕೊಡುತ್ತಿದ್ದಳು. ಅವನು ಪಟ್ಟಣಕ್ಕೆ ಹೋಗಬಹುದಿತ್ತು, ಅಲ್ಲಿ ಎಲ್ಲವನ್ನು ನೋಡಬಹುದಿತ್ತು.

"ಇಲ್ಲ ಅಮ್ಮ ಇಲ್ಲ. ನಾನು ಸುಟ್ಟು ಹೋಗುವುದಿಲ್ಲ. ನಾನಿರುವುದು ಸುಡಲಿಕ್ಕಾಗಿ, ಸಾಯಲು ಅಲ್ಲ. ಆದರೆ ಸಾಯಿಸಲು" ಎಂದು ತನ್ನ ತಾಯಿಯ ಅಪ್ಪುಗೆಯಿಂದ ಬಿಡಿಸಿಕೊಂಡ ಕುಂದನ್ ಕೂಗಿ ಹೇಳಿದ್ದ.

ತಾನು ಗೆರಿಲ್ಲಾ ಹೋರಾಟಗಾರ ಆಗಬೇಕೆಂದು ಸತತ ಒತ್ತಾಯಿಸಿದ ಹದಿನಾಲ್ಕು ವರ್ಷದ ಬಾಲಕನನ್ನು ಕಂಡು ಪಾರ್ಟಿಯ ಸ್ಥಳೀಯ ಕೇಂದ್ರ ಕಾರ್ಯಾಲಯದಲ್ಲಿದ್ದವರು ನಕ್ಕಿದ್ದರು. "ಇಲ್ಲ, ರಜಾಕಾರರ ವಿರುದ್ಧ ಹೋರಾಡುವ ಯಾರನ್ನೇ ನೀವು ತಡೆಯಲಾಗದು. ನೀವು ನನ್ನನ್ನು ಸೇರಿಸಿಕೊಳ್ಳಲೇಬೇಕು" ಎಂದು ಕುಂದನ್ ಆಗ್ರಹಿಸಿದ್ದ. ತನ್ನ ದೃಢತೆಯನ್ನು ತೋರ್ಪಡಿಸಿದ್ದ. 'ಅತ್ತು ಕರೆದನು.....

'ನೀನು ತುಂಬಾ ಘಾಟಿ ಕಣೋ, ಅಲ್ಲವೇ?' - ಎಂದು ಕಾರ್ಯದರ್ಶಿ ಕುಂದನ್‌ಗೆ ಹೇಳಿದರು. ತನ್ನನ್ನು ಗೆರಿಲ್ಲಾ ಹೋರಾಟಗಾರರನ್ನಾಗಿ ಮಾಡುವಂತೆ ಅವರ ಮನವೊಲಿಸಲು ಅಥವಾ ಒಪ್ಪಿಸಲು ವಿಫಲನಾಗಿದ್ದರಿಂದ ಕುಂದನ್ ಬಿಕ್ಕಿ ಬಿಕ್ಕಿ ಅತ್ತ. ಮೊದಮೊದಲು ಮೆಲ್ಲನೆ ಅತ್ತ ಆತ ಆಮೇಲೆ ಜೋರಾಗಿ ಅತ್ತನು. ಗಳಗಳನೆ ಅತ್ತನು. 'ಆತ ಮನೆಗೆ ಹೋಗದೆ ಇದ್ದುಬಿಟ್ಟ' ಎಂದು ಕಾರ್ಯದರ್ಶಿ ಆನಂತರ ನನಗೆ ತಿಳಿಸಿದರು.

ಪಕ್ಷ ಆತನನ್ನು ಅಂಗೀಕರಿಸಿತು. ಅವನು ಕಲಿಯಲು, ಓದಲು ಹಾಗೂ ಉಪನ್ಯಾಸ ನೀಡಲು ಆರಂಭಿಸಿದ. ಮೂರು ವರ್ಷಗಳಲ್ಲಿ ಆತ ವಲಯ ಸಂಘಟಕ, ಅಂದರೆ ರಾಜಕೀಯ ಹಾಗೂ ಮಿಲಿಟರಿ ನಿರ್ದೇಶಕ ಸ್ಥಾನಕ್ಕೆ ಬಡ್ತಿ ಪಡೆದ. 150 ಗ್ರಾಮಗಳು, ಮೂರು ಗೆರಿಲ್ಲಾ ತಂಡಗಳು ಹಾಗೂ ಹಲವು ರಾಜಕೀಯ ತಂಡಗಳಿಗೆ ನಾಯಕನಾದ! ನಗರದ ಅತಿ ಸಮೀಪ ಇದ್ದಿದ್ದರಿಂದ ಪ್ರಾಂತೀಯ ಸಮಿತಿ ಮತ್ತು ವಲಯ ಕೇಂದ್ರ ಕಛೇರಿ ನಡುವಿನ ಸಂಪರ್ಕಗಳನ್ನು ಆತ ನಿಭಾಯಿಸಿದ. ಅತಿ ಸಂಕೀರ್ಣವಾದ, ಅಪಾಯಗಳು ಒಳಗೊಂಡ ಹಾಗೂ ಪ್ರಮುಖ ಕಾರ್ಯಾಚರಣೆಗಳನ್ನು ಅನುಷ್ಠಾನಗೊಳಿಸಿದ.

ಒಂದು ದಿನ ಸಂಜೆ ಬೆಟ್ಟವೊಂದರ ಮೇಲೆ ರೈತರ ಗುಂಪಿಗೆ ಆತ ಉಪನ್ಯಾಸ ನೀಡುತ್ತಿದ್ದುದನ್ನು ನಾನು ನೋಡಿದೆ. ಅವರಲ್ಲಿ ಕೆಲವರು ಆತನ ತಂದೆಯ ವಯಸ್ಸಿನವರೂ ಇದ್ದರು. ಆದರೆ ಅವರೆಲ್ಲರೂ ಕುಂದನ್ ಭಾಷಣವನ್ನು ಗೌರವದಿಂದ ಹಾಗೂ ಮೌನವಾಗಿ ಆಲಿಸಿದರು.

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಸೆಪ್ಟೆಂಬರ್ 13, 2003**
  ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ನೀತಿ ವಿರುದ್ಧ ಕುಂದಾಪುರ ತಾಲ್ಲೂಕಿನಾದ್ಯಂತ ಜಾಥಾ
- **ಸೆಪ್ಟೆಂಬರ್ 21,2003**
  ಮಂಡ್ಯ ಜಿಲ್ಲಾ ಸಿಐಟಿಯು ಸಮ್ಮೇಳನ, ಮಂಡ್ಯ
- **ಸೆಪ್ಟೆಂಬರ್ 27-28, 2003**
  ಬೆಂಗಳೂರು ಜಿಲ್ಲಾ ಸಿಐಟಿಯು ಸಮ್ಮೇಳನ, ಬೆಂಗಳೂರು
- **ಸೆಪ್ಟೆಂಬರ್ 23,24,2003**
  ವಿಚಾರ ಸಂಕಿರಣ
  ಕರ್ನಾಟಕ ಚರಿತ್ರೆಯ ಮೇಲಿನ ಇತ್ತೀಚಿನ ಬೆಳವಣಿಗೆಗಳು
  ಕನ್ನಡ ಸಾಹಿತ್ಯಾ ಪರಿಷತ್ತು - ಪಂಪ ಸಭಾಂಗಣ, ಬೆಳಿಗ್ಗೆ 10 ಕ್ಕೆ
  ಅಧ್ಯಕ್ಷತೆ: ಕಾಂ.ಹೆಚ್.ಜೆ.ಲಕ್ಕಪ್ಪಗೌಡ
  ಉದ್ಘಾಟನೆ: ಪ್ರೊ. ಎಸ್.ಶೆಟ್ಟರ್, ಖ್ಯಾತ ಚರಿತ್ರಾಕಾರರು
- **ಸೆಪ್ಟೆಂಬರ್ 25, 2003**
  ದಕ್ಷಿಣ ಕನ್ನಡ ಜಿಲ್ಲಾ ಸಿಐಟಿಯು ಸಮ್ಮೇಳನ ಬೋಳೂರು, ಮಂಗಳೂರು
- **ಸೆಪ್ಟೆಂಬರ್ 27,28, 2003**
  ಬೆಂಗಳೂರು ಜಿಲ್ಲಾ ಸಿಐಟಿಯು ಸಮ್ಮೇಳನ
  ಅರಸೋಜಿ ರಾವ್ ಛತ್ರ
  ಮಿನರ್ವ ಸರ್ಕಲ್ ಬಳಿ
  ಬೆಂಗಳೂರು.

ದಲಿತರ ಮೇಲೆ ಮುಂದುವರೆದ ಬಹಿಷ್ಕಾರ, ಯಾರ ಪರ ಈ ಸರ್ಕಾರ?

ಕರ್ನಾಟದಲ್ಲಿ ಜಾರಿಯಲ್ಲಿರುವುದು ಯಾವ ಕಾನೂನುಗಳು? ಸಂವಿಧಾನದತ್ತವಾದ ಹಕ್ಕುಗಳನ್ನು ಆಧಾರಿಸಿದ, ನಾಗರೀಕ ಕಾನೂನುಗಳೇ? ಅಥವಾ ಶ್ರೀಮಂತರ, ಭೂಮಾಲಿಕ ಸ್ಥಾಪಿತ ಹಿತಾಸಕ್ತಿಗಳು ತೀರ್ಮಾನಿಸುವ ರೈತರ ಕಾನೂನುಗಳೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ

ಕಳೆದ ನಾಲ್ಕಾರು ತಿಂಗಳಿನಿಂದಲೂ ಗುಲಬರ್ಗಾ ಜಿಲ್ಲೆಯ ನಿಂಬರ್ಗಾ ಗ್ರಾಮದಲ್ಲಿ ನಡೆಯುತ್ತಿರುವ ಘರ್ಷಣೆ-ವಿವಾದದ ಬಗ್ಗೆ ಗಮನಿಸುತ್ತಲೇ ಇದ್ದೇವೆ. ದಲಿತರು ಮತ್ತು ಸವರ್ಣೀಯರ ನಡುವೆ ವೈಷಮ್ಯ ಭುಗಿಲೆದ್ದು, ಘರ್ಷಣೆಗಳು ಸ್ಫೋಟಗೊಂಡಿವೆ. ಇದರ ಇತ್ಯರ್ಥಕ್ಕೆ ಹಲವು ಪ್ರಯತ್ನಗಳೇ ನಡೆದವು. ದಲಿತರ ಮೇಲೆ ಸಾಮಾಜಿಕ-ಆರ್ಥಿಕ ಬಹಿಷ್ಕಾರ ಸಾರಿದ್ದನ್ನು ವಿರೋಧಿಸಿ, ಅದನ್ನು ಹಿಂತೆಗೆಯಲು ಪೋಲೀಸ್ ಇಲಾಖೆ, ಸಚಿವರು ಸಮುದಾಯದ ಸಂಘಟನೆಗಳ ಪ್ರಯತ್ನಗಳು ನಡೆದು ಒಂದು ಅಭಿಪ್ರಾಯಕ್ಕೆ ಬರಲಾಗಿತ್ತು. ಆದರೆ ಇದಾವೂ ಕಾರ್ಯಾಚರಣೆಗೆ ಬರಲಿಲ್ಲ. ಈಗಲೂ ದಲಿತರಿಗೆ ಸಾಮಾಜಿಕ-ಆರ್ಥಿಕ ಬಹಿಷ್ಕಾರ ಮುಂದುವರಿದೇ ಇದೆ. ಭೂರಹಿತರಾಗಿರುವ ಕೃಷಿ ಕೂಲಿಕಾರರೇ ಅಧಿಕವಿರುವ ದಲಿತರನ್ನು ಕೂಲಿಗೆ ಕರೆಯುತ್ತಿಲ್ಲ. ಇದು ಉಸಿರುಗಟ್ಟಿಸುವ ಪರಿಸ್ಥಿತಿಯನ್ನು ನಿರ್ಮಿಸಿದೆ. ಸ್ವತಃ ದಲಿತರೇ ಆಗಿರುವ ಗೃಹಸಚಿವರು ಮಧ್ಯೆಪ್ರವೇಶಿಸಿದರೂ ಇತ್ಯರ್ಥವಾಗುತ್ತಿಲ್ಲವಂತೆ, ಅಂದರೆ ಈ ಮಧ್ಯಪ್ರವೇಶ ಎಂತಹದ್ದೀತು?. ಬಹಿಷ್ಕಾರದ ಈ ಅವಮಾನವೀಯ ದಬ್ಬಾಳಿಕೆಯನ್ನು ಎದುರಿಸಲಾರದಷ್ಟು ದುರ್ಬಲವೇ ಸರ್ಕಾರ. ಅಥವಾ ಆಳುವ ಪಕ್ಷದಲ್ಲಿಯೂ ಭೂಮಾಲಿಕರ ಹಿಡಿತವೇ ಮೇಲುಗೈ ಪಡೆದಿದೆಯೇ? ಅಲ್ಲಿನ ಕೆಲ ತಪ್ಪುಗಳನ್ನು ಹಿಡಿದು ದಲಿತ ವಿಭಾಗಕ್ಕೆ ಸೇರಿದವರ ಕೆಲವು ಅತಿರೇಕಗಳನ್ನು ಮುಂದೆ ಮಾಡಿ ಇಡೀ ಸಮುದಾಯದ ಬದುಕಿಗೆ ಸಂಚಕಾರ ತರುವುದು ಏನು ನ್ಯಾಯ?

ಹಾಗೆಯೇ ಗಂಗಾವತಿಯ ಮಕರಂಬ ಗ್ರಾಮದಲ್ಲಿಯೂ ಧಲಿತ ಸಮುದಾಯದ

ಈ ವಾರ ಕರ್ನಾಟಕ
ಒಂದು ನೋಟ
ಎಸ್ ವೈ ಗುರುಶಾಂತ್

ಬಳಕೆಗೆಂದು ನಿರ್ಮಿಸಲಾದ ಸಮುದಾಯ ಭವನದಲ್ಲಿ ಮೇಲ್ಜಾತಿ ಭೂಮಾಲಿಕ ದವಸಧಾನ್ಯ ಸಂಗ್ರಹಿಸಲು ಬಳಸುತ್ತಿರುವುದನ್ನು ಪ್ರಶ್ನಿಸಿದ ದಲಿತ ಯುವಕರನ್ನು ನಗ್ನವಾಗಿಸಿ ಕಂಬಕ್ಕೆ ಕಟ್ಟಿ ಹೊಡೆದ ಪ್ರಕರಣದಲ್ಲಿಯೂ ಅದೇ ಸ್ಥಿತಿಯಿದೆ. ಮೇಲ್ಜಾತಿ ಭೂಮಾಲಿಕರು ಹಾಕಿದ್ದ ಬಹಿಷ್ಕಾರ ಹಾಗೇ ಮುಂದೆವರಿದಿದೆ, ಅಂದರೆ ಭೂಮಾಲಿಕ ವರ್ಗದ ಅಟ್ಟಹಾಸದೆದುರು ಕಾನೂನು-ನಾಗರೀಕ ಸಂಹಿತೆಗಳ ಲೆಕ್ಕ ಇಲ್ಲದಂತಾಯಿತು.

ಇಂತಹ ದಿಗ್ಬಂದನಗಳಿಂದ ದುರ್ಬಲರು, ದಲಿತರು, ಅಲ್ಪಸಂಖ್ಯಾತರನ್ನು ದಬಾವಣೆ-ದೌರ್ಜನ್ಯ ನಡೆಸಿ ಹೇಳಿದಂತೆ ಕೇಳುವಾಗ ಹಾಗೇ ಸರ್ವಾಧಿಕಾರ ಸ್ಥಾಪಿಸುವ ಹುನ್ನಾರ ಇಲ್ಲಿ ಕಾಣುತ್ತದೆ. ಆದರೆ ಎಲ್ಲರಿಗೂ ಸಮಾನ ಹಕ್ಕು-ಅವಕಾಶ ಪ್ರತಿಪಾದಿಸುವ, ಪ್ರಮಾಣ ಮಾಡಿ ಅಧಿಕಾರಕ್ಕೆ ಏರಿದವರು ಅಂತಿಮವಾಗಿ ಅವರು ಕಾಪಾಡುವುದು ಯಾವ ವರ್ಗದ ಹಿತವನ್ನು? ಅದೇ ಭೂಮಾಲಿಕ ಬಂಡವಾಳಗಾರ, ಶ್ರೀಮಂತ ಸ್ಥಾಪಿತ ಹಿತಾಸಕ್ತಿಗಳನ್ನೇ ರಕ್ಷಿಸುವುದು.

ನಿಂಬರ್ಗಾ, ಮಕರಂಬಿ ಪ್ರಕರಣದಲ್ಲಿ ಸರ್ಕಾರ ದೃಢವಾದ ಕ್ರಮಗಳ ಮೂಲಕ ದಲಿತರ ಹಕ್ಕು ಬದುಕು ರಕ್ಷಿಸಬೇಕು. ಅಲ್ಲದೆ ಕನಿಷ್ಠ ಮಾನವೀಯತೆಯುಳ್ಳ, ಪ್ರಜಾಸತ್ತಾತ್ಮಕ ಶಕ್ತಿಗಳು, ಭಾಧಿತ ಜನತೆಯೊಂದಿಗೆ ಸಂಘರ್ಷಕ್ಕೆ ಇಳಿಯಬೇಕಾದುದು ಅನಿವಾರ್ಯ.

ಸಂಘಪರಿವಾರ ಹಬ್ಬಿಸುತ್ತಿರುವ ದಳ್ಳುರಿ

ಸಂಘ ಪರಿವಾರದ ಚಡ್ಡಿ ವೀರರು ಮತ್ತೆ ರಾಜ್ಯದಲ್ಲಿ ಹುರಿಗೊಂಡು ಕೊಳ್ಳಿ ಹಿಡಿದು ಬೀದಿಗಿಳಿದಿದ್ದಾರೆ. ತಮ್ಮ ಫ್ಯಾಸಿಸ್ಟ್ ಪಿತೂರಿಗೆ ಗಣಪತಿಯ ಉತ್ಸವವನ್ನು ಗುರಾಣಿಯಾಗಿಟ್ಟುಕೊಂಡು ಜನರಲ್ಲಿನ ಮುಗ್ಧ ಭಕ್ತಿಯನ್ನು ಬಳಸಿ ದ್ವೇಷ ಹಿಂಸೆಯನ್ನು ಹರಿಯಬಿಡುತ್ತಿದ್ದಾರೆ. ಶಿವಮೊಗ್ಗ, ಸಾಗರ, ಬೆಳಗಾಂ, ದ.ಕನ್ನಡದ ಕಲ್ಲಡಕ, ಮಂಗಳೂರು, ಸುಳ್ಯ, ಪುತ್ತೂರು.. ಹೀಗೆ ಬಹಳ ದೀರ್ಘವಾದ ಯೋಜನೆಯೇ ಇದ್ದಂತಿದೆ. ಶಿವಮೊಗ್ಗದ ರಾಜಬೀದಿ ಗಣಪತಿ ವಿಸರ್ಜನೆಯ ಸಮಯದಲ್ಲಿ ಏನಾದರೊಂದು ಕಿಡಿಗೇಡಿತನ ನಡೆಸಿ ಗಲಭೆ ಸೃಷ್ಟಿಸುವುದು ಹಿಂದಿನ ಇತಿಹಾಸ. ಅದಕ್ಕೆಂದೇ ಈ ಹಾದಿಯಲ್ಲಿ ಮೆರವಣಿಗೆ ಬೇಡವೆಂದ ಆಡಳಿತ ಹೇಳಿದ್ದು ಮುಂಜಾಗರೂಕತೆ ದೃಷ್ಟಿಯಿಂದ, ನಾಗರೀಕರ ಆಸ್ತಿ, ಜೀವ ಕಾಯುವ ಶಾಂತಿ ಸಂರಕ್ಷಣೆ ಬದ್ಧವಾದವರ ಜವಾಬ್ದಾರಿ ನಿಲುವು ನೋಡ. ಆದರೆ ಹಿಂದೂ ಮಹಾಸಭಾಕ್ಕೆ, ಬಿಜೆಪಿಗೆ ಗಣಪತಿಯ ವಿಸರ್ಜನೆಗಿಂತ ಕಾಲುಕೆರೆದು ವ್ಯಾಜ್ಯ ಹೂಡುವುದೇ ಪರಮ ಧ್ಯೇಯವಾಗಿರುವುದರಿಂದ ಅದೇ ಹಾದಿಯಲ್ಲೇ ಸಾಗಲೇಬೇಕೆಂಬ ಹಠ ಹಿಡಿದಿದ್ದಾರೆ.! ಸಾಗರದಲ್ಲಿಯೂ ಮೆರವಣಿಗೆಯ ಸಂದರ್ಭದಲ್ಲಿ ಕಲ್ಲುತೂರಾಟ ನಡೆದು ಬಳಿಕ ಹಿಂಸೆ, ಹುಟ್ಟುಹಾಕಿ ಆಸ್ಥಿ ಪಾಸ್ತಿಗೆ (ಅಲ್ಪಸಂಖ್ಯಾತ ಹಾಗೂ ಕಾಂಗ್ರೆಸ್ ಮುಖಂಡರ) ಬೆಂಕಿ ಇಟ್ಟು ನಾಶ ಮಾಡಿದ್ದಾರೆ. ಕರ್ಫ್ಯೂ ವಿಧಿಸಲಾಗಿದೆ. ಈಗಾಗಲೇ ಬೆಳಗಾಂನಲ್ಲಿಯೂ ಗಲಭೆ ಆಗಿದೆ.

ಕೊಡಗಿನ ಸೋಮವಾರ ಪೇಟೆಯಲ್ಲಿಯೂ... ಇಲ್ಲಿ ಒಬ್ಬ ವ್ಯಕ್ತಿಯ ಕೊಲೆಯೇ ನಡೆದುಹೋಗಿದೆ. ಇದನ್ನೇ ಬಳಸಿ ಬಿಜೆಪಿಗೆ ಬಜರಂಗ ದಳದ ಪುಂಡ ಪಡೆಗಳು ಇಡೀ ಪಟ್ಟಣದಲ್ಲಿ ಹಿಂಸೆಯನ್ನು ನಡೆಸಿ ಅಪಾರ ಪ್ರಮಾಣದಲ್ಲಿ ಅಲ್ಪಸಂಖ್ಯಾತರ ಸಾರ್ವಜನಿಕರ ಆಸ್ತಿಯನ್ನು ನಾಶಮಾಡಿ ಲೂಟಿ ಮಾಡಿದ್ದಾರೆ. ಧಾಳಿ ನಡೆಸಿದ್ದಾರೆ. ಈ ಹಿಂದೆಯೂ ಬಜರಂಗದಳ- ವಿಶ್ವಹಿಂದೂ ಪರಿಷತ್ ...ಂಡರ ಪಡೆ ಕೊಡಗಿಗೆ ಬೆಂಕಿ ಇಟ್ಟು, ಅಲ್ಪಸಂಖ್ಯಾತರ ಮೇಲೆ ಅಮಾನುಷ ಧಾಳಿ ನಡೆಸಿ, ಆಸ್ತಿ ಪಾಸ್ತಿ ಧ್ವಂಸ ಮಾಡಿದ್ದಲ್ಲದೆ ಮಡಿಕೇರಿ ತಾಲೂಕಿನಲ್ಲಿ ಕೆಲವೆಡೆ ಅಲ್ಪಸಂಖ್ಯಾತರ ಅಂಗಡಿಗಳಲ್ಲಿ ಏನೂ ಖರೀದಿಸಬಾರದೆಂದು ಬಹಿಷ್ಕಾರವನ್ನು ಬಜರಂಗದಳ ಹಾಕಿತ್ತು. ಅದು ಪೊಲೀಸರ ಗಮನಕ್ಕೆ ತಂದರೂ, 8-10 ತಿಂಗಳಾದರೂ ಅದು ಹಾಗೇ ಮುಂದುವರಿದಿತ್ತು. ಕೊಡಗಿನ ಸಿದ್ದಾಪುರದಲ್ಲಿ ಬಜರಂಗದಳದ ಹಾವಳಿ ಹೆಚ್ಚುತ್ತಿದೆ.

ದ.ಕನ್ನಡ ಕಲ್ಲಡ್ಕದಲ್ಲಿ ಕ್ರಿಮಿನಲ್ ಬಿಜೆಪಿ ಮುಖಂಡರ ಮೇಲೆ ಕ್ರಮ ಜರುಗಿಸಿದ್ದನ್ನೇ ನೆಪವಾಗಿಸಿ ಕಳೆದ ಒಂದು ತಿಂಗಳಿನಿಂದ ಆ ಪ್ರದೇಶವನ್ನು ರಣರಂಗವಾಗಿಸಿ, ನಿಷ್ಠೂರ ಕ್ರಮ ಜರುಗಿಸಿದ ಎಸ್.ಪಿ. ಸೀಮಂತ್ ಸಿಂಗ್‌ರ ವರ್ಗಾವಣೆ ಮಾಡಬೇಕೆಂದು 12 ರಂದು ದ.ಕ. ಬಂದ್ ಮಾಡಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಕೋಮು ಸೌಹಾರ್ಧತೆ ಶಾಂತಿ ಕಾಪಾಡುವ ಧರ್ಮ ನಿರಪೇಕ್ಷತಾ ಶಕ್ತಿಗಳ ಮೇಲೆ, ಡಿ.ವೈ.ಎಫ್.ಐನ ಕಾರ್ಯಕರ್ತರ ಮೇಲೆ ಮಂಗಳೂರು - ವಿಟ್ಲದಲ್ಲಿ ಧಾಳಿನಡೆಸಿದ್ದಾರೆ.

ಇವೆಲ್ಲವೂ ನೆಲಕಚ್ಚುತ್ತಿರುವ ತಮ್ಮ ನೆಲೆ ಉಳಿಸಿಕೊಂಡು ಮುಂದಿನ ಚುನಾವಣೆಗಳಲ್ಲಿ ಗೆಲ್ಲಲು ಹೆಣಗುವ ಬಿಜೆಪಿಯ ತಂತ್ರ. ಬಜರಂಗದಳ-ವಿಶ್ವ ಹಿಂದೂ ಪರಿಷತ್ತಿನ ನಾಯಕರೂ ಹೋದಲ್ಲೆಲ್ಲಾ ಕರ್ನಾಟಕವನ್ನು ಇನ್ನೊಂದು ಗುಜರಾತ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಎಂತಹ ಅಪಾಯಕಾರಿ ಯೋಜನೆಗಳು ಇವರ ಬತ್ತಳಿಕೆಯಲ್ಲಿವೆ ಎಂಬುದನ್ನು ಸಾರಿ ಹೇಳುತ್ತದೆ.

ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ಧೃಡವಾದ ಕ್ರಮಗಳನ್ನು ಕೈಗೊಂಡು ಈ ಶಕ್ತಿಗಳನ್ನು ಮಟ್ಟ ಹಾಕಬೇಕು. ಇಂತಹ ಕೋಮುವಾದಿಗಳು ಯಾರೇ ಆಗಿರಲಿ ಯಾವುದೇ ಧರ್ಮದ ಸೋಗು ಹಾಕಿರಲಿ ನಿಷ್ಠೂರವಾಗಿ ಕಾನೂನು ಜರುಗಿಸಬೇಕು. ಶಾಂತಿ ಸಾಮರಸ್ಯ ಕಾಪಾಡಬೇಕು. ಜನತೆಗೆ ಅದರಲ್ಲೂ ಅಲ್ಪ ಸಂಖ್ಯಾತರಿಗೆ, ಕೋಮುವಾದಿ ಶಕ್ತಿಗಳನ್ನು ಎದುರಿಸುವ ಧರ್ಮ ನಿರಪೇಕ್ಷಿತ ಶಾಂತಿ ಪ್ರಿಯ ಶಕ್ತಿಗಳಿಗೆ ರಕ್ಷಣೆ ನೀಡಬೇಕು. ಇದೆಲ್ಲಕ್ಕೂ ಮುಖ್ಯವಾಗಿ ಕರ್ನಾಟಕದ ಜನತೆ ಬಿಜೆಪಿ ಸಂಘಪರಿವಾರದ ದುಷ್ಟ ಯೋಜನೆ ಅರಿತು ಅಂತಹ ಶಕ್ತಿಗಳಿಗೆ ಬುದ್ಧಿ ಕಲಿಸಬೇಕು.



ವಂಚಕ ಕೃಷ್ಣರ ಜನಘಾತುಕ ವರಸೆಗಳು

ಮುಖ್ಯಮಂತ್ರಿ ಕೃಷ್ಣರವರಿಗೆ ಈಗ ರೈತರದ್ದೇ ಚಿಂತೆ. ಹೋದಲ್ಲಿ, ಬಂದಲ್ಲಿ ಅವರ ಕುರಿತೇ ಮಾತನಾಡುತ್ತಾರೆ. ಚಿಂತಿಸುತ್ತಾರೆ. ಹೈಟೆಕ್ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಯನ್ನು ಅನುಭವಿಸಲು ಹಾತೊರೆಯುವ, ಅವರು ಕೋಟ್ಯಾಂತರ ಕೃಷಿಕರು ಓಟುಗಳಿಗಾಗಿ ಕಂಡಾಗ ಕರಗಿ ಮಣ್ಣಿನ ಮಗನಾಗಿ ಕಾಣಿಸಿಕೊಂಡುಬಿಡುತ್ತಾರೆ. ಮ್ಲಾನತೆ -ಮೌನವನ್ನು ನಟಿಸಿ ನಿಟ್ಟುಸಿರುಬಿಡುತ್ತಾರೆ.

ಕೃಷಿಯ ಬಿಕ್ಕಟ್ಟು-ಬೆಳೆಹಾನಿ, ಸಾಲದ ಕುಣಿಕೆಯಲ್ಲಿ ಆತ್ಮಹತ್ಯೆಯ ಕೊನೆಗೆ ಸಾಯುತ್ತಿರುವ ರೈತರ ದುರಂತ ಸ್ಥಿತಿ ಮುಂದುವರಿದಿದೆ. ಈಗ ಬಿಕ್ಕಟ್ಟಿನ ಹೊಸ ಸ್ವರೂಪದ ದ್ಯೋತಕವಾಗಿ ಆತ್ಮಹತ್ಯೆಯ ಸರಣಿ ಕುಟುಂಬಗಳನ್ನು ವ್ಯಾಪಿಸುತ್ತಾ 8-10 ರೈತರು ದಿನವೂ ಸಾಯುತ್ತಿದ್ದಾರೆ. ಈ ದುರಂತ ಸರಣಿ ಆರಂಭಗೊಂಡಾಗ ಮುಖ್ಯಮಂತ್ರಿಗಳು, ಸರ್ಕಾರ ಮಾತನಾಡಲೇ ಇಲ್ಲ. ಇದು 90 ಕ್ಕೂ ಅಧಿಕವಾಗಿ, ಮಾಧ್ಯಮಗಳು ಲೆಕ್ಕ ಕೊಡಲಾರಂಭಿಸಿದ ನಂತರ, ದೇಶ-ವಿದೇಶಗಳಲ್ಲಿಯೂ ಈ ಸರ್ಕಾರದ ನಿರ್ಲಕ್ಷ್ಯತನ ಟೀಕೆಗೀಡಾಗಬಹುದು ಎಂದಾಗ ಮುಖ್ಯಮಂತ್ರಿಗಳು ಬಾಯಿಬಿಟ್ಟಿದ್ದರು. ರೈತರನ್ನು ಉಳಿಸಲೆಂದೇ 856 ಕೋಟಿಯ ಪ್ಯಾಕೇಜ್ ಪ್ರಕಟಿಸಿದರು. ಖಾಸಗಿ ಲೇವಾದೇವಿ ನಿಯಂತ್ರಣಕ್ಕೆಂದು ಸುಗ್ರೀವಾಜ್ಞೆ ಹೊರಡಿಸಿದರು. ಕಾಂಗ್ರೆಸ್ ಅಧ್ಯಕ್ಷ ಜನಾರ್ಧನ ಪೂಜಾರಿ ಪತ್ರಿಕಾಗೋಷ್ಠಿಯಲ್ಲಿ ಸಾಂತ್ವನ ಹೇಳಿದರು. ಜಾಹೀರಾತುಗಳು ಪ್ರಕಟಣೆಯಾದವು. ಆದರೇನು? ರೈತರ 'ಹತ್ಯೆ' ನಿಲ್ಲಲಿಲ್ಲ. ಈ ಸರ್ಕಾರದ ಡೋಂಗಿತನ ಹೆಚ್ಚು ಹೆಚ್ಚಾಗಿ ಬಯಲಾಗುತ್ತಲೇ ಇದೆ. ಈಗ ಪೊಲೀಸ್ ಮಹಾ ನಿರ್ದೇಶಕ ಕಛೇರಿಯಿಂದ ಅಂಕಿ ಅಂಶಗಳ ಪಟ್ಟಿಯೊಂದನ್ನು ಬಿಡುಗಡೆಗೊಳಿಸಿದ್ದಾರೆ. ಕಳೆದ 1996 ರಿಂದ 2000 ಇಸ್ವಿಯಲ್ಲಿ 56,790 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರಂತೆ. ಅದರಲ್ಲಿ 10,950 ರೈತರಂತೆ. ಅಂದರೆ ಶೇ.20, ಗೃಹಿಣಿಯರದ್ದು ಶೇ17.93 (10,182) ಈ ಅಂಕಿ ಅಂಶಗಳನ್ನು ನೀಡುವ ಉದ್ದೇಶ ಒಂದೇ... ಅದೇನೆಂದರೆ ರೈತರ ಆತ್ಮಹತ್ಯೆ'ಯ ಬಗ್ಗೆ ದಿಗಲುಗೊಳ್ಳಬೇಕಿಲ್ಲ. ನೋಡಿ ಎಷ್ಟೊಂದು ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಈ ರೈತರದ್ದೇನು ಮಹಾ ಎಂದು ಹೇಳುವುದು. ಹೇಗಿದೆ ಕೃಷ್ಣರ ಸಾಂತ್ವನ! ಆದರೆ ಇದೇ ಸರ್ಕಾರ ಕಳೆದ ನಾಲ್ಕು ತಿಂಗಳಲ್ಲಿ ಆತ್ಮಹತ್ಯೆಗೀಡಾದ ರೈತರ ಸಂಖ್ಯೆ 208. ಅದರಲ್ಲಿ ಬೆಳೆಸಾಲ ಮಾಡಿ ಸತ್ತವರು ಕೇವಲ 43 ಮಾತ್ರ!

ಈ ವಂಚಕ ಕೃಷ್ಣ ಈ ಹಿಂದೆಯೂ ಆತ್ಮಹತ್ಯೆ ಮಾಡಿಕೊಂಡವರ ಬಗ್ಗೆ ಅಧ್ಯಯನಕ್ಕೆಂದು ಡಾ. ವೀರೇಶ್ ಸಮಿತಿ ರಚಿಸಿತು. ಆ ವಿದ್ವಾಂಸ ಮಹಾಶಯರು ಬೆಳೆಸಾಲ - ಕೃಷಿ ಬಿಕ್ಕಟ್ಟುಗಳನ್ನು ಸಾರಾಸಗಟು ತಿರಸ್ಕರಿಸಿ, ಮದ್ಯಸೇವನೆ, ಜೂಜಾಟದಂತಹ ದುಷ್ಕೃತ್ಯಗಳೇ ಇದಕ್ಕೆ ಪ್ರಮುಖ ಕಾರಣವೆಂದು ಅದ್ಭುತ ಶೋಧನೆ ನಡೆಸಿತು. ಪರಿಹಾರದ ಹಣಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದೂ ಹೇಳಿತು. ಇದರ ವಿರುದ್ಧ ಇಡೀ ರಾಜ್ಯದಲ್ಲೇ ತೀವ್ರ ಸ್ವರೂಪದ ಪ್ರತಿಭಟನೆ ಚಳುವಳಿ, ಟೀಕೆಗಳು ಬಂದಿದ್ದರಿಂದ ಅದನ್ನು ಒಪ್ಪಿಕೊಳ್ಳಲು ಸರ್ಕಾರ ಹಿಂದೇಟು ಹಾಕಿತು. ಆದರೆ ತನ್ನ ಮನದಾಳದ ಅಭಿಪ್ರಾಯವನ್ನು, ಜನರ ಬಗೆಗಿನ ಕಡು ತಿರಸ್ಕಾರದ ದ್ವೇಷವನ್ನು ಹೀಗೆ ತೋರಿಸಿತು. ಇದರ ಬೆನ್ನಲ್ಲೇ ಹೈಟೆಕ್ ಜೂಜಾಟದ ಕೇಂದ್ರಗಳಾದ ಪ್ಲೇವಿನ್, ಸಿಂಗಲ್ ನಂಬರು ಲಾಟರಿಗಳನ್ನು, ಸಾರಾಯಿ-ಮದ್ಯದ ಅಂಗಡಿಗಳನ್ನು ತೆರೆಯಲು ಯಥೇಚ್ಛ ಅವಕಾಶ ಕಲ್ಪಿಸಿ, ಅದಕ್ಕೆ ಸಾಮಾಜಿಕ ಪ್ರಗತಿಯ ಸೋಗು ಹಾಕಲು ಹೆಣಗಲಾಯಿತು. ಈ ಎರಡನೇ ಹಂತದ ಆತ್ಮಹತ್ಯೆಯ ಸರಣಿ ಆರಂಭವಾದಾಗ ಧಾರುಣ ಸತ್ಯದಿಂದಲಾದರೂ ಪಾಠ ಕಲಿಯದೇ, ತನ್ನ ದುಷ್ಟ ವಿನಾಶಕಾರಿ ನೀತಿಗಳನ್ನು ಕಿಂಚಿತ್ತೂ ಬದಲಾಯಿಸಿಕೊಳ್ಳದೇ ತತ್ತರದ ಈ ಸನ್ನಿವೇಶದಲ್ಲಿ, ಮಾನಸಿಕ ತಜ್ಞರು, ಬುದ್ಧಿಜೀವಿಗಳೊಂದಿಗೆ ಆತ್ಮಹತ್ಯೆಯ ಕಾರಣವನ್ನು ಹುಡುಕಲು ಸಮಾಲೋಚನೆಯ ನಾಟಕಕ್ಕೆ ಮುಂದಾಗಿದೆ. ಪೊಲೀಸ್ ಇಲಾಖೆ ಮೂಲಕ ಅಂಕಿ ಸಂಖ್ಯೆಗಳ ಬರೆ ಎಳೆಯುತ್ತಿವೆ. ಅದಕ್ಕಾಗಿ 'ಹೌದಪ್ಪ'ಗಳನ್ನು ಅಣಿನೆರೆಸುತ್ತಿದೆ. ಪ್ರಜ್ಞೆ ಇರುವ ಜನ, ಕಾಳಜಿ ಕಿಂಚಿತ್ತಾದರೂ ಇರುವವರು ಇಂತಹ ಸಂಚಿರಗಳನ್ನು ಬಹಿಷ್ಕರಿಸಬೇಕು. ಛೀಮಾರಿ ಹಾಕಬೇಕು.

ವಿಟ್ಲ : ಬಜರಂಗದಳದ ಧಾಳಿ ಕೋಮುಗಲಭೆ ಹೆಬ್ಬಿಸುವ ತಂತ್ರ ವಿಫಲ

ಅಮಾಯಕರ ಮೇಲೆ ಹಲ್ಲೆ ನಡೆಸಿ ಅದಕ್ಕೆ ಕೋಮುಬಣ್ಣ ಹಚ್ಚಲು ಬಜರಂಗ ದಳ ಯತ್ನಿಸಿತು. ಆದರೆ ಪ್ರಗತಿಪರ ಶಕ್ತಿಗಳ ಮುಂಜಾಗರೂಕತೆಯಿಂದ ವಿಫಲವಾಯಿತು.

'ವಿಟ್ಲ' ದ.ಕ. ಜಿಲ್ಲೆಯ ಶಾಂತಿ ಸೌಹಾರ್ದತೆಯ ತವರೂರು ಎಂದು ಕರೆದರೆ ತಪ್ಪಾಗಲಾರದು. ಹಲವಾರು ವರ್ಷಗಳಿಂದ ಇಲ್ಲಿನ ಜನತೆ ಹಿಂದೂ-ಮುಸ್ಲಿಂ ಬೇಧಭಾವವನ್ನು ಮರೆತು ಸಹೋದರತೆಯಿಂದ ಬದುಕಿರುವುದೇ ಇದಕ್ಕೆ ಸಾಕ್ಷಿ. ಇಂತಹ ಸಾಮರಸ್ಯವನ್ನು ಕದಡಬೇಕು, ಜಾತಿಧರ್ಮದ ಆಧಾರದಲ್ಲಿ ಜನತೆಯನ್ನು ವಿಭಜಿಸಬೇಕೆಂದು ಸಂಘ ಪರಿವಾರದ ದುರುಳರು ಷಡ್ಯಂತ್ರವನ್ನು ರೂಪಿಸುತ್ತಲೇ ಬಂದರು. ವಿಟ್ಲ ವಿಧಾನಸಭಾ ಕ್ಷೇತ್ರದಲ್ಲಿ ಕಲ್ಲಡ್ಕ ಮತ್ತು ಫರಂಗಿ ಪೇಟೆಯಲ್ಲಿ ಈಗಾಗಲೇ ಜನತೆಯನ್ನು ಇಬ್ಭಾಗಗೊಳಿಸಿ ಕೋಮು ಘರ್ಷಣೆ ನಿರಂತರವಾಗಿ ನಡೆಯುತ್ತಲೇ ಇದೆ. ಆದರೆ ಈ ಕೋಮುವಾದಿಗಳಿಗೆ ವಿಟ್ಲದಲ್ಲಿ ಮಾತ್ರ ಸಾಧ್ಯವಾಗಲಿಲ್ಲ. ಏನಾದರೂ ಮಾಡಿ ವಿಟ್ಲದಲ್ಲಿ ಗಲಭೆಯನ್ನು ಹಬ್ಬಿಸಲು ಮುಗ್ಧ ಹಿಂದೂ ಯುವಕರನ್ನು ಒಟ್ಟು ಸೇರಿಸಿ ತಲೆಗೆ ಕೋಮುವಿಷಗಳು ತಲೆ ಎತ್ತಿದ್ದವು. ಕ್ರಮೇಣ ಒಂದಲ್ಲ ಒಂದು ರೀತಿಯ ಘಟನೆಗಳು ಕಳೆದ ಐದಾರು ತಿಂಗಳಿಂದ ನಿರಂತರವಾಗಿ ನಡೆದವು. ದ್ವೇಷಗಳು ಭುಗಿಲೆದ್ದವು. ಹಿಂದೂ ಸಮಾಜೋತ್ಸವವನ್ನು ನಡೆಸಿ, ಅಲ್ಲಿಯೂ ತೊಗಾಡಿಯಾ ಸಂತತಿಯವರು ವಿಷ ಕಕ್ಕಿದರು.

ಡಿವೈಎಫ್ಐ ಪ್ರವೇಶ ....

ಒಟ್ಟಿನಲ್ಲಿ ಭಯದ ವಾತಾವರಣ ವಿಟ್ಲದಲ್ಲಿ ರೂಪುಗೊಂಡಂತೆ, ಶಾಂತಿ- ಪ್ರಿಯ ಜನತೆ ಅದರಲ್ಲೂ ಯುವಜನ ಡಿವೈಎಫ್ಐವೊಂದೇ ಇದಕ್ಕೆ ಪರ್ಯಾಯ ದಾರಿ ಎಂದು ಚಿಂತಿಸಿ ವಿಟ್ಲದಲ್ಲಿ ಡಿವೈಎಫ್ಐನ ಶ್ವೇತಪತಾಕೆಯನ್ನು ಹಾರಿಸಿದರು. ಕೇವಲ 2 ತಿಂಗಳ ಅವಧಿಯಲ್ಲೇ ಅಸಂಖ್ಯಾತ ಯುವಕರ ಆಶಾಕಿರಣವಾಗಿ ಹೊರಹೊಮ್ಮಿತು. ದೊಡ್ಡ ಸಂಖ್ಯೆಯ ಕಾರ್ಯಕರ್ತರ ಪಡೆಯೇ ಡಿವೈಎಫ್ಐಗಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಕಂಡು ಅಲ್ಲಿನ ಕೋಮುವಾದಿಗಳಿಗೆ ಹಾಗೂ ಸ್ಥಾಪಿತ ಹಿತಾಸಕ್ತಿಗಳಿಗೆ ನಡುಕವುಂಟಾಯಿತು. ಡಿವೈಎಫ್ಐಯನ್ನು ಮಟ್ಟಹಾಕಲು ಪಿತೂರಿ ನಡೆಸಿದರು. ಇದರ ಭಾಗವಾಗಿಯೇ ಡಿವೈಎಫ್ಐ ಕಾರ್ಯಕರ್ತರಾದ ಇಬ್ರಾಹಿರವರ ಮೇಲೆ ಹಲ್ಲೆ ನಡೆಯಿತು.

ಘಟನೆಯ ಹಿನ್ನಲೆ....

ಸೆಪ್ಟೆಂಬರ್ 3 ರಂದು ಸಂಜೆ ಇಬ್ರಾಹಿಂರವರು ತಮ್ಮ ಮನೆಯಿಂದ ವಿಟ್ಲ ಪೇಟೆಗೆ ಹೋಟೆಲ್ ನೌಕರಿ ನಿಮಿತ್ತ ಬಸ್ಸಿನಲ್ಲಿ ಬರುತ್ತಿರಬೇಕಾದರೆ ಬಸ್ಸಿನಲ್ಲಿದ್ದ ಸುದರ್ಶನ್, ರವಿ, ಜಯಚಂದ್ರ ಕೊಟ್ಟಾರಿ ಎಂಬ 3 ಮಂದಿ ಭಜರಂಗದಳದ ಸದಸ್ಯರು ವಿನಾಕಾರಣ ಮುಸ್ಲಿಂ ವಿರುದ್ಧ ಅವಹೇಳನ ಮಾಡುತ್ತಾ, ಅಶ್ಲೀಲವಾಗಿ ಮಾತನಾಡುತ್ತಾ ಹತ್ತಿರದಲ್ಲೇ ಕುಳಿತುಕೊಂಡಿದ್ದ ಇಬ್ರಾಹಿಂರವರಿಗೆ ಕಿರುಕುಳ ಕೊಡಲು ಪ್ರಾರಂಭಿಸಿದರು. ಇದನ್ನು ತಾಳಲಾರದೆ ಇಬ್ರಾಹಿಂರವರು ಬಸ್ಸಿನ ಹಿಂಬದಿಸೀಟಿನಲ್ಲಿ ಕುಳಿತುಕೊಳ್ಳಲು ಹೋದಾಗ ಅಲ್ಲಿಗೂ ವಕ್ಕರಿಸಿದ ಈ ಭಜರಂಗಿಗಳು ಹಲ್ಲೆ ನಡೆಸಿದರು. ಪಕ್ಕದಲ್ಲಿದ್ದ ಮುಸ್ಲಿಂ ಮಕ್ಕಳ ತಲೆಯಲ್ಲಿದ್ದ ಟೋಪಿಯನ್ನು ತೆಗೆದು ಸಣ್ಣ ಮಕ್ಕಳಿಗೂ ಉಪದ್ರ ಮಾಡಲು ಶುರು ಮಾಡಿದರು. ಬಸ್ ವಿಟ್ಲ ಪೇಟೆಯನ್ನು ತಲುಪುತ್ತಿದ್ದಂತೆ ಇದೇ ಭಜರಂಗಿಗಳು ಇಬ್ರಾಹಿಂರವರನ್ನು ಬಸ್ಸಿನಿಂದ ಎಳೆದು ಯದ್ವಾತದ್ವಾ ಥಳಿಸಿದರು. ಪೊಲೀಸರಿಗೆ ದೂರು ನೀಡಿದ್ದರಿಂದ ಆರೋಪಿಗಳನ್ನು ಕೂಡಲೇ ಬಂಧಿಸಿ ಕಾನೂನು ಕ್ರಮ ಕೈಗೊಂಡಿರುವುದು ಶ್ಲಾಘನೀಯ.

ಈ ವಿಷಯ ತಿಳಿಯುತ್ತಿದ್ದಂತೆ ವಿಟ್ಲ ಪೇಟೆಯಲ್ಲಿ ಯುವಕರು ದೊಡ್ಡ ಸಂಖ್ಯೆಯಲ್ಲಿ ಜಮಾಯಿಸಿದರು. ಸಂಜೆಯ ಹೊತ್ತಿಗೆ ಜನತೆ ಭಜರಂಗಿಗಳ ಕೃತ್ಯದ ಭಯದಿಂದ ಅಂಗಡಿ ಮುಂಗಟ್ಟುಗಳನ್ನೆಲ್ಲಾ ಬಂದ್ ಮಾಡಿದರು. ಕೂಡಲೇ ವಿಷಯ ತಿಳಿದ ಡಿವೈಎಫ್ಐ ನಾಯಕರು ಘಟನೆ ಕೋಮುಗಲಭೆಗೆ ತಿರುಗದಂತೆ ತಮ್ಮ ಸಮಯಪ್ರಜ್ಞೆ ಮೆರೆದರು. ಡಿವೈಎಫ್ಐ ನಾಯಕರಾದ ಮಹಮ್ಮದ್ ಇಕ್ಬಾಲ್, ವಸಂತ



ಎಸ್., ಕೆ.ಎಂ.ಲತೀಫ್ ಪರ್ತಿಪ್ಪಾಡಿಯವರು ಮಧ್ಯ ಪ್ರವೇಶಿಸಿ ಉದ್ರಿಕ್ತ ಯುವಕರನ್ನು ಸಮಾಧಾನ ಪಡಿಸಿದರು.

ಸತ್ಯಾಸತ್ಯತೆ ಹೀಗಿದ್ದರೂ ಮರುದಿನ ಪತ್ರಿಕೆಗಳಂತೂ ಇದಕ್ಕೆ ರೆಕ್ಕಪುಕ್ಕ ಜೋಡಿಸಿ, ಕೋಮು ಬಣ್ಣ ಲೇಪಿಸಿ ಏನೇನೋ ಬರೆದು ಜಿಲ್ಲೆಯ ಜನತೆಯನ್ನು ದಾರಿ ತಪ್ಪಿಸಿದವು. ಕೋಮು ವಾದಿಗಳ ತುತ್ತೂರಿಯಂತೆ ಪ್ರತಿಪಾದಿಸಿದ ಕೆಲವು ಪತ್ರಿಕೆಗಳ 'ಪತ್ರಿಕಾ ಧರ್ಮ'ವಂತೂ ವಿಷಾದನೀಯವಾಗಿದೆ.

ತುರ್ತು ಕಾರ್ಯತಂತ್ರ

ಇದನ್ನೆಲ್ಲಾ ಕಂಡು ಡಿವೈಎಫ್ಐ ಮಾತ್ರ ಸುಮ್ಮನೆ ಕೂರಲಿಲ್ಲ. ಮರುದಿನ ಬೆಳಿಗ್ಗೆ ವಿಟ್ಲ ಡಿವೈಎಫ್ಐ ಕಚೇರಿಯಲ್ಲಿ ನೂರಾರು ಯುವಕರು ಸಭೆ ಸೇರಿ, ಮುಂದಿನ ದಿನಗಳಲ್ಲಿ ಅಂತಹ ಘಟನೆ ಪುನರಾವರ್ತಿಸದಂತೆ ಸೌಹಾರ್ದತೆಯನ್ನು ಬಲಪಡಿಸಬೇಕೆಂದು ತೀರ್ಮಾನಿಸಿದರು. ಮರುದಿನವೇ ಸೌಹಾರ್ದ ಮೆರವಣಿಗೆ ಹಾಗೂ ಸಾರ್ವಜನಿಕ ಸಭೆಯನ್ನು ನಡೆಸಬೇಕೆಂದು ಅಭಿಪ್ರಾಯ ಪಡಲಾಯಿತು. ಅತ್ಯಲ್ಪ ಕಾಲಾವಧಿಯ ತಯಾರಿಯೊಂದಿಗೆ ನಿರೀಕ್ಷೆಗೂ ಮೀರಿ ಕಾರ್ಯಕ್ರಮವು ಯಶಸ್ವಿಯಾಯಿತು.

ನಿರೀಕ್ಷೆಗೂ ಮೀರಿ ಜನತೆಯ ಸ್ಪಂದನ

ಅಂದು (5.9.2003) ಡಿವೈಎಫ್ಐ ನೇತೃತ್ವದಲ್ಲಿ ಪ್ರಪ್ರಥಮ ಬಾರಿಗೆ ವಿಟ್ಲದಲ್ಲಿ ಮೆರವಣಿಗೆ ಹಾಗೂ ಸಾರ್ವಜನಿಕ ಸಭೆ. 250 ಕ್ಕೂ ಮೀರಿದ ಯುವಜನರು ನಾಗರೀಕರು 'ಶಾಂತಿ ಸೌಹಾರ್ದತೆ ಚಿರಾಯುವಾಗಲಿ, ನಮ್ಮಲ್ಲಿಲ್ಲ ಹಿಂದೂ ರಕ್ತ-ಮುಸ್ಲಿಂ ರಕ್ತ-ಕ್ರೈಸ್ತ ರಕ್ತ, ನಮ್ಮಲ್ಲಿರುವುದು ಮಾನವ ರಕ್ತ, ಮಾನವೀಯತೆ ಚಿರಾಯುವಾಗಲಿ ಮುಂತಾದ ಘೋಷಣೆಗಳನ್ನು ಕೂಗುತ್ತಾ ವಿಟ್ಲ ಪೊಲೀಸ್ ಠಾಣಾ ಮುಂಭಾಗದಲ್ಲಿ ಜಮಾಯಿಸಿದರು. ಕಾರ್ಯಕ್ರಮವನ್ನು ನೋಡಲೆಂದೇ ನೂರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಮೆರವಣಿಗೆ ಬರುವುದಕ್ಕಿಂತ ಮೊದಲೇ ಸೇರಿದ್ದರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಡಿವೈಎಫ್ಐ ಮಾಜಿ ಜಿಲ್ಲಾಧ್ಯಕ್ಷರಾದ ಯಾದವ ಶೆಟ್ಟಿ, ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಸುಕುಮಾರ್, ವಿಟ್ಲದ ಹಿರಿಯ ಕಾರ್ಮಿಕ ಮುಖಂಡರಾದ ಎ.ರಾಮಣ್ಣರವರು ಮಾತನಾಡುತ್ತಾ ಸಂಘ ಪರಿವಾರದ ಕೋಮು ಷಡ್ಯಂತ್ರವನ್ನು ಬಹಿರಂಗವಾಗಿ ಟೀಕಿಸುತ್ತಾ, ಹಲ್ಲೆ ಪ್ರಕರಣವನ್ನು ಖಂಡಿಸಿದರು.

ಇಲ್ಲೂ ಕಾಂಗ್ರೆಸ್‌ನ ಇಬ್ಬಂದಿತನ ಪ್ರದರ್ಶನ

ವಿಷಯ ತಿಳಿದ ಕಾಂಗ್ರೆಸ್ ನಾಯಕರು ಸ್ಥಳಕ್ಕೆ ಧಾವಿಸಿದರೂ, ತೇಪೆ ಹಚ್ಚುವ ಕೆಲಸ ನಿರ್ವಹಿಸಿದರೇ ಹೊರತು ಸಂಬಂಧಪಟ್ಟ ಆರೋಪಿಗಳ ವಿರುದ್ಧ ಚಕಾರವೆತ್ತಲಿಲ್ಲ. ಘಟನೆಯನ್ನು ಖಂಡಿಸಿ ಹೋರಾಟವೆಲ್ಲಾ ನಡೆಸಬೇಡಿ, ಅದು ನಿರರ್ಥಕೆಂದು' ಯುವಕರಿಗೆ ಉಪದೇಶ ನೀಡಿದರು. ಇದರಿಂದ ಕುಪಿತಗೊಂಡ ಯುವಕರು ಕಾಂಗ್ರೆಸ್ ವಿರುದ್ಧವೇ ಕಿಡಿಕಾರಿದರು. 'ಎಂ.ಡಿ. ಜಬ್ಬಾರ್‌ರಂತಹ (ತಾಲ್ಲೂಕು ಪಂಚಾಯತ್ ಅಧ್ಯಕ್ಷರು) ನಾಯಕರ ಹತ್ಯೆ ನಡೆದಾಗಲೂ ಕಿಂಚಿತ್ತೂ ಸ್ಪಂದಿಸದ ಕಾಂಗ್ರೆಸ್ ನಮ್ಮಂತಹ ಸಾಮಾನ್ಯ ಕಾರ್ಯಕರ್ತರು ಸತ್ತರೆ ಸ್ಪಂದಿಸುವುದು ಎಂದು ಪ್ರಶ್ನಿಸಿದರು. ಕೋಮುವಾದಿಗಳ ಪ್ರಚೋದನಾತ್ಮಕ, ಕ್ರಿಮಿನಲ್ ಕೃತ್ಯಗಳಿಂದ ಉದ್ರಿಕ್ತಗೊಳಿಸಲು ಯತ್ನಿಸಿದರೂ, ಡಿವೈಎಫ್ಐ ನೇತೃತ್ವದಲ್ಲಿ ಶಾಂತಿ, ಸೌಹಾರ್ದತೆ ರಕ್ಷಿಸಲು ಪಣ ತೊಡಲಾಯಿತಲ್ಲದೇ, ಗೂಂಡಾಗಿರಿ ವಿರುದ್ಧ ಪ್ರತಿಭಟನೆಯ ಎಚ್ಚರಿಕೆಯೂ ಮೂಡಿಬಂತು.

ನಿಷಿ, ಮಂಗಳೂರು

ದೇವದಾಸಿ ಮಹಿಳೆಯರಿಂದ ಪುನರ್‌ವಸತಿಗೆ ಒತ್ತಾಯ

ಗುಲ್ಬರ್ಗಾ ಜಿಲ್ಲೆಯ ಅಳಂದ ತಾಲ್ಲೂಕಿನ ಚಿಂಚನಸೂರು ಗ್ರಾಮದ ದೇವದಾಸಿ ಮಹಿಳೆಯರು ಪುನರ್ವಸತಿ ಭಾಗವಾಗಿ ಭೂಮಿ ಖರೀದಿ, ಹೈನುಗಾರಿಕೆ, ಮನೆಗಳ ಮಂಜೂರಾತಿ, ಸ್ವಯಂ ಉದ್ಯೋಗಕ್ಕೆ ಸಹಾಯ ಮಂಜೂರಾತಿ ತಪ್ಪಿಸಬೇಕು, ಮಾಸಿಕ 500 ರೂ. ಜೀವನಾಂಶ ನೀಡಬೇಕೆಂದು ಒತ್ತಾಯಿಸಿ ಜಿಲ್ಲೆಯ ಹಿರಿಯ ಸಚಿವರಾದ ಧರ್ಮಸಿಂಗ್‌ರವರನ್ನು ದಿನಾಂಕ 10.9.03 ರಂದು ಭೇಟಿ ಮಾಡಿ ದೇವದಾಸಿ ಮಹಿಳೆಯರ ಸಂಘದ ನಿಯೋಗ ಚರ್ಚಿಸಿತು. ಶ್ರೀ ಧರ್ಮಸಿಂಗ್‌ರವರು ಮಾನ್ಯ ಸಮಾಜಕಲ್ಯಾಣ ಸಚಿವರು ಹಾಗೂ ಪುನರ್ವಸತಿ ಜವಾಬ್ದಾರಿ ಹೊತ್ತ ಪ.ಜಾತಿ/ಪಂಗಡದ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಒಳಗೊಂಡ ಒಂದು ಸಭೆಯನ್ನು ನಡೆಸಿದರು. ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಎ.ಕೃಷ್ಣಪ್ಪನವರು ಮಹಿಳೆಯರ ಪುನರ್ವಸತಿಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ದೇವದಾಸಿ ಮಹಿಳೆಯರ ಪುನರ್ ಸರ್ವೆ ನಡೆಸಿ ಬಿಟ್ಟುಹೋದವರ ಸೇರಿಸಿ ಪುನರ್ವಸತಿ ಮಾಡುವುದಾಗಿ ಭರವಸೆ ನೀಡಿದರು. ದೇವದಾಸಿ ಮಹಿಳೆಯರ ಈ ನಿಯೋಗದಲ್ಲಿ ಕೆಪಿಆರ್‌ಎಸ್‌ನ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಪ್ರ. ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಕೃಷಿ ಕೂಲಿಕಾರ ಸಂಘದ ಆಳಂದ ತಾಲ್ಲೂಕಿನ ಸಂಚಾಲಕರಾದ ಸುಧಾಮ ದನ್ನಿ ಹಾಗೂ ದೇವದಾಸಿ ಮಹಿಳೆಯರ ಕಲ್ಯಾಣ ಸಂಘದ ಹೀರಾಬಾಯಿ ಮಾವಿನಕರ್ ಮತ್ತಿತರರು ಭಾಗವಹಿಸಿದ್ದರು.

ಬೆಣ್ಣೆತೂರೆ ಯೋಜನೆ ಮುಳುಗಡೆ ಪ್ರದೇಶದ ನಿರಾಶ್ರಿತರಿಂದ ಪರಿಹಾರಕ್ಕಾಗಿ ಹೋರಾಟ

ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಭೂಮಿ ಮುಳುಗಡೆಯಾದ ರೈತರಿಗೆ ಆಶ್ವಾಸನೆ ನೀಡಿದಂತೆ ಎಕರೆಗೆ 60 ಸಾವಿರ ದಿಂದ ರೂ - 1 ಲಕ್ಷ ರೂ. ಪರಿಹಾರ ನೀಡಬೇಕೆಂದು ಹಾಗೂ ಮನೆಗಳಿಗೆ ಕೇವಲ 2 ಸಾವಿರ ದಿಂದ 10 ಸಾವಿರ ರೂ. ಪರಿಹಾರ ನೀಡಿರುವುದನ್ನು ವಿರೋಧಿಸಿ, ಹೆಚ್ಚಿನ ಪರಿಹಾರಕ್ಕಾಗಿ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಶೇ 15 ಎಕ್ಸ್‌ಗ್ರೇಷಿಯ ನೀಡಬೇಕೆಂದು ಮತ್ತಿತರ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರಾದ ಹೆಚ್.ಕೆ. ಪಾಟೀಲ ನಿವಾಸದೆದುರು ನೂರಾರು ರೈತರು ಸೆಪ್ಟೆಂಬರ್ 9 ರಂದು ಪ್ರತಿಭಟನೆ ನಡೆಸಿದರು.

ಸಚಿವರು ರೈತರ ಜೊತೆ ಅವರ ಸುದೀರ್ಘವಾಗಿ ಚರ್ಚೆ ನಡೆಸಿದರು. ರೈತರ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಹೋರಾಟ ಸಮಿತಿ ಸಂಚಾಲಕ ವಿರೂಪಾಕ್ಷಪ್ಪ ತಡಕಲ್, ಅಧ್ಯಕ್ಷರಾದ ಶಿವಶರಣಪ್ಪ ಅಂಬಲಗಿ, ಕಾರ್ಯದರ್ಶಿ ಶ್ರೀಮಂತ ರೈತರ ಪರವಾಗಿ ಮಂತ್ರಿಗಳಿಗೆ ವಿವರಿಸಿದರು. ನೀರಾವರಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಚನ್ನಬಸಪ್ಪ ಅವರ ನೇತೃತ್ವದಲ್ಲಿ ರೈತರ ಸಮಸ್ಯೆಗಳನ್ನು ಅಧ್ಯಯನ ಮಾಡಿ ವರದಿಯನ್ನು ಕೊಡಲು ಒಂದು ಸಮಿತಿ ರಚಿಸಿದರು.

ನೀರಾವರಿ ಕಾರ್ಯದರ್ಶಿಗಳು 15 ದಿನಗಳಲ್ಲಿ ವರದಿ ಕೊಡುವುದಾಗಿ ಭರವಸೆ ನೀಡಿದರು.

ಕನಿಷ್ಠ ವೇತನದ ಪುನರ್ ವಿಮರ್ಶೆಗೆ ಹೋಟೆಲ್ ಕಾರ್ಮಿಕರ ಸಂಘದ ವಿರೋಧ

ಹೋಟೆಲ್ ಕಾರ್ಮಿಕರಿಗೆ ರಾಜ್ಯ ಸರ್ಕಾರ ಪುನರ್ ವಿಮರ್ಶೆ ಮಾಡಿರುವ ಕನಿಷ್ಠ ವೇತನದಿಂದಾಗಿ ಹೋಟೆಲ್ ಕಾರ್ಮಿಕರಿಗೆ ತೀರಾ ಅನ್ಯಾಯವಾಗಿರುತ್ತದೆ. ಹೋಟೆಲ್ ಕಾರ್ಮಿಕರ ಸಂಬಳದಲ್ಲಿ ಊಟದ ಬಾಬ್ತಿಗೆ ಒಟ್ಟು ಸಂಬಳದ ಶೇ. 15 ರಷ್ಟು ಕಡಿತ ಮಾಡಲು ಹೋಟೆಲ್ ಮಾಲೀಕರಿಗೆ ಸರ್ಕಾರ ಅನುಮತಿ ನೀಡಿರುವುದು ಸರ್ಕಾರದ ಮಾಲೀಕರ ಪರ ನೀತಿಯನ್ನು ಎತ್ತಿ ತೋರಿಸುತ್ತದೆ. ಕಾರ್ಮಿಕ ಸಂಘಗಳ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳದೆ ಸರ್ಕಾರ ಏಕಪಕ್ಷೀಯವಾಗಿ ಈ ತೀರ್ಮಾನ ಕೈಗೊಂಡಿರುತ್ತದೆ. ಈ ಕನಿಷ್ಟ ವೇತನ ಪುನರ್ ವಿಮರ್ಶೆಯಿಂದಾಗಿ ಹೋಟೆಲ್ ಕಾರ್ಮಿಕರಿಗೆ ಊಟದ ಬಾಬ್ತಿಗೆ ಪ್ರತಿ ತಿಂಗಳು ರೂ. 90ರ ಬದಲು 350ಕ್ಕೂ ಹೆಚ್ಚು ಕಡಿತವಾಗುತ್ತದೆ.

ಸರ್ಕಾರವೇ ನೇಮಿಸಿದ ಕನಿಷ್ಠ ವೇತನ ಸಲಹಾ ಸಮಿತಿ ಸಭೆಯಲ್ಲಿ ಹೋಟೆಲ್ ಕಾರ್ಮಿಕರ ಊಟದ ಬಾಬ್ತಿಗೆ ಶೇಕಡವಾರು ಕಡಿತದ ಬದಲು ತಿಂಗಳಿಗೆ ನಿಗದಿತ ರೂ. 170 ಕಡಿತ ಮಾಡಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು.

ಕಳೆದ 9 ವರ್ಷಗಳ ನಂತರ ರಾಜ್ಯ ಸರ್ಕಾರ ಹೋಟೆಲ್ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಪುನರ್ ವಿಮರ್ಶೆ ಮಾಡಿದರೂ ಇದರಿಂದ ಹೋಟೆಲ್ ಕಾರ್ಮಿಕರಿಗೆ ಯಾ[illegible] ಪ್ರಯೋಜನವೂ ಅಗುವುದಿಲ್ಲ. 15ನೇ ಭಾರತೀಯ ಕಾರ್ಮಿಕ ಸಮ್ಮೇಳನ ಹಾಗೂ ದೇಶದ ಸರ್ವೋಚ್ಚ ನ್ಯಾಯಾಲಯ ಹಲವು ಸಮಯಗಳಲ್ಲಿ ಕನಿಷ್ಠ ಮೂರು ವರ್ಷಕ್ಕೊಮ್ಮೆ ಕನಿಷ್ಠ ವೇತನ ಪುನರ್ ವಿಮರ್ಶೆ ಮಾಡಬೇಕೆಂದು ಹೇಳಿದ್ದರೂ ಸರ್ಕಾರ ಈ ಬಗ್ಗೆ ಕಿವಿಗೊಡದೆ ದೀರ್ಘಾವಧಿಯ ನಂತರ ಪುನರ್ ವಿಮರ್ಶೆ ಮಾಡಿರುವ ಕನಿಷ್ಠ ವೇತನ ಕಾರ್ಮಿಕರಿಗೆ ಕನಿಷ್ಠ ಜೀವನ ನಡೆಸಲೂ ಸಾಕಾಗುವುದಿಲ್ಲ. ಸರ್ಕಾರ ಕೂಡಲೇ ಹೋಟೆಲ್ ಕಾರ್ಮಿಕರ ಊಟದ ಬಾಬ್ತಿಗೆ ಒಟ್ಟು ಸಂಬಳದ ಶೇ. 15 ರಷ್ಟು ಕಡಿತ ಮಾಡುವ ಆದೇಶವನ್ನು ಹಿಂತೆಗೆದುಕೊಳ್ಳಬೇಕೆಂದು ಬೆಂಗಳೂರು ಜಿಲ್ಲಾ ಹೋಟೇಲ್ ಕಾರ್ಮಿಕರ ಸಂಘ ಸರ್ಕಾರವನ್ನು ಒತ್ತಾಯಿಸಿದೆ. ತಪ್ಪಿದ್ದಲ್ಲಿ ಈ ಬಗ್ಗೆ ತೀವ್ರ ಚಳುವಳಿ ನಡೆಸಲಾಗುವುದೆಂದು ಸಂಘದ ಅಧ್ಯಕ್ಷರಾದ ಇ.ಕೆ.ಎನ್. ರಾಜನ್ ಎಚ್ಚರಿಸಿದ್ದಾರೆ.



ವಾಜಪೇಯಿ ಹಾಗೂ ಕುಖ್ಯಾತ ಇಸ್ರೇಲ್ ಪ್ರಧಾನಿ ಶೆರೂನ್ ಭಯೋತ್ಪಾದನೆ ನಿರ್ಮೂಲನದ ಬಗ್ಗೆ ಮಾತುಕತೆ ನಡೆಸಿದದರು. ಇದನ್ನು ಸಾಮರಿಕ ಮೈತ್ರಿ ಎನ್ನಲಾಗತ್ತಿದೆ. ಆದರೆ ಭಯೋತ್ಪಾದನೆಯಮೂಲದ ಬಗ್ಗೆ ಕಿಂಚಿತ್ತೂ ಚರ್ಚಿಸದ ಈ ಮೈತ್ರಿ, ನಿಜಕ್ಕೂ ಏನನ್ನ ಸಾಧಿಸಲು ಹೊರಟಿದೆ?

ವಾಜಪೇಯಿ-ಶೆರೂನ್ ಮಾತುಕತೆ

ಇದು ಭಯೋತ್ಪಾದಕ ಮೈತ್ರಿ ?

ಭಾರತ ಮತ್ತು ಇಸ್ರೇಲ್ "ಭಯೋತ್ಪಾದಕತೆಯ ಪಿಡುಗಿನ ವಿರುದ್ಧ ಹೋರಾಡಲು ಸಾಮರಿಕ ಜೊತೆಗಾರಿಕೆ"ಗೆ ಒಂದು ಔಪಚಾರಿಕ ಸ್ವರೂಪ ನೀಡಲು ನಿರ್ಧರಿಸಿವೆಯಂತೆ. ಭಯೋತ್ಪಾದಕತೆಯನ್ನು ಎದುರಿಸಲು ಒಂದು ಜಾಗತಿಕ ಹಾಗೂ ಸಮಗ್ರ ಸ್ಪಂದನೆಗೂ ಅವರು ಒಪ್ಪಿದ್ದಾರೆ.

ನಿಜ, ಹೀಗೆ ಭಯೋತ್ಪಾದಕತೆಯ 'ಪಿಡುಗಿನ' ಬಗ್ಗೆ ಮಾತಾಡುವಾಗ ಅವರಿಬ್ಬರೂ ಭಯೋತ್ಪಾದಕತೆಯ ಮೂಲದ ಬಗ್ಗೆ ಮಾತಾಡಲೇ ಇಲ್ಲ. ಇಸ್ರೇಲಿ ಪ್ರಧಾನಮಂತ್ರಿ ಏರಿಯಲ್ ಶರೋನ್‌ರ ಗೌರವಾರ್ಥ ಔತಣಕೂಟದಲ್ಲಿ ಮಾತನಾಡುತ್ತಾ ಭಾರತದ ಪ್ರಧಾನ ಮಂತ್ರಿಗಳು 'ಜೆಹಾದಿ' ಗುಂಪುಗಳು ನಿರ್ದಿಷ್ಟವಾಗಿ ಪ್ರಜಾಸತ್ತಾತ್ಮಕ ಸಮಾಜಗಳ ಮೇಲೆ ಗುರಿಯಿಟ್ಟಿರುವ ಒಂದು ವಿಪತ್ತು" ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ. ಆದ್ದರಿಂದ ಭಾರತ, ಇಸ್ರೇಲ್ ಮತ್ತು ಅಮೆರಿಕಾ ಭಯೋತ್ಪಾದನೆಯ ವಿರುದ್ಧ ಒಂದು ಸಂಯುಕ್ತರಂಗ ಏರ್ಪಡಿಸಬೇಕೆಂಬುದು ಸ್ವಯಂ ವೇದ್ಯಎಂದವರು ನಮಗೆ ತಿಳಿಸುತ್ತಾರೆ.


ಮೂಲ ಎಲ್ಲಿದೆ?

ಇಬ್ಬರು ಪ್ರಧಾನ ಮಂತ್ರಿಗಳು ಭಯೋತ್ಪಾದನೆಯ ಮೂಲದ ಬಗ್ಗೆ ಮಾತನಾಡದಿರಲು ನಿರ್ಧರಿಸಿದ್ದರಿಂದ ನಾವು ಆ ಬಗ್ಗೆ ಮಾತನಾಡಬೇಕಾಗಿದೆ. ಪ್ಯಾಲೆಸ್ಟೇನ್ ಪ್ರದೇಶಗಳನ್ನು ಇಸ್ರೇಲ್ ಕಾನೂನುಬಾಹಿರವಾಗಿ ಆಕ್ರಮಿಸಿರುವುದು ಪಶ್ಚಿಮ ಏಶ್ಯಾದಲ್ಲಿ ಭಯೋತ್ಪಾದಕ ಚಟುವಟಿಕೆಗಳು ಹುಟ್ಟಿಕೊಳ್ಳಲು ಏಕೈಕ ಮೂಲವಲ್ಲದಿದ್ದರೆ, ಖಂಡಿತಾ ಅದು ಪ್ರಧಾನ ಮೂಲವಂತೂ ಹೌದು. ವಿದೇಶೀ ನೆಲವನ್ನು ಬಲವಂತದಿಂದ ಅಥವಾ ಕಾನೂನು ಬಾಹಿರವಾಗಿ ಆಕ್ರಮಿಸಿಕೊಳ್ಳುವುದೇ ಸ್ವತಃ ಭಯೋತ್ಪಾದನೆ ಪ್ರಭುತ್ವದ ಅಥವಾ ಸರಕಾರದ ಭಯೋತ್ಪಾದನೆ ಇಸ್ರೇಲ್ ಈ ಆಕ್ರಮಿತ ಪ್ರದೇಶಗಳಿಂದ ಹಿಂದೆ ಹೋದರೆ ಮತ್ತು ಅರ್ಧಶತಮಾನಕ್ಕಿಂತಲೂ ಹೆಚ್ಚು ಸಮಯದಿಂದ ಒಂದು ಬೃಹತ್ ಸಾಮ್ರಾಜ್ಯಶಾಹಿ ಪಿತೂರಿಯಿಂದ ನಿರಾಕರಿಸಲ್ಪಟ್ಟ ಪ್ಯಾಲೆಸ್ಟೇನಿಯನ್ನರ ತಾಯ್ನಾಡಿನ ಕನಸನ್ನು ಈಡೇರಿಸಿಕೊಳ್ಳಲು ಅವಕಾಶ ನೀಡಿದರೆ ಆ ಪ್ರದೇಶದಲ್ಲಿ ಭಯೋತ್ಪಾದನೆಯ ಒಂದು ದೊಡ್ಡ ಮೂಲವನ್ನು ಮುಚ್ಚಿದಂತಾಗುತ್ತದೆ. ಇಸ್ರೇಲ್ ಇಂತಹ ಒಂದು ಕ್ರಮ ಕೈಗೊಂಡ ಮೇಲೂ ಯಾವುದೇ ಪ್ಯಾಲೆಸ್ಟೇನ್ ಭಯೋತ್ಪಾದಕ ಧಾಳಿ ನಡೆಸಿದರೆ ಅದನ್ನು ಖಂಡಿಸುವಲ್ಲಿ ಇಡೀ ಜಗತ್ತು ಇಸ್ರೇಲ್ ಜತೆಗೂಡುವುದಷ್ಟೇ ಅಲ್ಲ, ಈ ಪಿಡುಗನ್ನೇ ತೊಲಗಿಸಲು ಒಟ್ಟುಗೂಡಿ ಕೆಲಸಮಾಡುತ್ತದೆ. ಅಂತೆ ಇಸ್ರೇಲ್ ಈ ಕುರಿತ ವಿಶ್ವಸಂಸ್ಥೆಯ ಹಲವು ನಿರ್ಣಯಗಳನ್ನು ಉಲ್ಲಂಘಿಸಿ ಈ ಪ್ಯಾಲೆಸ್ಟೇನ್ ನೆಲಗಳನ್ನು ಇನ್ನೂ ಆಕ್ರಮಿಸಿಕೊಂಡೇ ಇದೆಯಷ್ಟೇ ಅಲ್ಲ, ಅಲ್ಲಿ ಯೆಹೂದಿ ಜನಗಳನ್ನು ನೆಲೆಗೊಳಿಸಿ ಅಲ್ಲಿಯ ಸ್ವರೂಪವನ್ನೇ ಬದಲಿಸಲು ಪ್ರಯತ್ನ ನಡೆಸಿದೆ ನಂತರ ಹೀಗೆ ತಾನೇ ಬಲವಂತದಿಂದ ನೆಲೆಗೊಳಿಸಿದ, ಬೇರೆಯವರ ನೆಲದಲ್ಲಿ ವಾಸಿಸುವ ಇಸ್ರೇಲಿ ನಾಗರಿಕರನ್ನು ರಕ್ಷಿಸುವ ನೆಪವೊಡ್ಡಿ ಈ ಆಕ್ರಮಿತ ಪ್ರದೇಶಗಳಲ್ಲಿ ಇಸ್ರೇಲ್ ಅತ್ಯಂತ ದುಷ್ಟ ಪ್ರಭುತ್ವ ಭಯೋತ್ಪಾದನೆಯನ್ನು ಹರಿಯಬಿಟ್ಟಿದೆ.

"ನನ್ನ ದೇಶದಲ್ಲಿ ಏನು ಮಾಡುತ್ತಿದೆ"

ಪಶ್ಚಿಮ ದಂಡೆಯಲ್ಲಿ ಗಸ್ತು ತಿರುಗುತ್ತಿದ್ದ ಒಂದು ಇಸ್ರೇಲಿ ಟ್ಯಾಂಕಿನ ಮೇಲೆ ಕಲ್ಲು ತೂರುವಾಗ ಒಬ್ಬ ಪ್ಯಾಲೆಸ್ಟೇನ್ ಹುಡುಗ ಸಿಕ್ಕಿಬಿದ್ದ. ಯಾಕೆ ಕಲ್ಲು ತೂರುತ್ತಿದ್ದೀಯಾ ಎಂದು ಪ್ರಶ್ನೆ ಕೇಳಿದಾಗ ಆತ ತಕ್ಷಣ ಕೇಳಿದ ಮರುಪ್ರಶ್ನೆ - ಆ ಟ್ಯಾಂಕ್ ನನ್ನ ದೇಶದಲ್ಲಿ ಏನು ಮಾಡುತ್ತಿದೆ? ಇದು ಇಡೀ ಸನ್ನಿವೇಶದ ಸಾರಾಂಶವನ್ನು ನಮ್ಮ ಮುಂದಿಡುತ್ತದೆ.

ಈ ಹಿಂದೆ ಅಫಘಾನಿಸ್ತಾನದ ಮೇಲೆ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಧಾಳಿಗಳು ಮತ್ತು ಇಂದು ಇರಾಕಿನಲ್ಲಿ ಮಿಲಿಟರಿ ಅತಿಕ್ರಮಣ ಹಲವೆಡೆ ಪ್ರತೀಕಾರದ ಅತಿದೊಡ್ಡ ಮೂಲವಾಗಿದೆ. ಕೆಲವೊಮ್ಮೆ ಈ ಪ್ರತಿಕಾರ ಭಾವನೆ ದುರದೃಷ್ಟವಶಾತ್ ಭಯೋತ್ಪಾದಕ ಧಾಳಿಗಳ ಸ್ವರೂಪ ಪಡೆಯುತ್ತಿವೆ. ಅಮೇರಿಕಾ ನಡೆಸಿರುವ ಪ್ರಭುತ್ವ ಭಯೋತ್ಪಾದನೆಯ ಇಡೀ ಚರಿತ್ರೆ ಮತ್ತು ಈಗಲೂ ವಿಶ್ವದೆಲ್ಲೆಲ್ಲಾ ತನ್ನ ಯಜಮಾನಿಕೆ ಹೇರುವ ಅದರ ಪ್ರಯತ್ನಗಳು ಒಬ್ಬ ಪ್ರಮುಖ ಬುದ್ಧಿಜೀವಿ ವರ್ಣಿಸಿದಂತೆ "ಅವಮಾನಿತ ಜನಗಳ ದ್ವೇಷ"ಕ್ಕೆ ಕಾರಣವಾಗಿದೆ. ನಿಜ ಸಂಗತಿಯೆಂದರೆ, ಅಮೆರಿಕಾ ಮತ್ತು ಇಸ್ರೇಲ್ ನಡೆಸಿರುವ ಪ್ರಭುತ್ವ ಭಯೋತ್ಪಾದನೆಗೆ ಪ್ರತಿಯಾಗಿ ವೈಯಕ್ತಿಕ ಭಯೋತ್ಪಾದನೆ ಹುಟ್ಟಿಕೊಂಡಿದೆ. ಆದರೆ ಇದು



ದಾರಿ ತಪ್ಪಿದ, ಖಂಡನಾರ್ಹ ಪ್ರತಿಸ್ಪಂದನೆ ಎಂಬುದು ನಿಜ. ಭಯೋತ್ಪಾದನೆಯ ಮೂಲವನ್ನು, ಆತ್ಮಹತ್ಯಾ ಬಾಂಬರುಗಳ ಹತಾಶ ಕಾರ್ಯಾಚರಣೆಗಳು ಹುಟ್ಟಿಕೊಳ್ಳುವ ಮೂಲವನ್ನು ನಿವಾರಿಸದೆ ಭಯೋತ್ಪಾದನೆಯನ್ನು ಎಂದೂ ಎದುರಿಸಲು ಸಾಧ್ಯವಿಲ್ಲ.

ನಮ್ಮ ದೇಶದಲ್ಲೂ

ಇಲ್ಲಿ, ನಮ್ಮ ದೇಶದಲ್ಲೂ ಇತ್ತೀಚಿಗೆ ಮುಂಬೈಯನ್ನು ನಡುಗಿಸಿದ ಬಾಂಬ್ ಸ್ಫೋಟಗಳು ಕಳೆದ ವರ್ಷ ಗುಜರಾತಿನಲ್ಲಿ ನಡೆದ ಸರಕಾರೀ ಕೃಪಾಪೋಷಿತ ನರಹತ್ಯಾ ಕಾಂಡಕ್ಕೆ ಒಂದು 'ಪ್ರತೀಕಾರ'ದ ಕ್ರಿಯೆ ಎಂದು ರಾಷ್ಟ್ರೀಯ ಮಾಧ್ಯಮಗಳಲ್ಲಿ ವರದಿಯಾಗಿದೆ. ಒಂದು ದಶಕದ ಹಿಂದೆ ಮುಂಬೈಯನ್ನು ನಡುಗಿಸಿದ ಸರಣಿ ಸ್ಫೋಟಗಳು ಡಿಸೆಂಬರ್ 1972ರಲ್ಲಿ ಬಾಬ್ರಿ ಮಸೀದಿ ಧ್ವಂಸದ ನಂತರ ಆ ನಗರ ಕಂಡ ಅತ್ಯಂತ ಭಯಾನಕ ಕೋಮು ಗಲಭೆಗಳಿಗೆ ಪ್ರತಿಯಾಗಿ ಬಂದವುಗಳು. ಶ್ರೀ ಕೃಷ್ಣ ಆಯೋಗದ ವರದಿ ಆಗಿನ ಮಹಾರಾಷ್ಟ್ರ ಸರಕಾರದ ಪಾತ್ರ, ಅದು ಈ ಗಲಭೆಗಳಿಗೆ ನೀಡಿದ ಪೋಷಣೆಯನ್ನು ವಿವರವಾಗಿ ವರ್ಣಿಸಿದೆ.

ಆದ್ದರಿಂದ ಈ ಭಯೋತ್ಪಾದನಾ ವಿರೋಧಿ ಕೂಟ ಅಮೆರಿಕಾ, ಇಸ್ರೇಲ್, ಭಾರತ ಪ್ರಭುತ್ವ ಭಯೋತ್ಪಾದನೆಯನ್ನು ಪ್ರಾಯೋಜಿಸುವ ಸರಕಾರಗಳ ಒಂದು ಸಂಯುಕ್ತ ರಂಗವಲ್ಲದೆ ಮತ್ತೇನೂ ಇಲ್ಲ. ಪ್ರಭುತ್ವ ಭಯೋತ್ಪಾದನೆ ಮತ್ತು ವೈಯಕ್ತಿಕ ಭಯೋತ್ಪಾದನೆ ಪರಸ್ಪರ ಒಂದನ್ನೊಂದು ಪೋಷಿಸುತ್ತವೆ. ಈ ಪ್ರಕ್ರಿಯೆಗೆ ಬಲಿಯಾಗುವುದು ಪ್ರಜಾಪ್ರಭುತ್ವ ಮತ್ತು ಮುಗ್ಧ ಜೀವಗಳ ಬಲಿ ಹಾಗೂ ಆಸ್ತಿನಾಶ.

ರಾಜಕೀಯ ಅಜೆಂಡಾದ ಭಾಗ

ಭಯೋತ್ಪಾದನೆಯನ್ನು ಉಂಟು ಮಾಡುವ ಮೂಲಗಳ ಬಗ್ಗೆ ಮಾತೂ ಆಡದೆ ಭಯೋತ್ಪಾದನೆಯ ಪಿಡುಗನ್ನು ಅಡಗಿಸುತ್ತೇವೆ ಎಂಬ ಭಾರತ ಇಸ್ರೇಲ್ ಶಪಥವನ್ನು ವಾಜಪೇಯಿ ಸರಕಾರ ದೇಶದೊಳಗೆ ಸಾಧಿಸಬಯಸುವ ರಾಜಕೀಯ ಅಜೆಂಡಾದ ಒಂದು ಭಾಗವೆಂದಷ್ಟೇ ಕಾಣಲು ಸಾಧ್ಯ 'ಜೆಹಾದಿ' ಗುಂಪುಗಳ ಮೇಲೆ ಗುರಿಯಿಟ್ಟು ಸೂಚಿಸುವ ಅಭಿಪ್ರಾಯವೆಂದರೆ ಮುಸ್ಲಿಮರೆಲ್ಲಾ ಸಂದೇಹಾಸ್ಪದರು ಎಂದು. ಮುಸ್ಲಿಂ ಸಮುದಾಯದ ವಿರುದ್ಧ ದ್ವೇಷ ಹರಡಿದಷ್ಟು ಹಿಂದೂ ವೋಟ್ ಬ್ಯಾಂಕನ್ನು ಕ್ರೋಢೀಕರಿಸುವ ಸಾಧ್ಯತೆಯೂ ಅಷ್ಟೇ ಹೆಚ್ಚುತ್ತದೆ. ಇಂತಹ ಕಾರ್ಯತಂತ್ರ ಎಷ್ಟೊಂದು ಅಮಾನವೀಯ ರೀತಿಯಲ್ಲಿ ಪರಿಣಾಮಕಾರಿಯಾಗಲು ಸಾಧ್ಯ ಎಂಬುದನ್ನು ಗುಜರಾತ್ ಮೈನಡುಗಿಸುವ ರೀತಿಯಲ್ಲಿ ತೋರಿಸಿಕೊಂಡಿದೆ. ಬಿಜೆಪಿ ಮತ್ತು ವಾಜಪೇಯಿ ಸರಕಾರ ಪ್ರಯತ್ನಿಸುತ್ತಿರುವುದು ಇಂತಹ ಒಂದು ವೋಟ್ ಬ್ಯಾಂಕ್ ಕ್ರೋಢೀಕರಣವನ್ನು.

ಈ ಪ್ರಕ್ರಿಯೆಯಲ್ಲಿ ಸರಕಾರ ಪ್ಯಾಲೆಸ್ಟೇನಿಯನ್ನರು ಮತ್ತು ಪ್ಯಾಲೆಸ್ಟೇನ್ ವಿಮೋಚನಾ ಸಂಘಟನೆಗೆ ದಶಕಗಳಿಂದ ಸತತವಾಗಿ ನೀಡಿಕೊಂಡು ಬಂದ ಅಚಲ ಬೆಂಬಲದ ನೀತಿಯನ್ನು ಗಾಳಿಗೆ ತೂರಿ ಬಿಟ್ಟಿದೆ. ಎಷ್ಟೆಂದರೆ ವಾಜಪೇಯಿ ತನ್ನ ಔತಣಕೂಟದ ಭಾಷಣದಲ್ಲಿ ವಿಶ್ವಸಂಸ್ಥೆಯ ನಿರ್ಣಯಗಳ ಪ್ರಕಾರ ಇಸ್ರೇಲ್ ಆಕ್ರಮಿತ ಪ್ರದೇಶಗಳಿಂದ ಹಿಂದಕ್ಕೆ ಹೋಗಬೇಕು ಎಂದಂತೂ ಹೇಳಲಿಲ್ಲವಷ್ಟೇ ಅಲ್ಲ, ಒಮ್ಮೆ ಕೂಡಾ ಸ್ವತಂತ್ರ ಪ್ಯಾಲೆಸ್ಟೇನ್ ಪ್ರಭುತ್ವದ ಪ್ರಸ್ತಾಪ ಮಾಡಲಿಲ್ಲ. ಜಾರ್ಜ್ ಬುಷ್ ಕೂಡಾ ಹೀಗೆ ಮಾಡುವುದಿಲ್ಲ. ಉಪಚಾರಕ್ಕಾದರೂ ಅವರು ಸ್ವತಂತ್ರ ಪ್ಯಾಲೆಸ್ಟೇನ್ ಬಗ್ಗೆ ಮಾತಾಡುತ್ತಾರೆ.

ಇಸ್ರೇಲ್‌ನೊಂದಿಗೆ ಗೆಳತನದಿಂದಾಗಿ ರಕ್ಷಣಾವಲಯದಲ್ಲಿ ಶಸ್ತ್ರಾಸ್ತ್ರ ಪಡೆಯುವಲ್ಲಿ ಭಾರತಕ್ಕೆ ಪ್ರಯೋಜನವಿದೆ ಎಂದು ಬಹಳವಾಗಿ ಹೇಳಲಾಗುತ್ತಿದೆ. ಈಗ ಇಡೀ ವಿಶ್ವವೇ ಒಂದು ಶಸ್ತ್ರಾಸ್ತ್ರ ಬಾಜಾರ್ ಆಗಿಬಿಟ್ಟಿದೆ. ಶಸ್ತ್ರಾಸ್ತ್ರಗಳನ್ನು ಮಾರಿ ಯಾರು ಯಾರಿಗೂ ಉಪಕಾರವೇನೂ ಮಾಡುತ್ತಿಲ್ಲ. ಬದಲಾಗಿ ಈ ವ್ಯವಹಾರಗಳಲ್ಲಿ ಅಪಾರ ಲಾಭಗಳನ್ನೇ ಮಾಡಿಕೊಳ್ಳುತ್ತಿದ್ದಾರೆ. ಅದಿರಲಿ, ನಮ್ಮ ಉಪಖಂಡದಲ್ಲಿ ಪರಮಾಣು ಶಸ್ತ್ರಾಸ್ತ್ರ ಪೈಪೋಟಿಯನ್ನು ಆರಂಭಿಸಿ ವಾಜಪೇಯಿ ಸರಕಾರ ಪಾಕಿಸ್ತಾನದೆದುರು ಅದುವರೆಗೆ ನಮಗೆ ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳಲ್ಲಿ ಇದ್ದ ಪ್ರಾಬಲ್ಯವನ್ನು ಮಣ್ಣುಪಾಲು ಮಾಡಿದೆ. ಆದ್ದರಿಂದ ಈಗ ಎಷ್ಟೇ ಹೊಸ ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳೂ ಭಾರತದ ಭದ್ರತೆಯನ್ನೂ ಹೆಚ್ಚಿಸುವುದಿಲ್ಲ.

ಪಥಭ್ರಷ್ಟತೆ

ದುರಂತದ ಸಂಗತಿಯೆಂದರೆ ಅಮೆರಿಕನ್ ಸಾಮ್ರಾಜ್ಯಶಾಹಿಗೆ ತನ್ನ ಅಡಿಯಾಳುತನವನ್ನು ಪ್ರದರ್ಶಿಸಲು ಹಾಗೂ ತನ್ನ ಆಂತರಿಕ ರಾಜಕೀಯ ಅಡೆಂಡಾದ ಈಡೇರಿಕೆಗಾಗಿ ಈ ವಾಜಪೇಯಿ ಸರಕಾರ ರಾಷ್ಟ್ರೀಯ ವಿಮೋಚನಾ ಆಂದೋಲನಗಳನ್ನು ಬೆಂಬಲಿಸುವ ಭಾರತದ ದೀರ್ಘ ಪರಂಪರೆಯಿಂದ ಪಥಭ್ರಷ್ಟವಾಗಿದೆಯಷ್ಟೇ ಅಲ್ಲ, ವಾಸ್ತವವಾಗಿ ಪ್ಯಾಲೆಸ್ಟೇನಿಯನ್ನರ ರಕ್ತದಿಂದ ತೋಯ್ದ ಕೈಗಳ ಒಬ್ಬ ವ್ಯಕ್ತಿಯನ್ನು ಗೌರವಿಸುತ್ತಿದೆ. 50 ವರ್ಷಗಳ ಕಾಲ ಈ ಏರಿಯಲ್ ಶರೋನ್ ವೈಯಕ್ತಿಕವಾಗಿ ಪ್ಯಾಲೆಸ್ಟೇನಿಯನ್ನರ ಹತ್ಯಾಕಾಂಡ ನಡೆಸಿ ಕೊಲೆಗಳನ್ನು ನಡೆಸಿ ರಕ್ತಹರಿಸಿದ್ದಾರೆ. ಸ್ವತಃ ಇಸ್ರೇಲಿ ವಿಚಾರಣಾ ಆಯೋಗವೇ ಸಬ್ರಾ ಮತ್ತ ಶತೀಲಾ ಹತ್ಯಾಕಾಂಡಗಳಲ್ಲಿ ಈತನ ಶಾಮೀಲನ್ನು

ಪುಟ 9 ಕ್ಕೆ

'ಶೆರೂನ ವಾಪಾಸ್ ಹೋಗು' ನವದೆಹಲಿಯಲ್ಲಿ ಎಡಪಕ್ಷಗಳ ಪ್ರತಿಭಟನೆ



ಸಂಘರ್ಷದ ಸಂದೇಶ ಬಿತ್ತರಿಸಿದ

ದುಡಿಯುವ ಜನಕೋಟಿಗಳ ನಡುವಿನಿಂದ ನಡೆದು ಬಂದರು ರಾಜಧಾನಿಗೆ ಸಾವಿರ ಸಾವಿರ ಜನ. ಆಳುವವರ ಜನದ್ರೋಹಿ ನೀತಿಗಳೆದುರು ಸಾರಿದರು ಸಮರ. ಕೃಷಿ-ಕೈಗಾರಿಕೆ-ದೇಶ ಉಳಿಸಲು ಆತ್ಮವಿಶ್ವಾಸದ ಸಂಘರ್ಷದ ರಣ ಕಹಳೆ ಮೊಳಗಿಸಿದ ರ್‍ಯಾಲಿಯ ವರದಿ.

ನಿತ್ಯಾನಂದ ಸ್ವಾಮಿ



ಸಂಘರ್ಷದ ವೇದಿಕೆ...


ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ರ್‍ಯಾಲಿಗಳಿಗೇನೂ ಬರ ಇರುವುದಿಲ್ಲ. ಪ್ರತಿದಿನ ಒಂದಲ್ಲ ಒಂದು ರ್‍ಯಾಲಿ, ಒಂದಲ್ಲ ಒಂದು ಮೆರವಣಿಗೆ ಇದ್ದೇ ಇರುತ್ತದೆ. ಇಂತಹ ರ್‍ಯಾಲಿಗಳು ನಡೆದಾಗೆಲ್ಲ ನಗರದಲ್ಲಿ ವಾಹನ ಸಂಚಾರ, ಜನರ ಓಡಾಟಕ್ಕೆ ತೊಂದರೆಯಾಗುವುದು ಸಹಜ. ಆದರೆ ದೂರದೂರದ ಊರುಗಳಿಂದ ತಮ್ಮ ಸಮಸ್ಯೆಗಳನ್ನು ಹೊತ್ತು ತರುವ ಜನವಿಭಾಗಗಳ ಪ್ರದರ್ಶನಗಳಿಗೆ ನಗರವಾಸಿಗಳ ಸಹಾನುಭೂತಿ ಇದ್ದೇ ಇರುತ್ತದೆ. ಆದರೆ ಆಳುವ ವರ್ಗಗಳ ರಾಜಕೀಯ ಪಕ್ಷಗಳು ತಮ್ಮ ಬಲ ಪ್ರದರ್ಶನಕ್ಕಾಗಿ ರಾಜಧಾನಿಯಲ್ಲಿ ಮೇಲಿಂದ ಮೇಲೆ ಏರ್ಪಡಿಸುವ ರ್‍ಯಾಲಿಗಳಿಂದ ನಗರದ ಜನಜೀವನ ಅನಾವಶ್ಯಕವಾಗಿ ಅಸ್ತವ್ಯಸ್ಥಗೊಳ್ಳುತ್ತಿರುವುದು ನಗರವಾಸಿಗಳ ಅಸಮಾಧಾನಕ್ಕೆ ಕಾರಣವಾಗುತ್ತಿದೆ. ಇತ್ತೀಚೆಗೆ 'ಆಗಸ್ಟ್ ಕ್ರಾಂತಿ'ಯ ಹೆಸರಿನಲ್ಲಿ ಕಾಂಗ್ರೆಸ್ ರ್‍ಯಾಲಿಯೊಂದು ನಡೆಯಿತು. ಏನೂ ಗೊತ್ತಿಲ್ಲದ ಮುಗ್ಧ ಜನರನ್ನು ನೂರಾರು ವಾಹನಗಳಲ್ಲಿ ತುಂಬಿಕೊಂಡು ತಂದು ಮೆರವಣಿಗೆಯಲ್ಲಿ ಪಾಲ್ಗೊಳ್ಳಿಸಲಾಗಿತ್ತು. ಮರುದಿನ ಪತ್ರಿಕೆಗಳಲ್ಲಿ ರ್‍ಯಾಲಿಯ ವಿಷಯಕ್ಕಿಂತಲೂ ಹೆಚ್ಚಾಗಿ ರ್‍ಯಾಲಿಯಿಂದ ಸಾರ್ವಜನಿಕರಿಗಾದ ತೊಂದರೆಗಳನ್ನೇ ಮುಖ್ಯವಾಗಿ ಪ್ರಸ್ತಾಪಿಸಲಾಗಿತ್ತು. ಬಿಜೆಪಿಯವರಂತೂ ಎರೆಡೆರಡು ತಿಂಗಳಿಗೊಮ್ಮೆ ಇಂತಹ 'ಬಾಡಿಗೆ ಜನರ ರ್‍ಯಾಲಿ'ಗಳನ್ನು ನಡೆಸುತ್ತಾರೆ. ನಗರದ ಒಂದೊಂದು ವೃತ್ತಗಳನ್ನು ತಮ್ಮ ಬಾವುಟಗಳಿಂದ ಮತ್ತು ಬ್ಯಾನರುಗಳಿಂದ ಶೃಂಗರಿಸಲು ಇವರು ಹಣ ಖರ್ಚು ಮಾಡುವುದು ನೋಡಿದಾಗ ಇವರೆಲ್ಲಾದರೂ 'ನೋಟ್ ಪ್ರಿಂಟ್' ಮಾಡುತ್ತಿರಬಹುದಾ ಎಂಬ ಸಂದೇಹ ಉಂಟಾಗದೇ ಇರುವುದಿಲ್ಲ.



ಶೆರೂನ್ ಭೂತ ದಹನ

ಭಿನ್ನವಾದ ಅನುಭವ

ಆದರೆ ಸೆಪ್ಟೆಂಬರ್ 9 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಏರ್ಪಡಿಸಿದ್ದ ರ್‍ಯಾಲಿಯು ಬೆಂಗಳೂರು ನಗರವಾಸಿಗಳಿಗೆ ಒಂದು ಭಿನ್ನವಾದ ಅನುಭವ ನೀಡಿತು. ನಗರದ ಚಿಕ್ಕಲಾಲ್‌ಬಾಗ್‌ನಿಂದ ಹೊರಟು ಮಲ್ಲೇಶ್ವರಂ ಆಟದ ಮೈದಾನದಲ್ಲಿ ಏರ್ಪಟ್ಟ ಬೃಹತ್ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡ 5000 ಕ್ಕೂ ಹೆಚ್ಚು ಜನರ್‍ಯಾರು 'ಬಾಡಿಗೆ ಜನ' ಆಗಿರಲಿಲ್ಲ ಎಂಬುದು ಎದ್ದು ಕಾಣುತ್ತಿತ್ತು. ದೂರದ ಬೀದರ್ ಜಿಲ್ಲೆಯಿಂದ ಹಿಡಿದು ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಿಜಾಪುರ, ಬಾಗಲಕೋಟೆ, ಬೆಳಗಾಂವ, ಧಾರವಾಡ, ಗದಗ, ಹಾವೇರಿ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಕೋಲಾರ, ಮಂಡ್ಯ, ಮೈಸೂರು, ಹಾಸನ, ಚಿಕ್ಕಮಗಳೂರು ಅಲ್ಲದೆ ಬೆಂಗಳೂರು ಮುಂತಾದ ಜಿಲ್ಲೆಗಳಿಂದ ಬಂದಿದ್ದ ರೈತರು, ಕಾರ್ಮಿಕರು, ಕೃಷಿ ಕೂಲಿಕಾರರು, ವಿದ್ಯಾರ್ಥಿಗಳು, ಯುವಕರು, ಮಹಿಳೆಯರು ತುಂಬಾ ಕಷ್ಟಪಟ್ಟು ಅಂದು ಬೆಳಿಗ್ಗೆ ಬೆಂಗಳೂರಿಗೆ ತಲುಪಿದ್ದರು. ಅವರಲ್ಲಿ ಹಲವರು ಸೆಪ್ಟೆಂಬರ್ 7 ರಂದೇ ರೈಲು ಹತ್ತಿ ಒಂದು ದಿನ ಮೊದಲೇ ಬಂದಿಳಿದಿದ್ದರು. ದೂರದೂರದಿಂದ ಬಂದವರು ಮುಖ್ಯವಾಗಿ



'ಸರಿ ಸರಿ ಹಿಂದಕ್ಕ ಸಾಗಿಬರುತೇವಾ ಮುಂದಕ್ಕ'

ಉತ್ತರ ಕರ್ನಾಟಕದ ಜಿಲ್ಲೆಗಳಿಂದ ಬಂದವರು ಒಂದೆರೆಡು ದಿನಗಳಿಗಾಗುವಷ್ಟು ರೊಟ್ಟಿ ಚಟ್ನಿ ಕಟ್ಟಿಕೊಂಡು ಬಂದಿದ್ದರು. ಗುಲ್ಬರ್ಗಾದಲ್ಲಿ ರೈಲು ಹತ್ತಿದವರಲ್ಲಿ ಅನೇಕರು ಗುಂಟಕಲ್ ರೈಲು ನಿಲ್ದಾಣದಲ್ಲಿ ರೈಲ್ವೇ ಪೋಲೀಸರ ಲಾಠಿ ಪೆಟ್ಟುಗಳನ್ನು ತಿಂದು ಗಟ್ಟಿಯಾಗಿ ಬಂದಿದ್ದರು. ಪಕ್ಷದ ಖರ್ಚು ವೆಚ್ಚಗಳಿಗಾಗಿ ನೆರವು ನೀಡಲು ದುಡ್ಡು ಕೊಟ್ಟು ಸ್ಥಳೀಯವಾಗಿ ಒದಗಿಸಲಾದ ಬ್ಯಾಡ್ಜುಗಳನ್ನು ಬೇರೆ ಪಡೆದುಕೊಂಡು ಅವುಗಳನ್ನು ಹೆಮ್ಮೆಯಿಂದ ಎದೆಯ ಮೇಲೆ ಹಚ್ಚಿಕೊಂಡಿದ್ದರು. ಇವರು ಬೆಂಗಳೂರಿಗೆ ಬಂದದ್ದು ಯಾರ ಬಲವಂತಕ್ಕಲ್ಲ, ಯಾವ ಆಸೆ ಆಮಿಷಕ್ಕಾಗಿಯಲ್ಲ. ಇವರ ಉದ್ದೇಶ ಬೇರೆ. ಇವರು ಬಿತ್ತರಿಸಿದ ಸಂದೇಶವೇ ಬೇರೆ.

'ಆತ್ಮಹತ್ಯೆಯಲ್ಲ - ಸಂಘರ್ಷ'
ಒಡಲಾಳದ ಬೆಂಕಿ - ಗದ್ಗದಿತ ಘೋಷಣೆ

ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ರಾಜ್ಯದ ರೈತರಿಗಾಗಿ ರೂ. 856 ಕೋಟಿ ಮೊತ್ತದ ಪ್ಯಾಕೇಜನ್ನು ಘೋಷಿಸಿದ ನಂತರವೂ ರೈತರ ಆತ್ಮಹತ್ಯೆಗಳ ಹಿನ್ನೆಲೆಯಲ್ಲಿ ರಾಜ್ಯದ ಮೂಲೆಮೂಲೆಗಳಿಂದ ರೈತರು ಮತ್ತು ಕೃಷಿ ಕೂಲಿಕಾರರು ರಾಜಧಾನಿಗೆ ಧಾವಿಸಿದ್ದರು. ರಾಜ್ಯ ಸರ್ಕಾರದ ಕಪಟತನ ಮತ್ತು ವಾಜಪೇಯಿ ಸರ್ಕಾರದ ಕಟುಕತನದ ವಿರುದ್ಧ ಅವರ ಒಡಲಾಳದಲ್ಲಿ ಭುಗಿಲೆದ್ದ ಬೆಂಕಿ ಗದ್ಗದಿತ ಘೋಷಣೆಗಳಾಗಿ ಹೊರಹೊಮ್ಮುತ್ತಿತ್ತು. 'ಆತ್ಮಹತ್ಯೆಯಲ್ಲ - ಸಂಘರ್ಷ' ಎಂಬ ಅವರ ಉದ್ಗಾರ ನಗರದ ಬೀದಿಗಳಲ್ಲಿ ಪ್ರತಿಧ್ವನಿಸಿದಾಗ ಬೆಂಗಳೂರಿನ ಜನ ಬೆರಗಾಗದೆ ಇರಲಿಲ್ಲ. ಬೆಳೆ ಹಾನಿ, ಬೆಲೆ ಕುಸಿತ, ಸಾಲದ ಬಾಧೆ ತಾಳಲಾರದೆ ಸಾವಿಗೆ ಶರಣಾಗುತ್ತಿದ್ದ ಕುಲಬಾಂಧವರಲ್ಲಿ ಆತ್ಮವಿಶ್ವಾಸ ಮೂಡಿಸುವ ಅವರ ಉದ್ದೇಶವೇ ಅವರ ಆವೇಶಕ್ಕೆ ಕಾರಣವಾಗಿತ್ತು. ರೈತರನ್ನು ಅವಲಂಬಿಸಿರುವ ಕೃಷಿ ಕೂಲಿಕಾರರು, ಉದ್ಯೋಗ ಇಲ್ಲದೆ, ಸಂಪಾದನೆ ಇಲ್ಲದೆ, ಉಪವಾಸ ತಾಳಲಾರದೆ ಸಾವಿನಲ್ಲಿ ಪರಿಹಾರ ಕಾಣಲು ಹೊರಟಿರುವುದನ್ನು ತಡೆದು ಅವರಲ್ಲಿ ಬದುಕುವ ಆಸೆಯನ್ನು ಚಿಗುರಿಸುವ ಉದ್ದೇಶವೇ ರ್‍ಯಾಲಿಯಲ್ಲಿ ಭಾಗವಹಿಸಿದವರ ಉದ್ವೇಗಕ್ಕೆ ಕಾರಣವಾಗಿತ್ತು. ನಾವು ಹೇಡಿಗಳಾಗಬಾರದು, ಆತ್ಮಹತ್ಯೆ ನಮ್ಮ ದಾರಿಯಲ್ಲ. ಹೋರಾಟ ನಮ್ಮ ಹಾದಿ, ಸಂಘರ್ಷ ನಮ್ಮ ದಾರಿ ಎಂಬುದೇ ಅವರು ಬಿತ್ತರಿಸಿದ ಸಂದೇಶ.

ರೈತರ ಆತ್ಮಹತ್ಯೆಯ ಪ್ರಶ್ನೆಯನ್ನು ಸಂಸತ್ತಿನಲ್ಲಿ ಚರ್ಚೆ ಮಾಡಲು ಅವಕಾಶ ನೀಡದ ಬಿಜೆಪಿ ಸರ್ಕಾರ ಒಂದುಕಡೆ. ರೈತರನ್ನು ಋಣಮುಕ್ತರನ್ನಾಗಿಸಿ ಅವರನ್ನು ಸಾವಿನ ದವಡೆಯಿಂದ ಪಾರು ಮಾಡಲು ಒಪ್ಪದ ವಿಶ್ವಬ್ಯಾಂಕ್ ಅಡಿಯಾಳು ಕೃಷ್ಣ ಸರ್ಕಾರ ಇನ್ನೊಂದು ಕಡೆ. ಈ ಎರಡು ಸರ್ಕಾರಗಳು ಎಷ್ಟೇ ರೈತ ವಿರೋಧಿಯಾಗಿದ್ದರೂ ಈ ಎರಡೂ ಸರ್ಕಾರಗಳನ್ನು ಕಿತ್ತೆಸೆಯುವ ಸಾಮರ್ಥ್ಯ ರೈತ-ಕಾರ್ಮಿಕ-ಕೃಷಿ ಕೂಲಿಕಾರರ ಒಗ್ಗಟ್ಟಿನಲ್ಲಿ ಇದೆ ಎಂಬ ಆತ್ಮವಿಶ್ವಾಸ ಮೂಡಿಸುವಲ್ಲಿ ರ್‍ಯಾಲಿ ಯಶಸ್ವಿಯಾಯಿತು.

ಆತ್ಮಹತ್ಯೆಗೀಡಾದ ಕುಟುಂಬದವರೂ ಇಲ್ಲಿ

ಪಿ.ಎಲ್.ಡಿ. ಬ್ಯಾಂಕಿನ ಅಧಿಕಾರಿಗಳು ಬಲವಂತದ ಸಾಲ ವಸೂಲಿಗೆಂದು ಬಂದು ಮನೆಗೆ ಬೀಗ ಹಾಕಿದಾಗ ಅವಮಾನದಿಂದ



ನೆಲೆಮೊಡಲಿನಿಂದ ನಡೆದು ಬಂದರು...

...ಐ(ಎಂ) ರ್‍ಯಾಲಿ

...ದ ಗುಲ್ಬರ್ಗಾ ಜಿಲ್ಲೆಯ ಯುವ ರೈತ ... ದೇವೇಂದ್ರಪ್ಪ ಖಣದಾಳ (22) ... ಮಾಡಿಕೊಂಡಿದ್ದ. ಆದರೆ ಕರ್ನಾಟಕ ...ರೈತಸಂಘ ಈ ಪ್ರಕರಣವನ್ನು ...ಡು ನಡೆಸಿದ ಚಳುವಳಿಯು ಆ ... ರೈತನ ಸಹೋದರ ಪರಮೇಶ್ವರ ...ದ್ರಪ್ಪ ಖಣದಾಳನಲ್ಲಿ ಆತ್ಮವಿಶ್ವಾಸ ...ತು. ಸೆಪ್ಟೆಂಬರ್ 9 ರ ರ್‍ಯಾಲಿಯಲ್ಲಿ ...ಲ್ಗೊಳ್ಳುವ ಮೂಲಕ ರೈತ ಪರಮೇಶ್ವರ ...ಸಾಬೀತುಪಡಿಸಿದ್ದು ಇಡೀರೈತ ಸಮುದಾಯಕ್ಕೆ ಒಂದು ಆದರ್ಶ. ಬೇರೆ ರ್‍ಯಾಲಿಗಳಂತೆ ಇದೊಂದು ನಾಟಕೀಯ ರ್‍ಯಾಲಿ ಆಗಿರಲಿಲ್ಲ ಎಂಬುದಕ್ಕೆ ಇದೊಂದೇ ಸಾಕ್ಷಿ ಸಾಕು.

ಆಗಸ್ಟ್ 16 ರಿಂದ 31 ರವರೆಗೆ ರಾಜ್ಯದಾದ್ಯಂತ ಸಂಚರಿಸಿದ ಸಿಪಿಐ(ಎಂ) ನ ಆರು ಪ್ರಚಾರಾದೋಲನ ಜಾಥಾಗಳು ಬೀರಿದ ಪ್ರಭಾವ ಈ ರ್‍ಯಾಲಿಯ ಯಶಸ್ಸಿಗೆ ಒಂದು ಪ್ರಮುಖ ಕಾರಣವಾಗಿದೆ ಎಂದು ಹೇಳದೆ ಇರಲಾಗದು.

...ಗ್ರಹದ ಜನಸ್ತೋಮಕ್ಕೆ ನಾಯಕತ್ವದ ಅಭಿನಂದನೆ



...ನಲ್ಲೂ
...ಉತ್ಸಾಹ




...ಣೆಗಳಾದವು ಸಿಡಿಗುಂಡು



ಕೋಮುವಾದದ ವಿರುದ್ಧ
ದೇಶದ ಐಕ್ಯತೆಗೆ ಬದ್ಧ



ಬಿಜೆಪಿ, ಕಾಂಗ್ರೆಸ್ ಸರಕಾರಗಳ ನೀತಿಗಳಿಂದ ದೇಶ ವಿನಾಶ



ಬಹಿರಂಗಸಭೆಯನ್ನುದ್ದೇಶಿಸಿ ಕಾಂ. ಕಾರಟ್

ಪ್ರಕಾಶ್ ಕಾರಟ್

ಅಮೇರಿಕಾ ಪರವಾದ, ಸಾಮ್ರಾಜ್ಯಶಾಹಿ ಪರವಾದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ - ಕಾಂಗ್ರೆಸ್ - ರಾಜ್ಯ ಸರ್ಕಾರಗಳ ಜಾಗತೀಕರಣ - ಖಾಸಗೀಕರಣ ನೀತಿಗಳಿಂದ ದೇಶ ವಿನಾಶದ ಹಾದಿಯಲ್ಲಿದೆ. ನೂರಾರು ರೈತರು ಆತ್ಮಹತ್ಯೆಗೆ ಮುಂದಾಗಿದ್ದಾರೆ. ಕೈಗಾರಿಕೆಗಳು ಮುಚ್ಚುತ್ತಿವೆ ಎಂದು ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್ ಹೇಳಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ 'ಆತ್ಮಹತ್ಯೆಯಲ್ಲ ಸಂಘರ್ಷ' ಎಂಬ ಘೋಷಣೆಯೊಂದಿಗೆ ಇಂದು ಮಲ್ಲೇಶ್ವರಂ ಮೈದಾನದಲ್ಲಿ ನಡೆದ ಬೃಹತ್ ಬಹಿರಂಗ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

ಐಎಂಎಫ್, ವಿಶ್ವಬ್ಯಾಂಕಿನ ಒತ್ತಡದಿಂದಾಗಿ ದೇಶದಲ್ಲಿ ಪಡಿತರ ವ್ಯವಸ್ಥೆಯನ್ನು ದುರ್ಬಲಗೊಳಿಸಿದ ಬಿಜೆಪಿ-ಕಾಂಗ್ರೆಸ್ ಸರ್ಕಾರಗಳ ನೀತಿಯಿಂದ ಆಹಾರ ಧಾನ್ಯಗಳು ಖರ್ಚಾಗದೆ ಗೋದಾಮುಗಳಲ್ಲಿ 6 ಕೋಟಿ ಟನ್ ಆಹಾರ ಧಾನ್ಯ ಕೊಳೆಯುತ್ತಿದೆ. ಬರಪೀಡಿತ ಪ್ರದೇಶಗಳಲ್ಲಿ ಹಸಿದ ಜನತೆಗೆ ಆಹಾರ ಸಿಗದೆ ಹಸಿವಿನ ಸಾವು ಆತ್ಮಹತ್ಯೆ ನಡೆದಿದೆ. ಇಂತಹ ಸಂದರ್ಭದಲ್ಲಿ ಬಿಜೆಪಿ ಸರ್ಕಾರ 1.5 ಕೋಟಿ ಟನ್ ಆಹಾರವನ್ನು ಕೆ.ಜಿ.ಗೆ 4.5 ರೂ.ಗೆ ಉದ್ದೇಶಕ್ಕೆ ಮಾರುತ್ತಿದೆ ಎಂದು ಅವರು ಖಂಡಿಸಿದರು.

ಬಿಪಿಸಿಎಲ್, ಹೆಚ್‌ಪಿಸಿಎಲ್ ಸೇರಿದಂತೆ ಸಾರ್ವಜನಿಕ ಕಾರ್ಖಾನೆಗಳನ್ನು ಅಗ್ಗದ ದರಕ್ಕೆ ಮಾರಲಾಗುತ್ತಿದೆ. ಎನ್.ಡಿ.ಎ. ಸರ್ಕಾರ 26,000 ಕೋಟಿ ರೂಪಾಯಿಗಳನ್ನು ಈ ರೀತಿ ಗಳಿಸಿದೆ. ಆದರೆ ಇದರಲ್ಲಿ ಒಂದೇ ಒಂದೂ ರೂಪಾಯಿಯನ್ನು ಶಿಕ್ಷಣಕ್ಕೆ - ಕೃಷಿಗೆ ಕೈಗಾರಿಕೆಗಳ ಆಧುನೀಕರಣಕ್ಕೆ ಬಳಸಲಿಲ್ಲ ಎಂದು ಅವರು ಆರೋಪಿಸಿದರು.

ಎನ್.ಡಿ.ಎ. ಸರ್ಕಾರ ಭಾರತ ದೇಶಗಳ ಸ್ವತಂತ್ರ ಅಲಿಪ್ತ ವಿದೇಶಾಂಗ ನೀತಿಯನ್ನು ಕೈಬಿಟ್ಟಿದೆ. ಜೋರ್ಡಾನ್, ಈಜಿಪ್ಟ್, ಪಾಲಿಸ್ಟೀನ್ ಮುಂತಾದ ದೇಶಗಳನ್ನು ಆಕ್ರಮಿಸಿರುವ ಆಕ್ರಮಣಕೋರ ಇಸ್ರೇಲ್ ದೇಶದ ಪ್ರಧಾನಿ ಏರಿಯಲ್ ಶೆರೂನ್‌ರನ್ನು ಕೇಂದ್ರ ಸರ್ಕಾರ ಆಹ್ವಾನಿಸಿದೆ. ಸಿಪಿಐ(ಎಂ) ಪಕ್ಷ ಭಾರತಕ್ಕೆ ಶೆರೂನ್ ಭೇಟಿಯನ್ನು ವಿರೋಧಿಸುತ್ತದೆ ಎಂದು ಅವರು ತಿಳಿಸಿದರು.

ಜನರು ತಮ್ಮ ಸಮಸ್ಯೆಗಳ ವಿರುದ್ಧ ಹೋರಾಟಕ್ಕೆ ಮುಂದಾದರೆ ಆರ್.ಎಸ್.ಎಸ್. ನಿವೇಶನದಂತೆ ಕೆಲಸ ಮಾಡುವ ಬಿಜೆಪಿ ಜನರನ್ನು ಕೋಮು ಭಾವನೆಗಳ ಆಧಾರದಲ್ಲಿ ಒಡೆಯಲು ಹೊರಟಿದೆ. ಅಯೋಧ್ಯೆಯಲ್ಲಿ ಮಂದಿರ ನಿರ್ಮಾಣದ ಪ್ರಶ್ನೆಯನ್ನು ಮುಂದೆ ತರುತ್ತಿದೆ. ಇದು ಅಪಾಯಕಾರಿ ತಂತ್ರ. ಅಯೋಧ್ಯೆ ವಿವಾದಕ್ಕೆ ಕೇವಲ ನ್ಯಾಯಾಲಯ ತೀರ್ಪು- ಸಂವಿಧಾನದ ತತ್ವಗಳು ಮಾತ್ರವೇ ಪರಿಹಾರ ಎಂದು ಅವರು ತಿಳಿಸಿದರು.

ಮುಂದಿನ ನಾಲ್ಕು ವಿಧಾನ ಸಭಾ ಚುನಾವಣೆಗಳಲ್ಲಿ ಬಿಜೆಪಿ ಸೋಲಲಿದೆ. ಮುಂದಿನ ಲೋಕ ಸಭಾ ಚುನಾವಣೆಯಲ್ಲಿ ಎನ್.ಡಿ.ಎ. ವಿಭಜನೆಯಾಗಲಿದೆ. ಬಿಜೆಪಿ ಮುಖಭಂಗ ಅನುಭವಿಸಲಿದೆ. ಕರ್ನಾಟಕ ರಾಜ್ಯದಲ್ಲಿಯೂ ಬಿಜೆಪಿ ಕುಸಿದಿದೆ. ಜನವಿರೋಧಿ ಕಾಂಗ್ರೆಸ್‌ಗೆ ವಿರೋಧಿಯಾದ ಪರ್ಯಾಯ ಶಕ್ತಿಗಳು ಬಲಗೊಳ್ಳುತ್ತಿವೆ. ಸಿಪಿಐ(ಎಂ) ಆಂದೋಲನ ಈ ಬದಲಾವಣೆಗೆ ಸಹಕಾರಿಯಾಗಲಿದೆ ಎಂದು ಅವರು ನುಡಿದರು.

ಕಾಂ. ವಿ.ಜೆ.ಕೆ. - ಸಿಪಿಐ(ಎಂ) ಪಕ್ಷ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ಜೆ.ಕೆ ನಾಯರ್‌ರವರು ಮಾತನಾಡಿ ಜಗತ್ತಿಗೆಲ್ಲಾ ಈಗ ಒಂದೇ ಸರ್ಕಾರ ಎಂಬಂತಾಗಿದೆ. ಅದು ವಿಶ್ವಬ್ಯಾಂಕ್ ಸರ್ಕಾರ ಅವರು ಹೇಳಿದಂತೆ ನಮ್ಮ ಸರ್ಕಾರಗಳು ಕುಣಿಯುತ್ತಲಿವೆ. ನೌಕರರು ಕಾರ್ಮಿಕರ ಮೇಲೆ ಧಾಳಿ ನಡೆದಿದೆ. ಖಾಸಗೀಕರಣ- ನೌಕರಿ ಕಡಿತ ಕಾಂಟ್ರಾಕ್ಟ್ ಪದ್ಧತಿ ತೀವ್ರಗೊಂಡಿದೆ. ವಿಶ್ವಬ್ಯಾಂಕಿನ ಒತ್ತಡ ಗಳಿಂದಾಗಿಯೇ ರೈತರು ಆತ್ಮಹತ್ಯೆಗೆ ಮುಂದಾಗಿದ್ದಾರೆ ಎಂದರು.

ಕಾಂ. ಮಾನ್ಪಡೆ - ಮತ್ತೊಬ್ಬ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ ಮಾತನಾಡಿ ರೈತರು ಬೆಳೆದ ಬೆಳೆಗೆ ಬೆಲೆ ಇಲ್ಲ. ರೈತರು ಪಶುಪಾಲನೆ ಮಾಡಿ ಉತ್ಪಾದಿಸುವ ಒಂದು ಲೀಟರ್ ಹಾಲಿಗೆ 8 ರೂಪಾಯಿ ಸಿಗುವುದಿಲ್ಲ. ವಿಷಯುಕ್ತ ರಾಸಾಯನಿಕಗಳನ್ನು ಮಾರುವ ಕೋಕಾ ಕೋಲಾಗೆ ದುಬಾರಿ ಬೆಲೆ-ತೆರಬೇಕಿದೆ. ರಾಜ್ಯದಲ್ಲಿ ಬರಪರಿಹಾರ ಕಾಮಗಾರಿಯಲ್ಲಿ ಬೃಹತ್ ಯಂತ್ರಗಳನ್ನು ಬಳಸಲಾಗುತ್ತಿದೆ.

ವಜಾಗೊಂಡ ಕೃಪಾಂಕ ನೌಕರರಿಗೆ ಇನ್ನೂ ಮರುನೇಮಕಾತಿ ಮಾಡಿಲ್ಲ. ಕೃಪಾಂಕ ಉಳಿಸಿಕೊಳ್ಳಲು ಕೇಂದ್ರ-ರಾಜ್ಯ ಸರ್ಕಾರಗಳು ಮುತುವರ್ಜಿ ವಹಿಸಲಿಲ್ಲ ಎಂದು ಅವರು ಟೀಕಿಸಿದರು.

ಕಾಂ. ನೀಲಾ - ಮತ್ತೊಬ್ಬ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ನೀಲಾರವರು ಮಾತನಾಡಿ, ಹಸಿದವರ ಕಷ್ಟ ಎಸ್.ಎಂ.ಕೃಷ್ಣ, ವಾಜಪೇಯಿ ಸರ್ಕಾರಕ್ಕೆ ಅರ್ಥವಾಗುವುದಿಲ್ಲ. ಬರದಿಂದ ಕಂಗೆಟ್ಟು ಗುಳೆ ಹೊರಟ ಮಂದಿಗೆ ಎಲ್ಲಿಯೂ ಕೂಲಿ ಸಿಗುವುದಿಲ್ಲ. ಎಲ್ಲೆಡೆ ಬೃಹತ್ ಯಂತ್ರೋಪಕರಣ ಬಳಕೆ ಸಾಗಿದೆ. ನಗರಗಳಿಗೆ ಗುಳೆ ಹೊರಟ ಮಹಿಳೆಯರು. ವೇಶ್ಯಾವೃತ್ತಿಗಿಳಿದ ಹೃದಯ ವಿದ್ರಾವಕ ವರದಿಗಳು ಬರುತ್ತಿವೆ. ಮಹಿಳಾ ಸಬಲೀಕರಣದ ಬಗೆಗೆ ಕಾಂಗ್ರೆಸ್ ಬಿಜೆಪಿಗಳಿಗೆ ಕಾಳಜಿ ಇಲ್ಲ. ಮಹಿಳಾ ಮೀಸಲಾತಿ ಜಾರಿಗೊಳಿಸದೆ ಮುಂದೂಡ ಲಾಗುತ್ತಿದೆ ಎಂದರು.

ಕಾಂ.ಜಿ.ಎನ್ - ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಮಾತನಾಡಿ, ರಾಜ್ಯ ಹಳ್ಳಿಹಳ್ಳಿಗಳಲ್ಲಿ 'ಆತ್ಮಹತ್ಯೆಯಲ್ಲ- ಸಂಘರ್ಷ' ಎಂಬ ಘೋಷಣೆ ಮೊಳಗಿಸಬೇಕು. ಬಿಜೆಪಿ-ಕಾಂಗ್ರೆಸ್‌ಗಳ ಜನವಿರೋಧಿ ನೀತಿಗಳಿಗೆ ಪರ್ಯಾಯವು ಇಂತಹ ಸಂಘರ್ಷದಿಂದ ಮೂಡಿ ಬರಬೇಕೆಂದರು.

ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಆರಂಭದಲ್ಲಿ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮೀನಾಕ್ಷಿ ಸುಂದರಂ ವಂದಿಸಿದರು.

- ರಾಮಕೃಷ್ಣ .ಆರ್.

ಅಮೇರಿಕಕ್ಕೆ ಭಾರತ ಕಸದ ಬುಟ್ಟಿ?



ನಿಮ್ಮಲ್ಲಿ ಹಲವಾರು ಈ ಕಸದ ಬುಟ್ಟಿ ರಾಜಕೀಯವನ್ನು ಅನುಭವಿಸಿರಬಹುದು. ಕಸದ ತೊಟ್ಟಿ ಇಲ್ಲದೇ ಹೋದರೆ ರಾತ್ರಿಯಾದ ಮೇಲೆ ಬೇರೆಯವರ ಮನೆಯೆದುರಿಗೆ ಕಸವನ್ನು ಚೆಲ್ಲಿ ಬರುವವರಿದ್ದಾರೆ. ಸರಿಯಾದ ಕಸದ ತೊಟ್ಟಿ ಇದ್ದರೆ ಈ ಸಮಸ್ಯೆ ಪರಿಹಾರವಾದೀತು. ಅದು ಬೇರೆ ಮಾತು.

ಈಗ ಅಮೇರಿಕ ಏನು ಮಾಡುತ್ತಿದೆ ಎಂಬುದನ್ನು ತಿಳಿದರೆ ಅವರ ಧೋರಣೆಗಳ ಬಗ್ಗೆ ಅರಿವು ಬಂದೀತು. ಹಿಂದು ಹಿಂದೂಸ್ಥಾನ್ ನ್ಯೂಸ್‌ಪ್ರಿಂಟ್ ಲಿಮಿಟೆಡ್ ಎಂಬುದು ಕೇರಳದ ಕೊಟ್ಟಾಯಾಂ ಜಿಲ್ಲೆಯಲ್ಲಿರುವ ಒಂದು ಸರ್ಕಾರಿ ಉದ್ದಿಮೆ. ಅದು ಇತ್ತೀಚೆಗೆ ಅಮೇರಿಕದಿಂದ ಕಾಗದವನ್ನು ತರಿಸಿಕೊಂಡಿತು. ಯಾವ ಪ್ರಮಾಣದಲ್ಲಿ ಗೊತ್ತೇ? ಒಂದು ಸಾವಿರ ಟನ್ನುಗಳಷ್ಟು ಕಾಗದ ಪತ್ರಗಳ ಪ್ರಕಾರ ಇದು ಕಛೇರಿ ಬಳಕೆಯ ಕಾಗದ. ಆದರೆ ಹಡಗಿನಲ್ಲಿ ಬಂದ ಪೆಟ್ಟಿಗೆಗಳಲ್ಲಿದ್ದುದು ಬರೀ ಕಸ. ಅಮೇರಿಕದ ನ್ಯೂಯಾರ್ಕ್‌ನಿಂದ ಬಂದ ಈ ಮಾಲನ್ನು ಭಾಗಶಃ ಹೆಚ್.ಎನ್.ಎಲ್. ಬಿಡಿಸಿಕೊಂಡಿತು. ಆದರೆ ಪೆಟ್ಟಿಗೆ ತೆರೆದು ನೋಡಿದಾಗ ಕಂಗಾಲಾಯಿತು. ಉಳಿದ ಮಾಲನ್ನು ಅದು ಬಂದರಿನಲ್ಲೇ ಬಿಟ್ಟಿದೆಯಂತೆ. ಬಂದರಿನ ಅಧಿಕಾರಿಗಳಿಗೆ ಈಗದು ತಲೆನೋವಿನ ವಿಷಯ.

ಇದರಿಂದ ಒಂದು ಮಾತಂತೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದು ಅಮೇರಿಕನ್ನರ ಧೋರಣೆ.

ಭಾರತದಂತಹ ದೇಶವನ್ನು ಕಸದ ತೊಟ್ಟಿಯನ್ನಾಗಿ ಕಚ್ಚಾ ಸಾಮಗ್ರಿಗಳ ಪೂರೈಕೆದಾರನಾಗಿ ಹಾಗೂ ಅದರ ಉತ್ಪಾದಕ ಸರಕುಗಳಿಗೆ ಮಾರುಕಟ್ಟೆಯಾಗಿ ಅದು ಬಳಸಿಕೊಳ್ಳುತ್ತದೆ. ಭಾರತ ಜನರಿಂದ ತುಂಬಿದ ಒಂದು ದೇಶ. ಈ ದೇಶದ ಜನರೂ ಅಭಿವೃದ್ಧಿ ಹೊಂದಬೇಕು ಎಂಬ ಕಾಳಜಿ ಅಮೇರಿಕಕ್ಕಿಲ್ಲ ಅಲ್ಲವೆ?

ಮೂವತ್ತು ಕೋಟಿ ಹಸಿದ ಹೊಟ್ಟೆಗಳು

ಭಾರತದ ಮುನ್ನಡೆಯ ಬಗೆಗೆ ದಿನನಿತ್ಯವೂ ಕೇಂದ್ರದ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರದ ಮಂತ್ರಿ ಮಹೋದಯರುಗಳು ತುತ್ತೂರಿ ಊದುತ್ತಿರುತ್ತಾರೆ. ಬಡತನ ನಿರ್ಮೂಲನವಾಗಿದೆ. ನಿರಕ್ಷರತೆ ವೇಗವಾಗಿ ಕಡಿಮೆಯಾಗುತ್ತಿದೆ. ಉದಾರೀಕರಣ ಮುಂದುವರಿದಂತೆಲ್ಲ ಬಡತನ ಇನ್ನೂ ಕಡಿಮೆಯಾಗುತ್ತದೆ. ಉದ್ಯೋಗಗಳು ಹೆಚ್ಚಿ ನಿರುದ್ಯೋಗ ಕಡಿಮೆಯಾಗುತ್ತಿದೆ. ಇತ್ಯಾದಿ ಇವುಗಳನ್ನು ಓದಿದರೆ/ ಕೇಳಿದರೆ ಭಾರತ ಸ್ವರ್ಗಲೋಕವಾಗುತ್ತದೆಯೇನೊ ಎನಿಸಬೇಕು.

ಕಣ್ಣೆದುರಿಗೆ ವಾಸ್ತವ ಭಯಂಕರವಾಗಿ ಕಾಣುತ್ತಿದೆ. ಭಾರತದಲ್ಲಿ ಹಸಿದವರ ಸಂಖ್ಯೆ ಎಷ್ಟು ಎಂದು ತಿಳಿದರೆ ಸಾಕು. ಭಾರತದ ಜನರದ್ದು ಎಂತಹ ಸುಸ್ಥಿತಿ ಎಂಬುದು ಗೊತ್ತಾಗಿಬಿಡುತ್ತದೆ. ಮೂವತ್ತು ಕೋಟಿ ಜನ ಹಸಿದ ಹೊಟ್ಟೆಯವರಾಗಿದ್ದಾರೆ ಆಹಾರವಿಲ್ಲವೇ? ಖಂಡಿತ ಇದೆ. ನಮ್ಮ ಗೋದಾಮುಗಳಲ್ಲಿ 60 ದಶಲಕ್ಷ ಟನ್ನುಗಳಷ್ಟು ಆಹಾರಧಾನ್ಯದ ದಾಸ್ತಾನು ಇದೆ. ಎಲ್ಲಿ ನೋಡಿದರಲ್ಲಿ ನೀರು. ಆದರೆ ಕುಡಿಯಲು ಒಂದೇ ಹನಿ ನೀರಿಲ್ಲ ಎಂಬ ಮಾತಿನಂತೆ ಇದು. ಆಹಾರ ಧಾನ್ಯ ಬೇಕಾದಷ್ಟಿದ್ದರೂ ಊಟಕ್ಕೆ ಒಂದೇ ಒಂದು ಅಗುಳಿಲ್ಲದ ಪರಿಸ್ಥಿತಿ ದೆಹಲಿ ಮತ್ತು ಹೈದರಾಬಾದಿನ ಎರಡು ಸಂಸ್ಥೆಗಳು ಅಧ್ಯಯನ ಮಾಡಿ ಪ್ರಕಟಿಸಿರುವ ವರದಿಯ ಪ್ರಕಾರ ಭಾರತದ ಆಹಾರ ಸುರಕ್ಷತೆಯ ಪರಿಸ್ಥಿತಿ ಇದು. ಈ ವರದಿಯ ಪ್ರಕಾರ 2001 ನೇ ಇಸವಿಯಲ್ಲಿ ಹದಿಮೂರು ರಾಜ್ಯಗಳಲ್ಲಿ ಉಪವಾಸದಿಂದ ಸಾವು ಉಂಟಾಗಿರುವ ವರದಿಗಳು ಬಂದಿವೆಯಂತೆ. ನಂತರದ ಸಾಲಿನಲ್ಲಿ ಅತ್ಯಂತ ಪ್ರಗತಿಪರ ರಾಜ್ಯಗಳೆಂದೆನಿಸಿಕೊಂಡಿರುವ ಆಂಧ್ರ ಪ್ರದೇಶ ಮತ್ತು ಕರ್ನಾಟಕಗಳಿಂದಲೂ ಉಪವಾಸದ ಸಾವಿನ ಪ್ರಕರಣಗಳ ವರದಿಯಾಗಿದೆ.

ಇಂತಹ ಪರಿಸ್ಥಿತಿ ಇದ್ದರೂ ಭಾರತ ಆಹಾರ ಧಾನ್ಯಗಳ ರಫ್ತಿನಲ್ಲೂ ತೊಡಗಿತ್ತು.

ಇಷ್ಟೊಂದು ಧಾನ್ಯದ ಲಭ್ಯತೆ ಇರುವಾಗ ಈ ಜನ ಕೊಂಡು ಊಟ ಕೊಡುವುದಿಲ್ಲವೇಕೆ ಎಂದು ನಮ್ಮ ಬಂಡವಾಳಶಾಹಿಗಳು ಕೇಳಿಯಾರು. ಬಂಡವಾಳಿಗರಿಗೆ ಬಡತನದ ಅನುಭವವೇನೂ ಇರುವುದಿಲ್ಲ ತಾನೆ? ಉಪವಾಸ ಸಾಯ ಬೇಕೆಂದೇನೂ ಈ ಜನಗಳ ಇಚ್ಛೆಯಲ್ಲ. ಆದರೆ ಕೊಳ್ಳುವ ಸಾಮರ್ಥ್ಯ ಅವರಲ್ಲಿ ಇಲ್ಲ. ಬಂಡವಾಳಶಾಹಿ ವ್ಯವಸ್ಥೆ ಅವರಿಗೆ ಕೊಳ್ಳುವ ಸಾಮರ್ಥ್ಯ ಬಾರದಂತೆ ನೋಡಿಕೊಂಡಿದೆ.

ಮಂಗಳೂರು: ದಲಿತ ವಿದ್ಯಾರ್ಥಿಗಳಿಗೆ ಗೇಟ್ ಪಾಸು

ಸರ್ಕಾರ 'ಶಾಲೆಗೆ ಮರಳಿಬಾ' ಎಂದು ಪ್ರಚಾರಿಸುತ್ತಿದೆ. ವಾಸ್ತವದಲ್ಲಿ ಮೆರಿಟ್ ನೆಪವೊಡ್ಡಿ ಹಾಸ್ಟೆಲ್‌ನಿಂದ ಹೊರಗಟ್ಟುತ್ತಿದೆ.

ಅತ್ತ ದೆಹಲಿಯಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಕರ್ನಾಟಕದಲ್ಲಿ ದಕ್ಷಿಣ ಭಾರತದ ರಾಜ್ಯಗಳಲ್ಲೇ ಅತ್ಯಧಿಕವೆನ್ನುವ 10.5 ಲಕ್ಷ ಶಾಲಾ ವಯಸ್ಸಿನ ಮಕ್ಕಳು ಶಾಲೆಯಿಂದ ಹೊರಗೆ ಇದ್ದಾರೆ ಎಂದು ಪ್ರಕಟಪಡಿಸಿದರೆ ಇತ್ತ ಶ್ರೀಕೃಷ್ಣ ಕೃಪಾ ಪೋಷಿತ ರಾಜ್ಯ ಸರಕಾರ ಕಳೆದ ಫೆಬ್ರವರಿಯಲ್ಲಿ ನಡೆಸಿದ ಮಕ್ಕಳ ಗಣತಿಯ ಪ್ರಕಾರ ಕೇವಲ 4 ಲಕ್ಷ ಮಕ್ಕಳು ಶಾಲೆಯಿಂದ ಹೊರಗೆ ಇದ್ದಾರೆ ಎಂದು ಹೇಳಿದೆ. 6.5 ಲಕ್ಷ ಅಂಕೆ ಸಂಖ್ಯೆಯಲ್ಲಿ ಅದ ಈ ವ್ಯತ್ಯಾಸ ನಮ್ಮ ಸ್ಪಷ್ಟ ಜನವಿರೋಧಿ ಆಳುವ ವರ್ಗದ ಧೂತನ ಧೋರಣೆಗೆ ಸಾಕ್ಷಿಯಲ್ಲದೆ ಮತ್ತೇನು?

ರಾಜ್ಯದ ಸಂಖ್ಯೆಯಾಗಲೀ, ಕೇಂದ್ರದ ಸಂಖ್ಯೆಯಾಗಲೀ ಇದರಲ್ಲಿ ಶೇ.40 ಪಾಲು ದಲಿತ ಸಮುದಾಯದಿಂದ ಬಂದವರಿದ್ದಾರೆಂಬುದು ಸರ್ವೆ ಸಾಮಾನ್ಯ ಸಂಗತಿ. ಕಳೆದ ಕೆಲ ವರ್ಷಗಳಿಂದ 6 ರಿಂದ 15 ರ ವಯೋಮಾನದ ಒಳಗಿರುವ ಮಕ್ಕಳನ್ನು ಶಾಲೆಗೆ ತರುವ "ಮರಳಿ ಬಾ ಶಾಲೆಗೆ" ಯೋಜನೆ ಎಂತಹ ಫಲ ನೀಡಿರಬಹುದೆಂಬುದು ಮೇಲಿನ ಅಂಕೆ ಸಂಖ್ಯೆಯಿಂದ ಗೊತ್ತಾಗುತ್ತದೆ. ಒಂದಂತೂ ಸತ್ಯ. ರಾಜ್ಯ ಸರಕಾರ ಈ "ಮರಳಿ ಬಾ ಯೋಜನೆಯ" ಅಬ್ಬರದ ಪ್ರಚಾರದಿಂದ ಸಾಕಷ್ಟು ಪ್ರಚಾರವನ್ನಂತೂ ಪಡೆದುಕೊಂಡಿದೆ.

ಇಂತಹ ಸನ್ನಿವೇಶದಲ್ಲಿ ಮಂಗಳೂರಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೇಲಿನಿಂದ 25 ಮಂದಿ ವಿದ್ಯಾರ್ಥಿನಿಯರನ್ನು ಗೇಟ್ ಪಾಸು ನೀಡಿ ಮನೆಗೆ ಮಾತ್ರವಲ್ಲ ಶಾಶ್ವತವಾಗಿ ವಿದ್ಯಾಭ್ಯಾಸದಿಂದ ಹಿಮ್ಮುಖಗೊಳಿಸಿದ ಅಮಾನವೀಯ ಘಟನೆ ನಡೆದಿದೆ. ಧೋರಣೆಗೂ, ಕಾರ್ಯಕ್ರಮಕ್ಕೂ ವಾಸ್ತವಿಕತೆಗೂ ಎಲ್ಲಿಂದೆಲ್ಲಿಯ ಸಂಬಂಧ?

ಮಂಗಳೂರು ನಗರದಲ್ಲಿ 'ಕುದ್ಮುಲ್ ರಂಗರಾವ್' ರವರ ನೆನಪಿನ ಸಾರ್ವಜನಿಕ ವಿದ್ಯಾರ್ಥಿನಿ ನಿಲಯವಿದೆ. ಇಲ್ಲಿ ಕಳೆದ 6 ವರುಷಗಳಿಂದ ನಿರಂತರವಾಗಿ ವಿದ್ಯಾಭ್ಯಾಸ ಮುಂದುವರಿಸುತ್ತಿದ್ದ ಸುಮಾರು 25 ಮಂದಿ ವಿದ್ಯಾರ್ಥಿನಿಯರನ್ನು ಈ ಜುಲೈ ತಿಂಗಳಿನಿಂದ ಅನ್ವಯವಾಗುವಂತೆ ಮೆರಿಟ್ ಕಾರಣವನ್ನು ನೀಡಿ ಮನೆಗೆ ಕಳುಹಿಸಿರುತ್ತಾರೆ. ದೂರದ ಚಿಕ್ಕ ಮಂಗಳೂರ, ಹಾಸನ, ಬೆಳ್ತಂಗಡಿ ಮೊದಲಾದ ಕಡೆಗಳಿಂದ ಬಂದಂತಹ ಈ ದಲಿತ ವಿದ್ಯಾರ್ಥಿನಿಯರು ತನ್ಮೂಲಕ ಪರ್ಯಾಯ ವ್ಯವಸ್ಥೆಗೆ ಕೈಯಿಕ್ಕಬೇಕಾಗಿ ಬಂತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುದ್ಮಲ್‌ರಂಗರಾವ್‌ರವರು ತನ್ನ ಜೀವನಪರ್ಯಂತ ತಾನು ಬ್ರಾಹ್ಮಣಿಕೆ ಮತ್ತು ಅಗರ್ಭ ಶ್ರೀಮಂತಿಕೆಯಲ್ಲಿ ಹುಟ್ಟಿ ಬೆಳೆದರೂ ಸಮಕಾಲೀನ ದಲಿತರ ಅಮಾನವೀಯ ಬದುಕಿನಲ್ಲಿ ಹೊಸ ಬೆಳಕನ್ನು ಮೂಡಿಸಲು ಅವಿರತವಾಗಿ ಶ್ರಮಿಸಿದ ಮಹಾನ್ ವ್ಯಕ್ತಿಯಾಗಿದ್ದಾರೆ. ದಲಿತರ ಶಿಕ್ಷಣಕ್ಕಾಗಿ ಬೋರ್ಡ್ ಸ್ಕೂಲ್‌ನಂತಹ ಶಾಲೆಗಳನ್ನು ರಚಿಸಿ ತಾನೇ ಪಾಠ ಹೇಳಿ, ತನ್ನ ಖರ್ಚಿನಿಂದ ಈ ಶಿಕ್ಷಕರನ್ನು ನೇಮಿಸಿದಂತಹ ವ್ಯಕ್ತಿ ಬ್ರಿಟಿಷ್ ಸರಕಾರದಿಂದ ದಲಿತರಿಗಾಗಿ ಸರಕಾರಿ ಭೂಮಿಯನ್ನು ಕಾಯ್ದಿರಿಸಲು ಅವಿರತವಾಗಿ ದುಡಿದಂತಹ ಕುದ್ಮಲ್‌ರವರು ತನ್ನ ಬಂಧುಬಳಗ ಮತ್ತು ಜಾತಿಬಾಂಧವರಿಂದ ಪರಿತ್ಯಕ್ತಗೊಂಡು ದಲಿತರ ಒಡನಾಟದಲ್ಲಿಯೇ, ಅಂತಿಮ ದಿನಗಳಲ್ಲಿ ಕೊನೆಯುಸಿರೆಳೆದಂತಹವರು. "ದಲಿತನೊಬ್ಬ ಶಿಕ್ಷಣ ಪಡೆದು ಆತ ಕಾರಿನಲ್ಲಿ ಹೋಗುವಾಗ ಎದ್ದೇಳುವ ಧೂಳು ನನ್ನ ನೆತ್ತಿಗೆ ಹಾರಿ ಬಂದು ಮುತ್ತಿದ್ದಾಗ ನನ್ನ ಜನ್ಮ ಸಾರ್ಥಕ" ಎಂಬ ಮಾತುಗಳನ್ನು ಹೇಳಿದ ವ್ಯಕ್ತಿಗೆ ಸ್ವತಂತ್ರ ಭಾರತದ ಸರಕಾರದ ಸಮಾಜಕಲ್ಯಾಣ ಇಲಾಖೆ ನೀಡುತ್ತಿರುವ ಗೌರವ ಎಂತಹುದು ಎಂಬುದಕ್ಕೆ ಇದುವೇ ಸಾಕ್ಷಿ. ಸಾಲದು ಎಂಬುದಕ್ಕೆ ಹಾಸ್ಟೇಲಿಗೆ ಅವರ ಹೆಸರನ್ನು ಇಟ್ಟು ಈ ರೀತಿ ಅವಮಾನ ಮಾಡುತ್ತಿದ್ದಾರೆ.

ಪರಿಶಿಷ್ಟ ಜಾತಿ/ ಪಂಗಡದ ವಿದ್ಯಾರ್ಥಿನಿಯರು ಶಾಲೆಗಳಿಗೆ ಬರುತ್ತಿರುವುದೇ ಅಪರೂಪದ ಘಟನೆಯಾಗಿದೆ. ಕಿತ್ತು ತಿನ್ನುವ ಬಡತನ ಕತ್ತು ಹಿಸುಕುತ್ತಿದೆ. ಇಂತಹ ಸನ್ನಿವೇಶದಲ್ಲಿ ಹಾಸ್ಟೇಲ್ ಸೌಲಭ್ಯ ಶಿಕ್ಷಣ ನೀಡುವ ಮುಂದ... ವ ತಾಣ ಮಾತ್ರವಲ್ಲ ಹೊಟ್ಟೆಯ ಹಸಿವು ಮತ್ತು ಮೈಗೆ ಉಡುಪು ನೀಡುವ ಸಾಮಾಜಿಕ ಆರ್ಥಿಕ ತಾಣವೂ ಹೌದು.

ಇಂತಹ ದೋರಣೆಯ ವಿರುದ್ಧ ಜುಲೈ ತಿಂಗಳಿನಿಂದಲೇ ಡಿವೈಎಫ್ಐ, ಡಿಎಸ್ಎಸ್ ಮನವಿ, ಭೇಟಿ ನೀಡುತ್ತಾ ವಿದ್ಯಾಭ್ಯಾಸ ಮುಂದುವರಿಸಲು ಅವಕಾಶ ಕಲ್ಪಿಸಬೇಕೆಂದು ಜಿಲ್ಲಾಧಿಕಾರಿ ಸಮಾಜಕಲ್ಯಾಣ ಅಧಿಕಾರಿಗಳಿಗೆ ಮನವಿ ಅರ್ಪಿಸಿತು. ಪ್ರತಿಭಟನಾ ಕಾರ್ಯಕ್ರಮವನ್ನು ರೂಪಿಸಿತು. ರಾಜ್ಯ ಸಮಾಜ ಕಲ್ಯಾಣ ಇಲಾಖೆಯಿಂದ ಹೆಚ್ಚುವರಿ ಸೀಟಿನ ಪರವಾನಗಿ ಪಡೆಯುತ್ತೇನೆಂದು ಕಾಲಹರಣ ಮಾಡಿದ ನಾರಾಯಣ ರೆಡ್ಡಿ ಎನ್ನುವ ಸಮಾಜ ಕಲ್ಯಾಣ ಅಧಿಕಾರಿ ಅಗಸ್ಟ್ ತಿಂಗಳಾದರೂ ಕೇವಲ ಎರಡು ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ನೀಡಿದರು. ಇತ್ತ ಗತಿಯಿಲ್ಲದ ಸುಮಾರು 15 ಮಂದಿ ವಿದ್ಯಾರ್ಥಿನಿಯರಿಗೆ ಶಿಕ್ಷಣಕ್ಕೆ ತಿಲಾಂಜಲಿ ಇಟ್ಟಿದ್ದಾರೆ. ಉಳಿದಂತೆ ಕೆಲವರು ತಮ್ಮ ಸಂಬಂಧಿಕರ ಮನೆಯಿಂದ ಶಾಲೆಗೆ ಹೋಗುತ್ತಿದ್ದಾರೆ. ಜಿಲ್ಲೆಯ ಉಸ್ತುವಾರಿ ಮಂತ್ರಿ ಕೆ.ರಮಾನಾಥ ರೈ ರವರಿಗೆ ಇದಾವುದರ ಪರಿವೆಯೇ ಇಲ್ಲ. ದಲಿತರ ಪ್ರಶ್ನೆಗಳನ್ನು ಅರಿಯುವ ಮನಸ್ಸೂ ಇಲ್ಲ. ಶಾಲೆಗೆ ಬರುತ್ತಿರುವುದೇ ಅಪರೂಪ, ಬಂದಂತಹ ಕಲಿಯಲು ಆಶೆ ಇರುವ ವಿದ್ಯಾರ್ಥಿಗಳನ್ನು ಅವಕಾಶ ವಂಚಿತರನ್ನಾಗಿಸಿರುವುದು ಅಕ್ಷಮ್ಯ ಸಂವಿಧಾನ ವಿರೋಧಿಯಾಗಿದೆ. ಆದುದರಿಂದ ಸರಕಾರದ ಈ ನಿರ್ಧಾರವನ್ನು ಪ್ರತಿಭಟಿಸಿ ಮತ್ತು ತನಿಖೆಗಾಗಿ ಎಸ್.ಸಿ, ಎಸ್.ಟಿ ಆಯೋಗಕ್ಕೆ ಮನವಿ ಸಲ್ಲಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಂತಹ ಉತ್ತಮ ಶೈಕ್ಷಣಿಕ ವಾತಾವರಣವಿರುವ ಜಿಲ್ಲೆಯಲ್ಲೇ ಈ ಪರಿಸ್ಥಿತಿಯಾದರೆ ಇನ್ನು ಉಳಿದಂತಹ ಹಿಂದುಳಿದಿರುವ, ಗುಡ್ಡಗಾಡು ಜನರಿರುವ ಜಿಲ್ಲೆಗಳ ಪರಿಸ್ಥಿತಿ ಹೇಗಿರಬಹುದು?

ಕೃಷ್ಣಪ್ಪ ಕೊಂಚಾಡಿ

ಜ್ಞಾನವಂತರ ದಾರಿ ತಪ್ಪಿಸು... ಅಜ್ಞಾನಗಳು

ಇತ್ತೀಚೆಗೆ ಮೈಸೂರಿಗೆ ಒಂ...
ಕಾರ್ಯಕ್ರಮ ನಿಮಿತ್ತ ಬೇಟಿ ನೀಡಿದ ಪ್ರ...
ಗಾಯಕ ಪದ್ಮಭೂಷಣ ಡಾ। ...
ಬಾಲಮುರಳಿ ಕೃಷ್ಣರವರು ಪತ್ರಕರ್ತರೊಂ...
ಮಾತನಾಡುತ್ತ ಕರ್ನಾಟಕ ಸರಕಾರ ...
ಮಳೆಗಾಗಿ ಕೋಟ್ಯಾಂತರ ರೂಪಾ...
ವ್ಯಯಿಸುತ್ತಿದ್ದು ಅದಕ್ಕೆ ಬದಲಾಗಿ ...
ಆಮಂತ್ರಣ ನೀಡಿದ್ದರೆ ಸಂಗೀತದಿಂದ ...
ಬರಿಸುತ್ತಿದೆ ಎಂಬುದಾಗಿ ಹೇಳಿರುವ...
ವರದಿಯಾಗಿದೆ. ಈ ಹಿಂದೆಯೂ ...
ಪ್ರದೇಶ ಹಾಗೂ ಬಳ್ಳಾರಿಯಂ...
ಬರಪೀಡಿತ ಪ್ರದೇಶದಲ್ಲಿ
ಸಂಗೀತದಿಂದಲೇ ಮಳೆ ತರಿಸಿದ...
ಎಂಬುದಾಗಿಯೂ ಹೇಳುತ್ತಾ ಸದುದ್ದೇಶ...
ಮಾತ್ರ ಹಾಡುತ್ತೇನೆ ಎಂದರೂ, ಬಹು...
ಸಂಗೀತದಿಂದ ಮಳೆ ತರಿಸುವ ವಿ...
ಮಾನ್ಯಮುಖ್ಯಮಂತ್ರಿ ಎಸ್.ಎಂ. ಕೃಷ್ಣರ...
ತಿಳಿಸಿರಲಿಕ್ಕಿಲ್ಲ ತಿಳಿದಿದ್ದರೆ ಖಂಡಿತ...
ಕೋಟ್ಯಾಂತರ ರೂಪಾಯಿ ವೆ...
ಮುಖ್ಯಮಂತ್ರಿಯವರು ಕೈ ಹಾಕುತ್ತಿರ...
ಇನ್ನಾದರೂ ಮುಖ್ಯಮಂತ್ರಿಯ...
ಎಚ್ಚೆತ್ತುಕೊಳ್ಳುವರೇ? ಬಹು...
ಮಹನೀಯರನ್ನೆ ನಮ್ಮ ರಾಜ್ಯದ ...
ದೇಶದ ಘನ ಗಂಭೀರ ಸಮಸ್...
ಪರಿಹಾರಕ್ಕಾಗಿಯೇ ಬಳಸಿ...
ಬಹುದಾಗಿದೆ. ಇಂದು ರಾಜ್ಯದಲ್ಲಿ ಭೀಕ...
ತಲೆದೋರಿದೆ. ಬರದ ಪರಿಣಾಮ...
ತಿಳಿದೇ ಇದೆ. ಜನ ಗುಳೆ ಹೋಗುತ್ತಿ...
ಬರದ ಹೆಸರಲ್ಲಿ ಅಧಿಕಾರಿಗಳು ಹಬ್ಬ...
ಉಣ್ಣುತ್ತಿದ್ದಾರೆ. ಮಳೆ ಎಂಬ...
ಸಕಾಲಿಕವಾಗಿ ಬಂದರೆ ಇದಕ್ಕೆ ದೊ...
ಆದಂತೆಯೇ. ಇದಕ್ಕೆ ಬಾಲಮುರಳಿ ಕೃಷ್ಣ...
ಅತೀ ಕಡಿಮೆ ಖರ್ಚಿನ ಸಂಜೀವಿನಿಯ...
ಈ ಮಹನೀಯರನ್ನು ಸರಿಯ...
ಸಮಯದಲ್ಲಿ ಬಳಸಿಕೊಂಡಿದ್ದರೆ, ...
ನೀರಿನ ಸಮಸ್ಯೆ ಸಮಸ್ಯೆಯೇ ...
ಯಾವುದ್ಯಾವುದೋ ನಿರಾವರಿ ಯೋಜ...
ಅಕ್ಕಪಕ್ಕದ ರಾಜ್ಯಗಳು ಕಿತ್ತಾಡುವ...
ಇಲ್ಲ. ರಾಜ್ಯ ಸುಭಿಕ್ಷದಿಂದಿರಬ...
ಬರದಂತೆ ಅತಿವೃಷ್ಟಿ ಕೂಡ ಕೆಲವು ರಾ...
ಅಪತ್ತೇ ಆಗಿದೆ. ಮಹನೀಯರೇ ಹೇ...
ಹಾಡಿನಿಂದಲೇ ಅತಿವೃಷ್ಟಿ ತಡೆಯು...
ಇರುವ ಇವರಿಗೆ ಮೊದಲ ...
ಸಿಗುವುದಂತೂ ಖಂಡಿತ. ಆದರೆ ...
ಸಂಶಯ ಮೂಡುತ್ತಿದೆ. ಮಹೋ...
ಇರುವ ಇವರು ಮಾನ್ಯ ಮುಖ್ಯಮ...
ಆಮಂತ್ರಣವಿಲ್ಲದೆ ಹಾಡ...
ಅಸಾಧ್ಯವಾಗಿದೆ! ಹುಲುಮಾ...
ಆಹ್ವಾನಕ್ಕೆಲ್ಲ ಹಾಡಲಾಗುತ್ತ...
ಬರದಿಂದ, ಅತಿವೃಷ್ಟಿಯಿಂದ ಹು...
ಸಾಯುವುದು ದೈವೇಚ್ಛೆಯಲ್ಲವೆ.
ಸಂಗೀತ ಲೋಕದಲ್ಲಿ ಖ್ಯಾತರೆನಿ...
ಹಲವಾರು ಪ್ರಶಸ್ತಿಗಳಿಗೆ ಪಾ...
ಮಹನೀಯರ ಬಗ್ಗೆ ನಮಗೆ ...
ಗೌರವವಿದೆ. ಆದರೆ ಮಂತ...
ಮಾವಿನಕಾಯಿ ಉದುರುತ್ತದೆ. ಸಂಗೀ...
ಮಳೆ ಬರುತ್ತದೆ ಎನ್ನುವ...
ಮೂಢನಂಬಿಕೆಯನ್ನು ಇಂತಹವರು...
ತಮ್ಮ ಪ್ರಚಾರಕ್ಕೆ ಬಳಸಿಕೊಳ್ಳುವುದು...
ವೈಚಾರಿಕವಾಗಿ ಮತ್ತಷ್ಟು ...
ತಳ್ಳುತ್ತಿರುವುದು ವಿಷಾದನೀಯ.

ವಿ. ಚಂದ್ರ...

ಬರದ ರುಚಿ ಕಂಡ ಮಂಡ್ಯ

ಬಹಳಷ್ಟು ನೀರಾವರಿ ಪ್ರದೇಶವಾಗಿರುವ ಮಂಡ್ಯ ಈಗ ಬರದ ದವಡೆಗೆ ಸಿಲುಕಿದೆ. ಬದುಕಲು ನಗರಗಳತ್ತ ವಲಸೆ ಆರಂಭವಾಗಿದೆ. ಸದ್ಯದ ಸ್ಥಿತಿಯನ್ನು ವಿವರಿಸುವ ಲೇಖನವಿಲ್ಲಿ.

ಎನ್.ಎಲ್.ಭರತರಾಜ್

ನಾನು ಹುಟ್ಟಿಂದಿನಿಂದ ಆ ರಸ್ತೆಯಲ್ಲಿ
ಉಗಾಡಿ ಬೆಳೆದಿದ್ದೇನೆ. ಆಗ ಸುತ್ತೆಲ್ಲಾ ಹಸಿರು
ಗೊಳಿಸುತ್ತಿತ್ತು. ರಸ್ತೆಯ ಅಕ್ಕಪಕ್ಕ ಬೆಳೆದುನಿಂತ
ಬ್ಬ ಬೀಸುವ ಗಾಳಿಗೆ ತಲೆಬಾಗಿ
ಗತಿಸಿದಂತಾಗುತ್ತಿತ್ತು. ಭತ್ತದ ಗದ್ದೆಗಳು ಭೂಮಿಗೆ
ಸಿರು ಸೆರಗು ಹೊದಿಸಿದಂತೆ ಕಂಗೊಳಿಸುತ್ತಿದ್ದವು.
ದರೆ ಈಗ ಬಣಗುಟ್ಟುವ ಬರಡು ಭೂಮಿ!
ಲೇಕರು ಈಗಲೂ ಮಂಡ್ಯವೆಂದರೆ 'ಗೌಡ್ರ ಗದ್ಲ'
ಎಂದೇ ಭಾವಿಸುತ್ತಾರೆ. ಸಕ್ಕರೆ ಸೀಮೆಯ ಸಿಹಿ
ಮಕಿನ ಜನ ಎಂದೇ ತಿಳಿದಿದ್ದಾರೆ. ಹಣಕಾಸಿನಲ್ಲಿ
ತ್ರವಾಗಿರುವವರೆಂದುಕೊಂಡಿದ್ದಾರೆ. ಆದರೆ ಈಗ
ಸ್ತವ ಸಂಗತಿ ಬೇರೆಯಾಗಿದೆ.

ಹಿಂದೆ ಹೈದರಾಲಿ ಮತ್ತು ಟಿಪ್ಪುವಿನ
ತಿಯಿಂದ ಪಾಳೆಗಾರರ ಹಿಡಿತದಲ್ಲಿದ್ದ ಭೂಮಿ
ಚೆಲ್ಪಟ್ಟದ್ದರಿಂದ ರೈತರು ಸಣ್ಣಪುಟ್ಟ ಭೂಮಿಯ
ಕೆಯರಾಗಿದ್ದಾರೆ. ನೂರಾರೂ ಎಕರೆಯ
ಮೀನಿರುವವರು ಯಾರೂ ಇಲ್ಲಿಲ್ಲ. ಭೂಮಾಲಕ
ಮನೆಯಲ್ಲಿ ಜೀತಕ್ಕಿರುವ
ದಾಹರಣೆಗಳು ಅಪರೂಪ. ಆದರೆ
ಕೂಲಿಕಾರರು ಸಾಕಷ್ಟು
ಖ್ಯೆಯಲ್ಲಿದ್ದಾರೆ. ಅದರಲ್ಲೂ
ತೇಕ ದಲಿತರು ಕೂಲಿಯನ್ನೇ
ಬದುಕುತ್ತಿದ್ದಾರೆ. ಈ ಜಿಲ್ಲೆಯಲ್ಲಿ
ತರೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.
ಲಿಗರು ರಾಜಕೀಯವಾಗಿ ಸಾಕಷ್ಟು
ಬಲ್ಯ ಹೊಂದಿದ್ದಾರೆ. ಜಿಲ್ಲೆಯಲ್ಲಿ
ರದೇ ನಿರ್ಣಾಯಕ ಪಾತ್ರ. ಸಾಕಷ್ಟು
ರಗಳು ಬಂದು ಹೋಗಿವೆ. ಈ
ಯ ಎಷ್ಟೋ
ತ್ರಿಮಹೋದಯರುಗಳು ಬಂದು
ಗಿದ್ದಾರೆ, ಈಗಲೂ ಇದ್ದಾರೆ. ಆದರೆ
ರಾರು ಜಿಲ್ಲೆಯ ಬೆಳವಣಿಗೆಗೆ ಗಮನಹರಿಸಿದ್ದು
ಕ್ಕಷ್ಟೇ. ಅವರ ಬಾಲಬಡುಕರಷ್ಟೇ
ದ್ದರವಾಗಿದ್ದಾರೆ. ಇತ್ತೀಚೆಗೆ ಹೆಚ್ಚುತ್ತಿರುವ
ತರ ಮೇಲಿನ ದೌರ್ಜನ್ಯಗಳಿಗೆ ಇವರ ಮೊಸಳೆ
ರಿನ ಸಾಂತ್ವನವಷ್ಟೇ ಸಿಕ್ಕಿದ್ದು.

ಇರುವ ಅಲ್ಪಸ್ವಲ್ಪ ಜಮೀನಿನಿಂದ ಕಬ್ಬು ಬೆಳೆದು
ಕಾಣುತ್ತಿದ್ದ (ಗೌಡ) ಈಗ ಕಂಗಾಲಾಗಿದ್ದಾನೆ.
, ದೌಲತ್ತುಗಳೆಲ್ಲಾ ಇತಿಹಾಸ ಸೇರಿವೆ.
ಷ್ಯ ನೆನೆದು ಮಂಕಾಗಿದ್ದಾನೆ. ಬೆಳೆದ ಬೆಳೆಗೆ
ಯಿಲ್ಲ. ಸಕ್ಕರೆ ಕಾರ್ಖಾನೆಗೆ ಕಬ್ಬು ಹಾಕಿ
ರ್ನಾಲ್ಕು ವರ್ಷ ಕಳೆದರೂ ಬಾಕಿ
ತಿಯಾಗಿಲ್ಲ.

ಕಾವೇರಿ ವಿವಾದ ಆಗಾಗ ತಲೆನೋವಾಗಿ
ಮಿಸುತ್ತಿದೆ. ಎಲ್ಲರಿಗೂ ಇದರಲ್ಲಿ ಪಾಲು
! ವಿವಾದದ ಮೂಲವಾದ ಕೆಆರ್‌ಎಸ್
ವುದು ಈ ಜಿಲ್ಲೆಯಲ್ಲೇ. ಹೀಗಾಗಿ ಇಲ್ಲಿಂದ
ರು ಹೋಬಳಿಗಳಿಗೆ ನೀರು ಹರಿಯುವುದಿಲ್ಲ.
ಗೂ ಮಳೆಯನ್ನೇ ನಂಬಿ ಕೂತಿದ್ದಾರೆ ಜನ.

ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಬೋರ್ ಕೊರೆಸಿದರೂ ನೀರಿಲ್ಲ. ಈಗ ಆವರಿಸಿರುವ ಬರದಿಂದ ಜೀವನವೇ ದುಸ್ತರವಾಗಿದೆ. ಬೆಳೆದ



ಮಕ್ಕಳು ಕೈಗೆ ಕೆಲಸವಿಲ್ಲದೆ, ಜೇಬಲ್ಲಿ ಕಾಸಿಲ್ಲದೆ ಪೇಟೆಯ ಕಡೆಗೆ ಮುಖ ಮಾಡಿದ್ದಾರೆ. ವಿದ್ಯಾವಂತ ಯುವಕರ ದಂಡು ಬೆಂಗಳೂರಿಗೆ ಲಗ್ಗೆ ಇಟ್ಟಿದೆ. ಹೋಟೆಲ್‌ನಲ್ಲಿ ತಟ್ಟೆ ತೊಳೆಯಲು ಸಿದ್ಧ, ಮಾರ್ಕೆಟ್‌ನಲ್ಲಿ ಮೂಟೆ ಹೊರಲೂ ರೆಡಿ, ಯಾವುದಾದರೂ ಸರಿ ಕೆಲಸಬೇಕು! ಮೀಸೆ ತಿರುವುತ್ತಿದ್ದ ಗೌಡನ ಪಾಡು ಇಲ್ಲಿಗೆ ಬಂದಿದೆ!

ಈ ಬರ ದರ್ಪವನ್ನು ಕಡಿಮೆ ಮಾಡಿಬಿಟ್ಟಿದೆ. ಈ ವರ್ಷ ನಡೆದ ಮದುವೆಗಳಲ್ಲಿ ಶೇ.50 ಭಾಗ ಅದ್ದೂರಿ ಮದುವೆಗಳು ಕಡಿಮೆಯಾಗಿವೆ. ಅಲ್ಲದೆ ಜಮೀನು ಮತ್ತು ಸೈಟುಗಳನ್ನು ಕೊಂಡುಕೊಳ್ಳಲು ನಡೆಯುತ್ತಿದ್ದ ಪೈಪೋಟಿ ನಿಂತು ಹೋಗಿ ಕೊಂಡುಕೊಳ್ಳುವವರಿಲ್ಲದ ಪರಿಸ್ಥಿತಿ ಇದೆ. ರೈತರಿಗೆ ಚಾಮುಂಡೇಶ್ವರಿ ಸಕ್ಕರೆ ಕಂಪನಿಯಿಂದ ಬರಬೇಕಾದ ಬಾಕಿ ಹಣ ಮೂರ್ನಾಲ್ಕು ವರ್ಷ ಆಗಿದೆ ಜೊತೆಗೆ ಇತ್ತೀಚೆಗೆ ಸರಬರಾಜು ಮಾಡಿರುವ ಕಬ್ಬಿಗೆ ಎಂಟತ್ತು ತಿಂಗಳಾದರೂ ಹಣ ಪಾವತಿ ಮಾಡದೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ತಾಲೂಕಿನಲ್ಲಿ ಬಹಳ ಮಂದಿ ಕೂಲಿಯನ್ನೇ ನಂಬಿ ಬದುಕು ನಡೆಸುತ್ತಿದ್ದಾರೆ. ಇವರಲ್ಲಿ ದಲಿತರ ಸಂಖ್ಯೆ ಹೆಚ್ಚಿದೆ. ಕೂಲಿ ಸಮಸ್ಯೆ ಎಷ್ಟಿದೆ ಎಂದರೆ ನಮ್ಮ ಗ್ರಾಮವು ಮಳವಳ್ಳಿ ಬೆಂಗಳೂರು ಹೆದ್ದಾರಿ ಪಕ್ಕದಲ್ಲಿರುವುದರಿಂದ ರಸ್ತೆಯ ಉದ್ದಕ್ಕೂ ನಾಲ್ಕೈದು ಜನರ ಎಂಟತ್ತು ಗುಂಪು ಸದಾ ನಿಂತಿರುತ್ತಿತ್ತು. ಅದನ್ನು ಕಂಡ ನಾನು ನೀವು ಯಾರು ಏಕೆ ಇಲ್ಲಿ ನಿಂತಿದ್ದೀರಿ ಎಂದು ಪ್ರಶ್ನಿಸಿದೆ. ಆಗ ಅವರು ನಾವು ಕಾವೇರಿ ನದಿ ಪಕ್ಕದಲ್ಲಿರುವ ಹಳ್ಳಿಯವರು ಬೆಂಗಳೂರಿನಿಂದ ಖಾಲಿ ಲಾರಿಗಳು ಮರಳು ತುಂಬಲು ನದಿಗೆ ಬರುತ್ತವೆ. ಆದರೆ ಅಲ್ಲಿ ಕೂಲಿಕಾರರ ಸಂಖ್ಯೆ ವಿಪರೀತವಾಗಿರುವುದರಿಂದ ನಮಗೆ ಇಲ್ಲಿ ಕೂಲಿ ಸಿಗುವುದಿಲ್ಲ. ಅದಕ್ಕಾಗಿ ಇಲ್ಲಿಗೆ ಬಂದು ಲಾರಿಯನ್ನು ಹಿಡಿದು ಮರಳು ತುಂಬಲು ಹೋಗುತ್ತೇವೆ. ಆಗ ನಮಗೆ ಕೂಲಿ ಗ್ಯಾರಂಟಿಯಾಗುತ್ತದೆ ಎಂದು ಹೇಳಿದರು. ಅವರು ಬಂದಿದ್ದ ಸ್ಥಳಕ್ಕೂ ನದಿಗೂ ಸುಮಾರು ಮೂವತ್ತು ಕಿಲೋ ಮೀಟರ್ ದೂರ ಆಗುತ್ತಿತ್ತು. ಇತ್ತೀಚೆಗೆ ಇಲ್ಲಿಗೆ ಬರುವವರ ಕೂಲಿಕಾರರ ಸಂಖ್ಯೆ ಹೆಚ್ಚಾಗಿರುವುದರಿಂದ ಇಲ್ಲಿಯೂ ಪೈಪೋಟಿ ಉಂಟಾಗಿ ಕೂಲಿ ಇಲ್ಲದೆ ಮನೆಗೆ ಹೋಗುವ ಸ್ಥಿತಿ ಕಂಡುಬರುತ್ತದೆ. ತಾಲ್ಲೂಕಿನ ಗ್ರಾಮದೇವತೆಪುರ, ಮಾಗನೂರು ಕಾಲೊನಿ, ಕೂನನಪುರ, ಹೆಬ್ಬಣಿ, ಲಂಗಾಣಪುರ ಮುಂತಾದ ಹಳ್ಳಿಗಳಿಂದ ಬೆಂಗಳೂರಿಗೆ ವಲಸೆ ಹೋಗಿದ್ದಾರೆ. ಹಾಗೂ ಮುಖ್ಯವಾಗಿ ಯುವಕರು ಉದ್ಯೋಗಕ್ಕಾಗಿ ವಲಸೆ ಹೋಗದಿರುವ ಯಾವೊಂದು ಹಳ್ಳಿಯೂ ತಾಲೂಕಿನಲ್ಲಿ ಸಿಗುವುದಿಲ್ಲ.

ಒಂದು ದಿನ ನಮ್ಮ ಸಂಬಂಧಿಯೊಬ್ಬರ ಹುಡುಕಿಕೊಂಡು ಹೊಸೂರು ರಸ್ತೆಯ ಹೆಬ್ಬಗೋಡಿಯ ಪಕ್ಕವಿರುವ ತಿರುಪಾಳ್ಯಕ್ಕೆ ಹೋದೆ. ಮಳವಳ್ಳಿಯವರು ಎಲ್ಲಿ ವಾಸವಾಗಿದ್ದಾರೆ ಎಂದು ಕೇಳಿದೆ. ಆಗ ಅವನು ಈ ಏರಿಯಾದಲ್ಲಿ ಬಹಳ ಮಂದಿ ಮಳವಳ್ಳಿಯವರೇ ಇದ್ದಾರೆ. ನಿಮಗೆ ಯಾರು ಬೇಕು ಹೆಸರು ಹೇಳಿ ಎಂದ. ಅವನು ಸಹ ಮಳವಳ್ಳಿಯವನೇ ಆಗಿದ್ದ. ಆಗ ನಾನು ಅವನನ್ನು ಆಶ್ಚರ್ಯದಿಂದ ನೋಡಿದೆ. "ಇನ್ನೇನು ಮಾಡುತ್ತಾರೆ, ಊರಿನಲ್ಲಿ ಮಳೆಯಿಲ್ಲ, ಬೆಳೆಯಿಲ್ಲ, ನೀರಿಲ್ಲ, ಏನು ಮಾಡುವುದು? ಕೆಲಸಕ್ಕಾಗಿ ಇಲ್ಲಿಗೆ ಬಂದೆವು. ಆದರೆ ಇಲ್ಲಿಯ ಪರಿಸ್ಥಿತಿ ಊರಿಗಿಂತ ಭಿನ್ನವಿಲ್ಲ" ಎಂದ. ಮೂರ್ನಾಲ್ಕು ವರ್ಷಗಳ ಹಿಂದೆ ಕೆಲಸಕ್ಕೆ ಸೇರಿದಾಗ 1800 ರಿಂದ 2000 ರೂ ಕೊಡುತ್ತಿದ್ದರು. ಈಗ 900-1000 ಕೊಡುತ್ತಾರೆ ಎಂದನು. ಅಷ್ಟರಲ್ಲಿ ಮತ್ತೊಬ್ಬ ನನ್ನ ಪರಿಚಿತ ಬಂದು ಮಧ್ಯೆ ಬಾಯಿ ಹಾಕಿ ಅಷ್ಟೆ ಕೊಡಲಿ, ಮೊದಲು ಕೆಲಸ ಸಿಕ್ಕಲಿ ಎಂದ. ಇನ್ನೊಬ್ಬ ನಾನು ನನ್ನ ಹೆಂಡತಿ ಹಾಗೂ ಮಕ್ಕಳನ್ನು ಶಾಲೆ ಬಿಡಿಸಿ ಕರೆದುಕೊಂಡು ಬಂದಿರುವೆ. ಹತ್ತನ್ನೆರಡು ವರ್ಷದ ಮಕ್ಕಳು ಎಲ್ಲ ಸೇರಿ ದುಡಿಯುತ್ತೇವೆ. ಪಕ್ಕದಲ್ಲಿ ಮರಗಳು, ಮುಳ್ಳಿನ ಪೊದೆಗಳಿರುವುದರಿಂದ ಸೌದೆಗಳನ್ನು ಆಯ್ದುಕೊಂಡು ಬಂದು ಮನೆಯ ಹೊರಗಡೆ ಅಡುಗೆ ಮಾಡುತ್ತೇವೆ, ನಾನು ಎಂ.ಟಿ.ಆರ್.ನಲ್ಲಿ ಮೂಟೆ ಹೊರುತ್ತೇನೆ ಎಂದಾಗ ಕರುಳು ಚುರುಕ್ಕೆನ್ನದೆ ವಿಧಿಯಿರಲಿಲ್ಲ.

ಆಳುವ ವರ್ಗಕ್ಕೆ ಇದಾವುದರ ಬಗ್ಗೆಯೂ ಪರಿವೇ ಇಲ್ಲ. ಬರ ಪರಿಹಾರ ಕಾಮಗಾರಿ ಮಂಜೂರಾಗಿದೆ, ಕೂಲಿಗಾಗಿ ಕಾಳು ಬಿಡುಗಡೆಯಾಗಿದೆ.. ಹೀಗೆ ಇನ್ನೂ ಏನೇನೋ ಪ್ಯಾಕೇಜ್‌ಗಳಂತೆ! ಆದರೆ ಇದಾವುದೂ ಬಡ ಬೋರೇಗೌಡನತ್ತ ಸುಳಿಯುವುದೂ ಇಲ್ಲ. ಆಳುವ ಜನರ ಹಿಂಬಾಲಕರ ಜೇಬಿನ 'ಬರ' ನೀಗಿಸಲಿಕ್ಕಾಗಿಯೇ ಇವುಗಳಿವೆಯೇನೋ ಎನ್ನಿಸುವಂತಾಗಿದೆ. ಈ ಜನರ ಗೋಳು ಇದ್ದದ್ದೇ, ಇವರಿಂದ ದೂರವಿದ್ದಷ್ಟು ಒಳ್ಳೆಯದೆಂದು ಭಾವಿಸಿರುವ ಮಂತ್ರಿಗಳು-ಶಾಸಕರು ಬೆಂಗಳೂರಿನಲ್ಲೇ ಝಾಂಡಾ ಹೂಡಿದ್ದಾರೆ. ಬದುಕಿನ ಬವಣೆಗಳನ್ನು ಹೇಳಿಕೊಳ್ಳಲು ಬರುವ ಜನರನ್ನು ಗದರಿಸಿ ಹೊರಗಟ್ಟುತ್ತಾರೆ! ನಮ್ಮ ಕಷ್ಟಸುಖಕ್ಕಾಗುವವರೆಂದು ನಾವೇ ಆರಿಸಿದ ಜನ ಪ್ರತಿನಿಧಿಗಳಿವರು!

○

ಕತ್ತಲೆಯೊಂದಿಗೆ ಹೊಡೆದಾಡುತ್ತಿರುವ ಹಣತೆ

ಇಂತಹ ಪರಿಸ್ಥಿತಿಯಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ), ಜೆಎಂಎಸ್, ಕೃಷಿಕೂಲಿಕಾರರ ಸಂಘ ಮತ್ತು ಪ್ರಾಂತ ರೈತ ಸಂಘಟನೆಗಳು ಮನೆಯೊಳಗಿನ ಹಣತೆಯ ಬೆಳಕಿನಂತೆ ಈ ಜನರ ನೋವು ನಲಿವಿಗೆ ಸ್ಪಂದಿಸುತ್ತಿವೆ. ಭಾಗ್ಯಜ್ಯೋತಿ ವಿದ್ಯುತ್ತಿಗಾಗಿ, ಹಳದಿ ಕಾರ್ಡು ಶೀಘ್ರವಾಗಿ ಹಂಚಬೇಕು ಮತ್ತು ಬಿಪಿಎಲ್ ಪಟ್ಟಿಯನ್ನು ನ್ಯಾಯಸಮ್ಮತವಾಗಿರಬೇಕು, ಆಶ್ರಯ ಮನೆಗಳಿಗೆ ಶೀಘ್ರ ಗ್ರಾಂಟ್ ನೀಡಬೇಕು, ಶಾಲಾ ಕಾಲೇಜುಗಳ ಶುಲ್ಕ ಮತ್ತ ಡೊನೇಷನ್ ಕಡಿಮೆಯಾಗಬೇಕು, ಹಕ್ಕು ಪತ್ರ ನೀಡಬೇಕು, ಮಹಿಳಾ ಸ್ವಸಹಾಯ ಸಂಘಗಳಿಗೆ ಸುತ್ತು ನಿಧಿ ಮತ್ತು ಸಬ್ಸಿಡಿ ಸಾಲ ನೀಡಬೇಕು, ಹೆರಿಗೆ ಭತ್ಯ ನೀಡಬೇಕು, ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾದ ಚಿಕಿತ್ಸೆ ದೊರೆಯಬೇಕು, ಕೂಲಿಗಾಗಿ ಕಾಳು ಯೋಜನೆ ಸಮರ್ಪಕವಾಗಿ ಜಾರಿಯಾಗಬೇಕು, ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರ ತೊಲಗಬೇಕು ಮತ್ತು ಮಹಿಳೆ-ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಬೇಕೆಂದು ಒತ್ತಾಯಿಸಿ ಅನೇಕ ಹೋರಾಟಗಳನ್ನು ಈ ಸಂಘಟನೆಗಳು ನಡೆಸಿವೆ. ಜನರಲ್ಲಿ ವಿಶ್ವಾಸ ಮೂಡಿಸಿ 'ಹತಾಶರಾಗಬೇಡಿ ಓ ಬಂಧುಗಳೇ, ಮುಂದಿನ ಭವಿಷ್ಯ ನಮ್ಮದು, ಅದಕ್ಕಾಗಿ ನಾವು ಕಾಯುವುದಲ್ಲ; ಅದನ್ನು ಪಡೆಯಲು ಹೋರಾಟದ ದಾರಿಯಲ್ಲಿ ಸಾಗಬೇಕು' ಎಂಬ ಸ್ಫೂರ್ತಿಯೊಂದಿಗೆ ಈ ಸಂಘಟನೆಗಳು ದುಡಿಯುತ್ತಿವೆ.

ಮಂಡ್ಯ ಜಿಲ್ಲೆ: ಇನ್ನೂ ಇಬ್ಬರು ರೈತರ ಆತ್ಮಹತ್ಯೆ

ಮಂಡ್ಯ, ಆ. 29- ಜಿಲ್ಲೆಯಲ್ಲಿ ಸಾಲದ ಹೊರೆಯಿಂದ ಇನ್ನೂ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು ಇದರೊಂದಿಗೆ ಸ್ವಾತಂತ್ರ್ಯ ದಿನಾಚರಣೆಯಿಂದ ಈಚೆಗೆ ಇಲ್ಲಿ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆ ಹನ್ನೆರಡು ದಾಟಿದೆ.
ಮದ್ದೂರು ತಾಲ್ಲೂಕಿನ ... ಮಂಚಯ್ಯ ...




..... ಪ್ರಭುತ್ವ ಭಯೋತ್ಪಾದನೆಗಾಗಿ ಕೂಟವ್ರೋ?

ಪುಟ 5 ರಿಂದ

ದೃಢಪಡಿಸಿದ್ದು, ಆಗ ಆತ ರಕ್ಷಣಾ ಮಂತ್ರಿ ಸ್ಥಾನದಿಂದ ಕೆಳಗಿಳಿಯಬೇಕಾಗಿ ಬಂದಿತ್ತು. ಈ ಕ್ಷಣದಲ್ಲಿ ಕೂಡಾ ಆತ ಯಾಸೆರ್ ಅರಾಫತ್‌ರನ್ನು ಗೃಹಬಂಧನದಲ್ಲಿರಿಸಿದ್ದಾರೆ, ಪ್ಯಾಲೆಸ್ಟೇನಿಯನ್ನರ ಮೇಲೆ ಅಭೂತಪೂರ್ವ ಧಾಳಿಯಗಳನ್ನು ನಡೆಸಲಾಗುತ್ತಿದೆ. ಈ ಮೂಲಕ ಆ ಪ್ರದೇಶದಲ್ಲಿ ಶಾಂತಿ ಸ್ಥಾಪನೆಯ ಸಾಧ್ಯತೆಯನ್ನು ಹಳಿ ತಪ್ಪಿಸುತ್ತಿದ್ದಾರೆ. ಇಸ್ರೇಲ್ ಕಾನೂನು ಬಾಹಿರವಾಗಿ ಆಕ್ರಮಿಸಿಕೊಂಡಿರುವ ಪ್ರದೇಶಗಳನ್ನು ತೆರವು ಮಾಡಲು ಈಗಲೂ ಈ ಶರೋನ್ ನಿರಾಕರಿಸುತ್ತಾರೆ.

ಮತ್ತೊಂದು ದುರಂತವನ್ನು ಕಾಣುತ್ತಿದ್ದೇವೆ, ಆದರೆ ಅದು ಅನಿರೀಕ್ಷಿತವೇನಲ್ಲ. ಮಹಾತ್ಮ ಗಾಂಧಿಯವರನ್ನು ಕೊಂದವರ ಸೈದ್ಧಾಂತಿಕ ರಕ್ತಸಂಬಂಧಿಗಳ ನೇತೃತ್ವದಲ್ಲಿರುವ ವಾಜಪೇಯಿ ಸರಕಾರ ಅಸಂಖ್ಯ ಮುಗ್ಧ ಪ್ಯಾಲೆಸ್ಟೇನಿಯನ್ನರ ರಕ್ತದಿಂದ ತೋಯ್ದ ಕೈಗಳ ಒಬ್ಬ ವ್ಯಕ್ತಿಯನ್ನು ಅದೇ ಗಾಂಧಿಜೀಗೆ ಶ್ರದ್ಧಾಂಜಲಿ ಅರ್ಪಿಸಲು ರಾಜಘಾಟ್‌ಗೆ ಆಹ್ವಾನಿಸಿದೆ! ಆದರೂ ಈ ವಾಜಪೇಯಿ ಸರಕಾರ ಪಥ ಭ್ರಷ್ಟವಾದರೂ ಭಾರತೀಯ ಜನತೆ ಪ್ಯಾಲೆಸ್ಟೇನಿಯನ್ನರ ವಿಮೋಚನಾ ಹೋರಾಟಕ್ಕೆ ತಮ್ಮ ಅಚಲ ಬೆಂಬಲವನ್ನು ಮುಂದುವರಿಸುತ್ತಾರೆ ಎಂದು ಮತ್ತೆ ಮತ್ತೆ, ಪ್ರತೀ ಸಂದರ್ಭದಲ್ಲಿ ಈ ಸರಕಾರಕ್ಕೆ ಹೇಳಬೇಕಾಗುತ್ತದೆ.



ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿಡುತ್ತಿರುವ ಹಿರಿಯ ಸಂಗಾತಿ ಡೇವಿಡ್ ಕರ್ಕಡರು ರೈತ ಚಳುವಳಿ ಬೆಳವಣಿಗೆಯ ತುಣುಕು ಹಂಚಿದ್ದಾರೆ. ಎಂತಹ ದಮನಕಾಂಡದ ಎದುರು ಮಣಿಯದ ಕಮ್ಯುನಿಸ್ಟ್ ಆಂದೋಲನದ ರೋಮಾಂಚಕಾರಿ ಪಾಠ ಇಲ್ಲಿದೆ

‘ನೇಕಾರರ ಜಾಥಾ’ ಉಡುಪಿಯಿಂದ ಮಂಗಳೂರಿಗೆ

ಡೇವಿಡ್ ಕರ್ಕಡ, ಉಡುಪಿ

1948 ರಿಂದ 1951 ರವರೆಗೆ ಬಹಿರಂಗ ಚಟುವಟಿಕೆ ನಡೆಸದಂತೆ ಸರಕಾರ ನಿಷೇಧ ಹೇರಿದ್ದು ಪಕ್ಷವನ್ನು ನಿರ್ಬಂಧಿಸಿದ ಪರಿಣಾಮವಾಗಿ ಪಕ್ಷದ ಮತ್ತು ಕಾರ್ಮಿಕ ಸಂಘದ ಕಛೇರಿಗಳಿಗೂ ಬೀಗಮುದ್ರೆ ಹಾಕಲಾಗಿತ್ತು.

ಈ ಕಾಲಾವಧಿಯಲ್ಲಿ ಹಲವಾರು ಕಾರ್ಯಕರ್ತರ ಮೇಲೆ ಲಾಕಪ್ಪು, ಜೈಲುಗಳಲ್ಲಿಯೂ ತೀವ್ರ ತರದ ದಬ್ಬಾಳಿಕೆ ಪೋಲೀಸರ ಮೂಲಕ ನಡೆಸಲಾಯಿತು. ಅಲ್ಲದೆ ಕಟ್ಲೆಗಳನ್ನು ಹಾಕುವ ಮೂಲಕವೂ ನೂರಾರು ಮಂದಿಯನ್ನು ಒಳಪಡಿಸಲಾಯಿತು. ಈ ರೀತಿ ಹಾಕಲಾದ ಹೆಚ್ಚಿನ ಎಲ್ಲಾ ಕಟ್ಲೆಗಳಲ್ಲಿ ಅಂದಿನ ಮಂಗಳೂರಿನ ಸುಪ್ರಸಿದ್ಧ ವಕೀಲರಾಗಿದ್ದ ಶ್ರೀಮಾನ್ ಭಾಸ್ಕರ ರೈ ರವರು ವಾದಿಸಿ ಹೆಚ್ಚಿನ ಸಂಭಾವನೆಯನ್ನು ಪಡೆಯದೇ ಎಲ್ಲರೂ ನಿರಪರಾಧಿಗಳೆಂದು ಬಿಡುಗಡೆಗೊಂಡರು.

1951 ರಲ್ಲಿ ತೀವ್ರತರದ ಧಾಳಿಯ ನಂತರ, ಉಡುಪಿಯಿಂದ ನೇಕಾರ ಕಾರ್ಮಿಕರ ಜಾತಾವೊಂದು ಹೊರಟು ಕಾರ್ಕಳ ದಾರಿಯಾಗಿ ಸುಮಾರು 56 ಮೈಲಿಗಳಷ್ಟು ದೂರದಲ್ಲಿ ಮಂಗಳೂರನ್ನು ಕೆಂಬಾವುಟದೊಂದಿಗೆ ತಲುಪಿ ಅಲ್ಲಿ ಕೇಂದ್ರ ಮೈದಾನದಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಜಾತಾದ ನೇತೃತ್ವನ್ನು ಸಂಗಾತಿ ಡೇವಿಡ್ ಅಂಚನ್ ಕೊರಂಗ್ರಪಾಡಿ ವಹಿಸಿದ್ದರು. ಜಾತಾದಲ್ಲಿ ಶ್ರೀಗಳಾದ ಕಾಡಿಯ ಸೆಟ್ಟಿಗಾರ, ಡೇವಿಡ್ ಅಂಚನ್ ಅಣ್ಣಯ ಪೂಜಾರಿ, ಬೋಳಪೂಜಾರಿ, ಮಟ್ಟು ಶೀನಪೂಜಾರಿ ಸೇರಿ 16 ಮಂದಿ ಭಾಗವಹಿಸಿದ್ದರು.

ಜಾತಾದ ಉದ್ದಕ್ಕೂ ಕಾಂ.ಎಂ.ಎಚ್.ಕೃಷ್ಣಪ್ಪ ಭೂಗತರಾಗಿದ್ದುಕೊಂಡೇ ಕಾರ್ಕಳ, ಮೂಡಬಿದಿರೆ ಎಲ್ಲಾ ಕಡೆಗಳಲ್ಲಿಯೂ ಜಾತಾದ ಸದಸ್ಯರಿಗೆ ರೈತರು ಮತ್ತಿತರ ಸಹಾಯದಿಂದ ಊಟ, ತಿಂಡಿ, ಕಾಫಿ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾ ಜಾತಾದ ಸದಸ್ಯರಲ್ಲಿ ಹುರುಪು ತುಂಬುತ್ತಾ ಮುನ್ನಡೆಸಲು ಕಾರಣರಾಗಿದ್ದರು. ಬಹಿರಂಗಗೊಳ್ಳುವವರೆಗೆ ಅವರನ್ನು ಬಂದಿಸಲು ಸಾಧ್ಯವಾಗಲೇ ಇಲ್ಲ.

ದೇಶದಲ್ಲಿ ಸಂವಿಧಾನವನ್ನು ಜ್ಯಾರಿಗೊಳಿಸಲಾದ ನಂತರ ಬಂಧಿತರಾಗಿದ್ದವರಲ್ಲಿ ಅನೇಕರು ‘ಹೇಬಿಯಸ್ ಕಾರ್ಪಸ್’ ಅರ್ಜಿಗಳನ್ನು ಕೋರ್ಟಿಗೆ ಸಲ್ಲಿಸಿದ ನಂತರ ಸ್ಥಾನಬದ್ಧತೆಯಲ್ಲಿ ಇಡಲಾಗಿದ್ದ ಹೆಚ್ಚಿನ ಎಲ್ಲಾ (ಬಂಧಿಗಳಾಗಿದ್ದ) ಮುಂದಾಳುಗಳ ಬಿಡುಗಡೆಯಾಯಿತು.

ಈ ಎಲ್ಲಾ ಸಂದರ್ಭಗಳಲ್ಲಿ ಬಂಧನದಲ್ಲಿದ್ದ, ಭೂಗತರಾಗಿದ್ದ ಮತ್ತು ಹೊರಗೆ ಇದ್ದು ಚಟುವಟಿಕೆ ಮುಂದುವರಿಸುತ್ತಲೇ (ಗುಪ್ತವಾಗಿ) ಇದ್ದ ಸಂಗಾತಿಗಳು ತೋರಿಸಿದ ಧೈರ್ಯ ಸಾಹಸ ತ್ಯಾಗಗಳು ಅಪಾರವಾಗಿದ್ದು, ಅಪ್ರತಿಮವಾಗಿತ್ತು.

ಬೀಗಮುದ್ರೆ ಜಡಿದಿದ್ದ(ಆಫೀಸು) ಕಾರ್ಯಾಲಯಗಳೆಲ್ಲವನ್ನು ತೆರವುಗೊಳಿಸಲಾಯಿತು ಎಲ್ಲೆಡೆ ಕೆಂಬಾವುಟ ಮತ್ತೆ ರಾರಾಜಿಸಿತು. ಬಹಿರಂಗ ಚಟುವಟಿಕೆಗಳು ಪ್ರಾರಂಭಗೊಂಡವು.

1952 ರಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ಸಾರಲಾಯಿತು. ಇತಿಹಾಸಪ್ರಸಿದ್ಧ ‘ತೆಲಂಗಾಣ ಹೋರಾಟ’ವನ್ನು ಹಿಂತೆಗೆಯಲು ನಿರ್ಧರಿಸಲಾದಂತೆ ಪಕ್ಷವು ಚುನಾವಣೆ ಹೋರಾಟಕ್ಕಿಳಿಯಲು ನಿರ್ಧರಿಸಿತು.

ಅದರಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಸ್ಪರ್ಧಿಸಲು ನಿರ್ಧರಿಸಲಾದಂತೆ ಮಂಗಳೂರು ನಗರ ಮತ್ತು ಪಾಣೆ ಮಂಗಳೂರು ಕ್ಷೇತ್ರಗಳಿಂದ ಪಕ್ಷವು ಸಂಗಾತಿಗಳಾದ ಎ.ಶಾಂತಾರಾಮ ಪೈ ಮತ್ತು ಎ.ಕೃಷ್ಣ ಶೆಟ್ಟರನ್ನು ಸ್ಪರ್ಧೆಗಿಳಿಸಿತು. ಚುನಾವಣಾ ಹೋರಾಟದ ಭಾಗವಾಗಿ ಮತ್ತೆ ಪಕ್ಷದ ಧ್ವಜ ಎಲ್ಲೆಡೆ ಹಾರಾಡಿತು. ಅತೀ ಉತ್ಸಾಹದಿಂದ ಮುಂದಾಳುಗಳು ಮತ್ತು ಕಾರ್ಯಕರ್ತರು ಚುನಾವಣೆ ಹೋರಾಟವನ್ನು ಪ್ರತಿಷ್ಠೆಯ ಪ್ರಶ್ನೆಯಾಗಿಟ್ಟು ಹೋರಾಡಿ ದರು. ಪರಿಣಾಮವಾಗಿ ಪಕ್ಷದ ಅಭ್ಯರ್ಥಿಗಳು ಎರಡೂ ಕ್ಷೇತ್ರಗಳಲ್ಲಿ 13 ಸಾವಿರಕ್ಕೂ ಮಿಕ್ಕಿದ ಮತಗಳು ದೊರೆತು ಕಾಂಗ್ರೆಸಿಗೆದುರಾಗಿ ಅತ್ಯಲ್ಪ ಮತಗಳಿಂದ ಸೋಲುಂಡರೂ ಕೂಡಾ ಕಾರ್ಮಿಕ ವರ್ಗದ ಬೆಂಬಲ ಮಾತ್ರವಲ್ಲ ರೈತರ ಮತ್ತು ಮಧ್ಯಮ ವರ್ಗದ ಬೆಂಬಲವನ್ನೂ ಗಳಿಸುವಂತಾಯಿತು.

ತೀವ್ರತರದ ಧಾಳಿ ದಬ್ಬಾಳಿಕೆಗಳನ್ನು ಎದುರಿಸಲಾಗಿದ್ದರೂ ಪಕ್ಷದ ಪ್ರತಿಜ್ಞೆ ಹೆಚ್ಚಾಯಿತೇ ವಿನಾ ಕಡಿಮೆಯಾಗಲಿಲ್ಲವೆಂಬುದು ಕಂಡುಬಂತು.

ಶಸ್ತ್ರಾಸ್ತ್ರ ಹೋರಾಟದ ತೆಲಂಗಾಣ ಭಾಗದಲ್ಲಿ ಕಾಂಗ್ರೆಸ್ಸಿನ ಮಂತ್ರಿ ಮಾಗಧರು ಧರೆಗುರುಳಿದರು. ಅನೇಕರು ಠೇವಣೆ ಕೂಡಾ ಕಳಕೊಂಡರು. ಒಂದು ಮಾತನ್ನು ಇಲ್ಲಿ ಹೇಳಲೇಬೇಕಾಗಿದೆ. ಕಾಂ.ರವಿನಾರಾಯಣ ರೆಡ್ಡಿ, ಕಾಂ.ಬದ್ದಾಮ್ ಎಲ್ಲ ರೆಡ್ಡಿ, ಕಾಂ.ಮುಕ್ದುಮ್ ಮೊಯ್ದಿನ್ ಪ್ರಧಾನಿಯವರಿಗಿಂತ ಹೆಚ್ಚಿನ ಮತ ಪಡೆದು ಆರಿಸಿ ಬಂದರು.

ಇದರಿಂದಾಗಿ ನಮಗೆಲ್ಲರಿಗೆ ಒಂದು ವಿಷಯ ಬಹಳ ಸ್ಪಷ್ಟವಾಯಿತು. ಯಾವ ತರದ ಭೀಕರವಾದ ದಬ್ಬಾಳಿಯೂ ಕಮ್ಯುನಿಸ್ಟ್ ಪಕ್ಷವನ್ನು ನಾಶ ಪಡಿಸಲಾರದು ಎಂದು ನಾವು ತಿಳಿಯುವಂತಾಯಿತು. ಪಕ್ಷವು ದೇಶದಲ್ಲಿ 2 ಸ್ಥಾನ ಪಡೆಯಿತು.


ಚುನಾವಣಾ ಪ್ರಚಾರ ಕಾಲದಲ್ಲಿ ಗ್ರಾಮಾಂತರ ಭಾಗದಲ್ಲಿ ರೈತರ ಮಧ್ಯೆ ಉತ್ತಮ ರೀತಿಯಲ್ಲಿ ಕೆಲಸ ಮಾಡಿದ್ದರ ಪರಿಣಾಮವಾಗಿ ರೈತರ ಸಂಘಟನೆಯನ್ನು ಮತ್ತಷ್ಟು ವಿಶಾಲಗೊಳಿಸಿ ಬಲಿಷ್ಟವಾಗಿ ಬೆಳೆಸಲು ಸಾಧ್ಯವಾಯಿತು.

ತಾಲೂಕುಗಳಲ್ಲಿ ಬೃಹತ್ ಸಮ್ಮೇಳನಗಳನ್ನು ನಡೆಸುವ ಮೂಲಕ ಜಿಲ್ಲಾ ಕೇಂದ್ರ ಮಂಗಳೂರಿನಲ್ಲಿ “ಜಿಲ್ಲಾ ರೈತ ಸಮ್ಮೇಳನ” ಸೇರಿಸಲು ಸಾಧ್ಯವಾಯಿತು. ಕಾಂ. ಎ.ಕೃಷ್ಣಶೆಟ್ಟರು ಅಧ್ಯಕ್ಷರಾಗಿ ಮತ್ತು ಕಾಂ.ಎಂ.ಎಚ್.ಕೃಷ್ಣಪ್ಪ ಪ್ರಧಾನ ಕಾರ್ಯದರ್ಶಿಯಾಗಿ (ಆಯ್ಕೆಗೊಂಡರು) ಪುನರಾಯ್ಕೆಗೊಂಡರು. ಸಮ್ಮೇಳನಕ್ಕೆ ರೈತರಿಂದ ಹೊರೆ ಕಾಣಿಕೆಗಳ ಮೂಲಕ ಎತ್ತಿನ ಗಾಡಿಗಳ್ಲ ಬಂದು ಸಂಘಟನೆಯ ಬಗ್ಗೆ ಅವರಿಗಿರುವ ಉತ್ಸಾಹ ಮತ್ತು ಗೌರವಗಳನ್ನು ಕಂಡು ಸಮ್ಮೇಳನದ ಯಶಸ್ವಿಗಾಗಿ ಸ್ವಯಂ ಸೇವಕರಾಗಿ ದುಡಿಯುತ್ತಿದ್ದ ನಾವೆಲ್ಲರೂ ಪುಳಕಿತರಾಗುವಂತಾಯಿತು.

ಅಂದಿನ ದಿನಗಳಲ್ಲಿ ರೈತ ಸಂಘಗಳ ಬಗ್ಗೆ ಬೆಂಬಲ ವ್ಯಕ್ತಪಡಿಸುವುದೆಂದರೆ ನಮಗೆ ಎಲ್ಲಿಲ್ಲದ ಉತ್ಸಾಹ.

ಪ್ರಥಮ ಜಿಲ್ಲಾ ರೈತ ಸಮ್ಮೇಳನಕ್ಕೆ ಕಾಂ.ರೇಣು ಚಕ್ರವರ್ತಿ ಮತ್ತು ಕಾಂ.ಕೆ.ಪಿ.ಆರ್.ಗೋಪಾಲನ್ ಭಾಗವಹಿಸಿದ್ದರು. ಸಮ್ಮೇಳನದ ಅಂಗವಾಗಿ ಜರುಗಿದ ಬೃಹತ್ತಾದ ಮೆರವಣಿಗೆಯೂ, ನಂತರ ಕೇಂದ್ರ ಮೈದಾನದಲ್ಲಿ ನಡೆದ ಬಹಿರಂಗಸಭೆಯಲ್ಲಿ ಸುಮಾರು 15 ಸಾವಿರದಷ್ಟು ಜನರು ಸೇರಿದ್ದರೆಂದು ಅಂದಾಜಿಸಬಹುದು. ಮದ್ರಾಸ್ ರಾಜ್ಯದ ಟೆನನ್ಸಿ ಕಾಯಿದೆ ಮತ್ತು ನ್ಯಾಯ ಗೇಣಿ ನಿರ್ಣಯದ ಸಮಿತಿಗಳಲ್ಲಿ ರೈತ ಸಂಘದ ಪ್ರತಿನಿಧಿಗಳಿಗೆ ವಾದ ಮಾಡುವ ಅವಕಾಶ ಮಸೂದೆಯಲ್ಲಿತ್ತು. ಇಂದು ಭೂನ್ಯಾಯ ಮಂಡಳಿಗಳಲ್ಲಿರುವಂತೆ ಆಳುವ ವರ್ಗದ ಪಕ್ಷಪಾತಿಗಳಿರಲಿಲ್ಲ.

ಅರ್ಜಿ ಹಾಕಿದ ನಂತರದ ತನಿಖೆಗಳು ನಡೆದು ಬಹಳಷ್ಟು ದುಬಾರಿಯಾಗಿದ್ದ ಗೇಣಿ ಕಡಿಮೆ ಮಾಡಿಸಲು ರೈತ ಸಂಘದ ಪ್ರತಿನಿಧಿಗಳು ದುಡಿದು ಯಶಸ್ವಿಯಾದರು. ಮಾತ್ರವಲ್ಲ ಬಲಾತ್ಕಾರದ ಒಕ್ಕಲೆಬ್ಬಿಸುವ ಪ್ರಯತ್ನದಲ್ಲಿ ಪ್ರಬಲವಾದ ಹೋರಾಟಗಳು ನಡೆದು ಕಾರ್ಮಿಕ ವರ್ಗದ ಬೆಂಬಲದೊಂದಿ ಭೂಮಾಲಿಕರ ಪ್ರಯತ್ನಗಳನ್ನು ವಿಫಲಗೊಳಿಸಲು ರೈತ ಸಂಘಕ್ಕೆ ತಿಳಿದುಬಂ ಹೆಚ್ಚಿನ ಕಡೆ ಸಾಧ್ಯವಾಗಿದೆ.



ಭಾರತದಲ್ಲಿ ಬಡತನ

ಭಾರತದಲ್ಲಿ

1. 26.81 ಕೋಟಿ ಜನ ಬಡವರಿದ್ದಾರೆ
2. 2.73 ಕೋಟಿ ಜನ ದಿನನಿತ್ಯ ಹಸಿವಿನಿಂದ ನರಳುವವರು
3. 30.25 ಕೋಟಿ ಜನ ನಿರಕ್ಷರಿಗಳಿದ್ದಾರೆ.
4. 18 ಲಕ್ಷ ಶಿಶುಗಳು ಸಾಯುತ್ತವೆ.
5. ರೋಗನಿರೋಧಕ ಚಿಕಿತ್ಸೆ ವಂಚಿತ ಮಕ್ಕಳು 1.22 ಕೋಟಿ

ಅಂದರೆ ಪ್ರತಿ ನಾಲ್ವರು ಭಾರತೀಯರಲ್ಲಿ ಒಬ್ಬ ಬಡವ.

▶ ಇದು ಅಮೇರಿಕ ಅಥವಾ ಇಂಡೋನೇಷ್ಯದ ಜನಸಂಖ್ಯೆಯಷ್ಟು.

▶ ಇದು ಮೆಕ್ಸಿಕೊ ಅಥವಾ ವೆನಿಜುವೆಲಾದ ಜನಸಂಖ್ಯೆಗೆ ಸಮ.

▶ ಇದು ರಷಿಯದ ಜನಸಂಖ್ಯೆಯಷ್ಟು ಇದು ಬಡತನಕ್ಕೆ ಕಾರಣವೂ ಹೌದು. ಅದರ ಪರಿಣಾಮವೂ ಹೌದು.

▶ ಇದು ಕುವೈತ್ ಅಥವಾ ಪನಾಮದಲ್ಲಿ ವಾಸಿಸುವ ಜನಸಂಖ್ಯೆಯಷ್ಟು.

▶ ಕಾಂಬೋಡಿಯಾ ಅಥವಾ ಅಂಗೋಲ ದೇಶದ ಜನಸಂಖ್ಯೆಯಷ್ಟು.

ಆಕರ: ಇಂಡಿಯಾ ಟುಡೇ

ವೈದ್ಯಕೀಯ ಕ್ಷೇತ್ರದ ನಿಯಂತ್ರಣ- ಸಾಧ್ಯವೇ?



ಖಾಸಗೀಕರಣ, ಉದಾರೀಕರಣ ನೀತಿಯಿಂದ ಆರೋಗ್ಯ ನೀತಿ ಹಾಗೂ ವೈದ್ಯರೋಗಿ ಸಂಬಂಧಿಗಳನ್ನು ನಾಶ ಮಾಡುತ್ತಿವೆ. ಈ ನೀತಿಯಿಂದಾಗಿ ನಿಯಂತ್ರಣ ಕಡಿಮೆಯಾಗುತ್ತ ಬರುತ್ತಿದೆ. ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಹಣ ಹೂಡಿದವರಿಗೆ ಲಾಭ ಉಂಟಾಗುವಂತೆ ಮಾಡುತ್ತಿವೆ. ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿವೆ.

ಯಾವುದೇ ಜನಪರ ಚಟುವಟಿಕೆಗೆ ನಿಯಂತ್ರಣ ಅಗತ್ಯವೆಂಬುದು ಸಾಮಾನ್ಯ ಜ್ಞಾನ ನಿಯಂತ್ರಣ ಈಗ ಶಾಸನ ಹಾಗೂ ನ್ಯಾಯದ ಮೂಲಕವೇ ಸಾಧ್ಯ. ಆದರೆ ಇದರಿಂದ ಇನ್ನೂ ಅನೇಕ ತೊಂದರೆಗಳು ಉದ್ಭವವಾಗಿದೆ. ವೈದ್ಯರು ರಕ್ಷಣೆಗಾಗಿ ಪರೀಕ್ಷಾ ವಿಧಾನ ಹಾಗೂ ಅನಗತ್ಯ ಚಿಕಿತ್ಸೆಗಳಲ್ಲಿ ತೊಡಗಿದ್ದಾರೆ. ಉದಾ: ಅಫಘಾತವಾದ ವ್ಯಕ್ತಿಗೆ ತಲೆನೋವು ಕಂಡು ಬಂದಲ್ಲಿ ಸಿಟಿ ಸ್ಕ್ಯಾನಿಂಗ್ ಮಾಡಿಸುವುದು ಸಾಮಾನ್ಯವಾಗಿಬಿಟ್ಟಿದೆ. ರೋಗಿಯ ‘ಕೇವಲ ವೈದ್ಯಪರೀಕ್ಷೆ’ ಮಹತ್ವವನ್ನು ಕಳೆದುಕೊಂಡಿದೆ. ಇದರಿಂದ ಚಿಕಿತ್ಸೆ ದುಬಾರಿ, ಸಂಕೀರ್ಣವಾಗುತ್ತಿದೆ. ಇದರಿಂದ ವಿಮೆಯ ವ್ಯಾಪಾರಕ್ಕೆ ಲಾಭವಾಗುತ್ತದೆ ಹೊರತು ವೈದ್ಯರಿಗೆ, ರೋಗಿಗಳಿಗಲ್ಲ ಆದ್ದರಿಂದ ವೈದ್ಯಕೀಯ ಶಿಕ್ಷಣ ಹಾಗೂ ವೈದ್ಯರ ತರಬೇತಿಯಲ್ಲಿ ಬದಲಾವಣೆ ತಂದು, ನೈತಿಕ ವಿಷಯಗಳನ್ನು ‘ಅಂತರ್ಗತ’ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಬೇಕು.

ವೈದ್ಯವೃತ್ತಿ ಆಂತರಿಕವಾಗಿ ವೈದ್ಯರ ನೈತಿಕ ಮಟ್ಟವನ್ನು ಏರಿಸುವಲ್ಲಿ ಪ್ರಯತ್ನ ಮಾಡಬೇಕು.

ಗ್ರಾಹಕ ಹಕ್ಕುಗಳ ಬಗ್ಗೆ ಹೆಚ್ಚಿನ ಪ್ರಚಾರ ಅಗತ್ಯವಿದೆ.

ಎಲ್ಲಾ ವಿಶೇಷ ಚಿಕಿತ್ಸೆಗಳನ್ನು ಮಾಡುವ ಕೇವಲ ರೋಗಿಯ ಸಹಿ ಸಂಗ್ರಹಣ ಮಾಡ ರೋಗಿಯ ‘ತಿಳುವಳಿಕೆ ಒಪ್ಪಿಗೆ’(inform concent) ಪಡೆಯುವುದು ಅಗತ್ಯ.

ವೈದ್ಯಕೀಯ ಪಠ್ಯಗಳಲ್ಲಿ ವೈದ್ಯಕೀಯ ನೀ ಬಗ್ಗೆ ಪಾಠಗಳಿರಬೇಕು. ಕರ್ನಾಟಕದ ರಾಜೀ ಗಾಂಧಿ ಆರೋಗ್ಯ ವಿಜ್ಞಾನದ ವಿಶ್ವವಿದ್ಯಾಲ ದಲ್ಲಿ (ಬೆಂಗಳೂರು) ಮೊದಲ ಬಾ ವೈದ್ಯಕೀಯ ನೀತಿಶಾಸ್ತ್ರವನ್ನು ಪಠ್ಯಕ್ರಮ ಅಳವಡಿಸಲಾಗಿದೆ.

ಕೊನೆಯದಾಗಿ, ವೈದ್ಯಕೀಯ ಸುಧಾರ ಸಮಾಜವನ್ನು ಕಾರ್ಯಾಚರಣೆಗೆ ಇಳಿಸು ಅತ್ಯಗತ್ಯ.

ಅಲ್ಲಿ.... ಕ್ಯಾನ್‌ಕುನ್‌ನಲ್ಲಿ ವಿಶ್ವವಾಣಿಜ್ಯ ಸಂಘಟನೆಯ ಮಾತುಕತೆ ಆರಂಭವಾಗುತ್ತಿದ್ದಂತೆ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಆಗುತ್ತಿರುವ ಅನ್ಯಾಯಗಳ ವಿರುದ್ಧ ಪ್ರತಿಭಟನೆಗಳು ಸ್ಫೋಟಗೊಂಡವು. ಇದು ಈಗಲೂ ಮುಂದುವರಿದಿದೆ.



ಎಲ್ಲೆಡೆ ಪ್ರತಿಭಟನೆ

ಮೆಕ್ಸಿಕೋ ದೇಶದ ಕ್ಯಾನ್‌ಕುನ್ ನಗರದ ...ಮುದ್ರ ದಂಡೆಯಲ್ಲಿರುವ ವಿಶಾಲವಾದ ...ಟೆಲೊಂದರಲ್ಲಿ ವಿಶ್ವವ್ಯಾಪಾರ ಸಂಘಟನೆಯ ...ಸ್ಯ ರಾಷ್ಟ್ರಗಳ ಸಚಿವ ಮಟ್ಟದ ಸಭೆ ...ಭವಾಗುತ್ತಿದ್ದಂತೆ ಜಗತ್ತಿನಲ್ಲೆಡೆ ಬಡರಾಷ್ಟ್ರಗಳಿಗೆ ...ತ್ತಿರುವ ಅನ್ಯಾಯದ ವಿರುದ್ಧ ತೀವ್ರ ಪ್ರತಿಭಟನೆ ...ಯುತ್ತಲಿದೆ.

ಸೆಪ್ಟೆಂಬರ್ 10 ರಂದು ಕ್ಯಾನ್‌ಕುನ್‌ನಲ್ಲಿ ...ರಾರು ಪ್ರತಿಭಟನಾಕಾರರು ಪೋಲೀಸರು ...ದ ತಡೆಗಳನ್ನು ಭೇದಿಸಿ ಸಭೆ ನಡೆಯುತ್ತಿದ್ದ



...ಕ್ಷಿಣ ಕೋರಿಯಾದ ಲೀ ಕ್ಯಾಂಗ್ ಆತ್ಮಾಹುತಿ

...ಡಬ್ಲ್ಯು.ಟಿ.ಓ. ಸಭೆಯಲ್ಲಿ ರೈತ ವಿರೋಧಿ ನೀತಿಗಳನ್ನು ...ಗೀಕರಿಸುವುದರ ವಿರುದ್ಧ ದಕ್ಷಿಣ ಕೋರಿಯಾದ ರೈತ 'ಲೀ ...ಂಗ್' ತನ್ನನ್ನು ತಾನೇ ಇರಿದುಕೊಂಡು ಆತ್ಮಾಹುತಿ ...ಡಿಕೊಂಡರು

... ಮುನ್ನುಗ್ಗಿದ್ದರು. ಈ ಪ್ರತಿಭಟನೆಯು 14ನೇ ...ಕಿನವರೆಗೂ ಮುಂದುವರಿಯಲಿದ್ದು ಜಗತ್ತಿನ ...ರ ರಾಷ್ಟ್ರಗಳ ರೈತ ಪ್ರತಿನಿಧಿಗಳು, ಇತರೆ ...ಜೀವಿಗಳು ಭಾಗವಹಿಸುತ್ತಿದ್ದಾರೆ.

...ಂಗ್ಲೆಂಡಿನ ಪ್ರಖ್ಯಾತ ರಾಕಬ್ಯಾಂಡ್' ಗಾಯಕ ... ಮಾರ್ಟಿನ್, 37 ಲಕ್ಷ ಜನರ ಸಹಿಯನ್ನು ...ಒಂಡ ಮನವಿಯನ್ನು ವಿಶ್ವವ್ಯಾಪಾರ ...ಟನೆಯ ಪ್ರಧಾನ ನಿರ್ದೇಶಕ ಸುಪಾಚಿ ...ಜ್ ಪಕಡಿ ಅವರನ್ನು ಭೇಟಿಯಾಗಿ, ವಿಶ್ವ ...ರದ ಮೂಲಕ ಎಲ್ಲಾ ದೇಶಗಳಿಗೂ, ಎಲ್ಲಾ ...ಗೂ ಸಮಾನ ಅಭಿವೃದ್ಧಿ ಸಾಧಿಸುವಂತಾಗ ..." ಎಂದು ಒತ್ತಾಯಿಸಿದರು.

...ಕೋಪಿ ಅನ್ನಾನ್ ಎಚ್ಚರಿಕೆ: ಸಮ್ಮೇಳನದ ...ರ್ಭದಲ್ಲಿ ಸಂದೇಶ ಕಳುಹಿಸಿದ ವಿಶ್ವಸಂಸ್ಥೆ ...ದ ಕಾರ್ಯದರ್ಶಿ ಕೋಫಿ ಅನ್ನಾನ್, ನಿಜ ...ನಲ್ಲಿ ವಾಣಿಜ್ಯ ವ್ಯವಸ್ಥೆ ಈ ತೆರನಾಗಿಲ್ಲ. ... ಮಾರುಕಟ್ಟೆಯ ಬದಲಾಗಿ ಹಲವಾರು ...ಗಳಿವೆ. ಆರೋಗ್ಯಕಾರಿ ಸ್ಪರ್ಧೆಯ ಬದಲು ...ಷ್ಟದ ಜನರೊಂದಿಗೆ ಆಟವಾಡುವಂತೆ ...ಂತ ರಾಷ್ಟ್ರಗಳು ಸಬ್ಸಿಡಿ ನೀಡುತ್ತಿವೆ. ಸರ್ವರ



ಹಿತ ಕಾಯುವ, ಜಾಗತಿಕ ನೀತಿ ಕಾಯುವ ಜಾಗತಿಕ ನೀತಿ ನಿಯಮಾವಳಿಗಳನ್ನು ಅನುಸರಿಸುವ ಬದಲಾಗಿ ಸ್ವಹಿತಕ್ಕೆ ಸೀಮಿತವಾದ ಕಾರ್ಯಗಳು ನಡೆಯುತ್ತಿವೆ" ಎಂದು ಎಚ್ಚರಿಸಿದರು.

ಬಂಗಾಳದಲ್ಲಿ ಬೃಹತ್ ಪ್ರತಿಭಟನೆ

ಕಲ್ಕತ್ತಾದಲ್ಲಿ ಸಿಐಟಿಯು ಮತ್ತು ಎಡಪಕ್ಷಗಳ ನೇತೃತ್ವದಲ್ಲಿ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಯಿತು. ಸಿಐಟಿಯು ಮುಖಂಡ ಚಿತ್ತಬ್ರತ ಮಜುಂದಾರ್ ಮಾತನಾಡುತ್ತಾ, "ಕಾರ್ಮಿಕರು ಮತ್ತು ನೌಕರರು ಹೋರಾಟ ಮಾಡಿ ಗಳಿಸಿದ ಹಕ್ಕುಗಳನ್ನು ಕ್ಯಾನ್‌ಕುನ್ ಸಮ್ಮೇಳನವು ಮೊಟಕುಗೊಳಿಸಲಿದೆ" ಎಂದು ಎಚ್ಚರಿಸುತ್ತ, ಮೂರನೇ ಜಗತ್ತಿನ ದೇಶಗಳು ಈ ದಾಳಿಯನ್ನು ಎದುರಿಸಬೇಕಾಗಿದೆ ಎಂದು ಕರೆ ನೀಡಿದರು. 20 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದ ಪ್ರತಿಭಟನಾ ರ್‍ಯಾಲಿಯು ಕಲ್ಕತ್ತದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿತು.

ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಬ್ರಹತ್ ಪ್ರತಿಭಟನಾ ರ್‍ಯಾಲಿಗಳು ನಡೆದ ವರದಿ ಬಂದಿದೆ.

ಕರ್ನಾಟಕದಲ್ಲಿ: ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ರಾಜ್ಯದ ವಿವಿಧೆಡೆಗಳಿಂದ ಬಂದ ರೈತ, ಕೂಲಿಕಾರರು ನಗರದ ಹೃದಯ ಭಾಗದಲ್ಲಿರುವ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆಯಲ್ಲಿ ಸಾಗುತ್ತಾ, "ಶ್ರೀಮಂತರ ರಾಷ್ಟ್ರಗಳ ಪರವಾಗಿರುವ WTO ಶರತ್ತುಗಳಿಗೆ ಧಿಕ್ಕಾರ," 'ಕೃಷಿ ಉತ್ಪನ್ನಗಳ ಮೇಲಿನ ಆಮದು ಸುಂಕ ಹೆಚ್ಚಿಸಿ - ಕೃಷಿ ಕ್ಷೇತ್ರ ಉಳಿಸಿ" 'ರೈತ ವಿರೋಧಿ ಬಿಜೆಪಿ- ಕಾಂಗ್ರೆಸ್ ಸರಕಾರಗಳು ತೊಲಗಲಿ' ಎಂಬಿತ್ಯಾದಿ ಘೋಷಣೆಗಳನ್ನು ಕೂಗುತ್ತಾ ಜನರಿಗೆ ವಿಶ್ವವ್ಯಾಪಾರ ಸಂಘಟನೆಯ ವಿರುದ್ಧ ಹೋರಾಟದ ಅಗತ್ಯವನ್ನು ಮನನ ಮಾಡಿದರು. ನಂತರ ಹಳೆಯ ಕೇಂದ್ರ ಕಾರಾಗೃಹದ ಆವರಣದಲ್ಲಿ ಬಹಿರಂಗ ಸಭೆ ನಡೆಸಿದರು.

ಸಭೆಯನ್ನು ಉದ್ದೇಶಿಸಿ ಕೃಷಿ ಕೂಲಿಕಾರ ಸಂಘದ ಉಪಾಧ್ಯಕ್ಷರಾದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಮಾತನಾಡುತ್ತಾ, 'ಕ್ಯಾನ್‌ಕುನ್‌ನಲ್ಲಿ ನಡೆಯುತ್ತಿರುವ ಸಭೆ ಜಗತ್ತಿನ ಎಲ್ಲಾ ದುಡಿಯುವ ವಗದ ಜನತೆಯ ಹಿತಾಸಕ್ತಿಗೆ ವಿರುದ್ಧವಾಗಿರುವುದರಿಂದ ಹಾಗೂ ಶ್ರೀಮಂತ ರಾಷ್ಟ್ರಗಳ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಪರವಾಗಿರುವುದರಿಂದ ಜಗತ್ತಿನಾದ್ಯಂತ ಇಂದು ಪ್ರತಿಭಟನೆಗಳು ನಡೆಯುತ್ತಿವೆ' ಎಂದು ಹೇಳಿದರು.

'ಭಾರತಕ್ಕೆ ಆಮದಾಗುತ್ತಿರುವ ವಸ್ತುಗಳ ಮೇಲೆ ಪ್ರಮಾಣಾತ್ಮಕ ನಿರ್ಬಂಧಗಳನ್ನು ಪುನಃ ಹೇರಬೇಕು, ಕೃಷಿ ವಲಯಕ್ಕೆ ನೀಡುವ ಸಬ್ಸಿಡಿಯ ಕುರಿತು ಶ್ರೀಮಂತ ರಾಷ್ಟ್ರಗಳು ಮತ್ತು ಅಭಿವೃದ್ಧೀಶಿಲ ರಾಷ್ಟ್ರಗಳಿಗೆ ಸಮಾನ ಅವಕಾಶ ಇರಬೇಕು' ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ ಆಗ್ರಹಿಸಿದರು.

ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ನಿತ್ಯಾನಂದ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರಾ ಮೊದಲಾದವರು ಮಾತನಾಡಿ, 'ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಮಾರಕವಾದ ಡಬ್ಲ್ಯು.ಟಿ.ಒ ಶರತ್ತುಗಳನ್ನು ತಿರಸ್ಕರಿಸಬೇಕು' ಎಂದು ಕರೆ ನೀಡಿದರು.

ಮಂಗಳೂರಿನಲ್ಲಿ: ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಬೆಳ್ತಂಗಡಿ ಮತ್ತು ಸುಳ್ಯದಲ್ಲಿ ಪ್ರತಿಭಟನೆಗಳು ನಡೆದ ವರದಿ ಬಂದಿವೆ. ಮಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ರಾಮಚಂದ್ರ ಉಚ್ಚಿಲ್ ನೇತೃತ್ವ ವಹಿಸಿದ್ದರು. ಬೆಳ್ತಂಗಡಿ ಬಸ್‌ಸ್ಟ್ಯಾಂಡಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಡಬ್ಲ್ಯು.ಟಿ.ಒ ನ ಭೂತದಹನ ಮಾಡಿದ್ದು, ಸಿಐಟಿಯು ಮುಖಂಡ ಹಾಗೂ ವಕೀಲರಾದ ಬಿ.ಎಂ.ಭಟ್, ಶಿವಕುಮಾರ್ ಮಾತನಾಡಿದರು. ಸುಳ್ಯದಲ್ಲಿ ಹರಿದಾಸ್ ಅವರ ನೇತೃತ್ವದಲ್ಲಿ ಮೆರವಣಿಗೆ ನಡೆಸಿ ಜನವಿರೋಧಿ ಡಬ್ಲ್ಯು.ಟಿ.ಓ ಶರತ್ತುಗಳನ್ನು ಖಂಡಿಸಲಾಯ್ತು.



ಡಬ್ಲ್ಯುಟಿಓ ಶರತ್ತ ಧಿಕ್ಕರಿಸಿ - ಕೃಷಿ ಉಳಿಸಿ ಎಂದು ಆಗ್ರಹಿಸಿದ ಪ್ರತಿಭಟನೆ ಬೆಂಗಳೂರಿನಲ್ಲಿ



'ಕೈಗಾರಿಕೆಗೂ ಮಾರಕ' ಕುಂದಾಪುರದಲ್ಲಿ ಪ್ರತಿಭಟನೆ

ಜಾಗತಿಕ ವ್ಯಾಪಾರ ಸಂಘಟನೆ (WTO)ಯ ಜನವಿರೋಧಿ, ಕಾರ್ಮಿಕ ವಿರೋಧಿ, ರೈತ ವಿರೋಧಿ ನೀತಿಗಳ ವಿರುದ್ಧ ಜಾಗತೀಕರಣ ಸವಾಲುಗಳನ್ನು ಪ್ರತಿಭಟಿಸಿ, ಸೆಪ್ಟೆಂಬರ್ 9 ರಂದು ಸಿಐಟಿಯುವಿಗೆ ಸೇರಿದ ಕಾರ್ಮಿಕ ಸಂಘಟನೆಗಳ ಹಾಗೂ ರೈತ ಸಂಘದ ಕುಂದಾಪುರ ತಾಲೂಕು ಸಮಿತಿಯ ನೇತೃತ್ವದಲ್ಲಿ ಶಾಸ್ತ್ರಿ ಸರ್ಕಲಿನಿಂದ ತಾಲೂಕು ತಹಸಿಲ್ದಾರರವರ ಕಛೇರಿಯವರೆಗೆ ರೈತ-ಕಾರ್ಮಿಕರು ಬೃಹತ್ ಮೆರವಣಿಗೆ ಮೂಲಕ ಮತಪ್ರದರ್ಶನ ನಡೆಸಿದರು.

ಮತಪ್ರದರ್ಶನದ ನೇತೃತ್ವವನ್ನು ಸಿಐಟಿಯುವಿನ ಮುಖಂಡರಾದ ಕೆ. ಶಂಕರ್, ಮಹಾಬಲ ವಡೇರಹೋಬಳಿ, ವಿ.ನರಸಿಂಹ, ಸಿ. ನಾರಾಯಣ, ಎಚ್. ನರಸಿಂಹ ಹಾಗೂ ರೈತಸಂಘದ ಮುಖಂಡರಾದ ಯು. ದಾಸಭಂಡಾರಿ, ಗೋಪಾಲ ಶೆಟ್ಟಿಗಾರರವರು ವಹಿಸಿದ್ದರು.

"ವಿಶ್ವ ವ್ಯಾಪಾರಿ ಸಂಘಟನೆಯ ಮಂತ್ರಿಮಂಡಲ ಮಟ್ಟದ ಸಭೆಯು ಸೆಪ್ಟೆಂಬರ್ 10 ರಿಂದ ಮೆಕ್ಸಿಕೋ ದೇಶದ ಕ್ಯಾನ್‌ಕುನ್ ನಗರದಲ್ಲಿ ನಡೆಯಲಿದ್ದು ಶಿಕ್ಷಣ, ಆರೋಗ್ಯ, ಕುಡಿಯುವ ನೀರು ಮುಂತಾದ ಅವಶ್ಯಕ ಸೇವೆಗಳನ್ನು ಖಾಸಗೀಕರಣಗೊಳಿಸುವ ಯೋಜನೆಗಳು ಅಂಗೀಕಾರಗೊಳ್ಳಲಿವೆ. ದೇಶದ ಆರ್ಥಿಕತೆ ಕೃಷಿ ವಲಯ ಉದ್ಯೋಗದ ಅವಕಾಶಗಳನ್ನು ಹಾಗೂ ಕೈಗಾರಿಕೆಗಳನ್ನು ಅಪಾಯದ ಅಂಚಿಗೆ ಕೊಂಡೊಯ್ದಿದೆ. ಮುಂದೆ ತೀವ್ರವಾಗಿ ಅವಶ್ಯಕ ಸೇವೆಗಳ ಖಾಸಗೀಕರಣದ ಮೂಲಕ, ಇರುವ ಸವಲತ್ತುಗಳು ನಾಶವಾಗುತ್ತಾ, ಹೊಸ ಸಮಸ್ಯೆಗಳಿಗೆ, ಬೆಲೆಯೇರಿಕೆಗೆ ಕಾರಣವಾಗುತ್ತದೆ ಎಂದು ಮತ ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡಿದ ಭಾಷಣಕಾರರು ಜಾಗತೀಕರಣದ ಸವಾಲುಗಳನ್ನು ಪ್ರತಿಭಟಿಸಿ ಸಂಘಟಿತ ಹೋರಾಟ ನಡೆಸಲು ಕರೆ ನೀಡಿದರು.

ಸಿನಿಮಾ

'ಅರ್ಥ್' ಒಂದು ಶ್ಲಾಘನೀಯ ಪ್ರಯತ್ನ

'ಅರ್ಥ್' ಇನ್ನೂ ಬಿಡುಗಡೆಯಾಗಬೇಕಿರುವ ಚಿತ್ರ, ಸಾಮಾಜಿಕ ಸಮಸ್ಯೆ, ಕೋಮುವಾದ-ಜಾಗತೀಕರಣದ ಪ್ರಶ್ನೆಗಳನ್ನು ಪ್ರೇಕ್ಷಕರ ಗಮನ ಮುಟ್ಟಿಸಲು ನಡೆಸಿದ ವಿಶೇಷ ಪ್ರಯತ್ನ ಗಮನಾರ್ಹ

ವಿಭಿನ್ನವಾದ ಕಥಾವಸ್ತುವಿನ 'ಅರ್ಥ್' ಚಿತ್ರವನ್ನು ನಿರ್ಮಿಸಿರುವ ಸ್ನೇಹಸಂಗಮ ಮತ್ತು ಯುವ ನಿರ್ದೇಶಕ ಸುರೇಶ್‌ರವರ ಪ್ರಯತ್ನವೇ ಮೊದಲನೆಯದಾಗಿ ಶ್ಲಾಘನೀಯ. ಹಣ ಮಾಡುವುದನ್ನೇ ಒಂದು ದಂಧೆಯಾಗಿಸಿಕೊಂಡು ಕೀಳು ಸಾಂಸ್ಕೃತಿಕ, ಪ್ರತಿಗಾಮಿ ಮೌಲ್ಯಗಳ ಚಲನಚಿತ್ರಗಳನ್ನು ಪ್ರೇಕ್ಷಕರಿಗೆ ನೀಡುತ್ತಿರುವ ಈ ಸಂದರ್ಭದಲ್ಲಿ ಆರ್ಥಿಕ-ಸಾಮಾಜಿಕ ಸಮಸ್ಯೆಗಳನ್ನು, ಕೋಮುವಾದದ ಅಪಾಯವನ್ನು ಹೇಳುವ ಈ ಚಿತ್ರವನ್ನು ನೀಡಿರುವುದು ನಿರ್ದೇಶಕರ ಸಮಾಜದ ಬಗೆಗಿನ ಕಳಕಳಿ ಮತ್ತು ಜವಾಬ್ದಾರಿಯನ್ನು ತೋರಿಸುತ್ತದೆ.

ಈ ಸಿನಿಮಾ ಒಂದು ಉತ್ತಮ ಪ್ರಯತ್ನವೆನ್ನುವಾಗಲೇ ಅನೇಕ ಮಿತಿಗಳು ಸಿನಿಮಾವನ್ನು ಸೊರಗಿಸಿ, ಸಪ್ಪೆ ಮತ್ತು ಉತ್ಪ್ರೇಕ್ಷೆಯಾಗಿಸಿವೆ. ಆಟೋ ಚಾಲಕ-ಅವನ ಕುಟುಂಬ, ಅವನ ಮುಸ್ಲಿಂ ಮತ್ತು ವೇಶ್ಯೆಯೊಬ್ಬರ ಜೊತೆಗಿನ ಆತ್ಮೀಯ ಗೆಳೆತನ - ಮನೆಯಲ್ಲಿ ಒರಟು ನಡವಳಿಕೆ, ಮಗನಿಗೆ ಶಿಕ್ಷಣ ಕೊಡಿಸಲಾಗದಿರುವುದು - ಮಗ ಕೋಮುವಾದಿಯಾಗಿರುವುದು ಕೊನೆಗೆ ಮಗನೇ ತಂದೆಯ ಮುಸ್ಲಿಂ ಗೆಳೆಯನನ್ನು ತಂದೆಯೆದುರೇ ಕೊಲ್ಲುವುದು - ಮಗನೂ ಗಲಭೆಯಲ್ಲಿ ಸಾಯುವುದು ಕಥಾವಸ್ತು.

ಆಟೋ ಚಾಲಕನ ಕುಟುಂಬ ಆರ್ಥಿಕ ಸಮಸ್ಯೆಗೆ ಮಾತ್ರವೇ ಆ ಪಾತ್ರವನ್ನು ಮಿತಿಗೊಳಿಸುವುದು ಒಂದು ಸಮಗ್ರದೃಷ್ಟಿ ನೀಡಲಾರದು. ಆಟೋಗೆ ಸಾಲ ತೆಗೆದುಕೊಳ್ಳಲು ಪಡುವ ಪಾಡು, ವಿದೇಶಿ ಬ್ಯಾಂಕುಗಳ ಪ್ರವೇಶ... ಅನಗತ್ಯ ಎಳೆದು ಸಮಯ ಹಾಳು ಮಾಡಲಾಗಿದೆ ಎಂದೆನಿಸುತ್ತದೆ. ಆಟೋ ಚಾಲಕ ತನ್ನ ಕುಟುಂಬದೊಡನೆ ಯಾವುದೇ ಕ್ಷಣದಲ್ಲೂ ಪ್ರೀತಿಯನ್ನು ವ್ಯಕ್ತ ಮಾಡದಿರುವುದು ಅತಿರೇಕವೆನಿಸುತ್ತದೆ. ಅದೂವರೆಗೆ ತನ್ನ ಮಗನಿಗೆ ಡ್ರಗ್ಸ್ ತೆಗೆದುಕೊಳ್ಳಬೇಕು... ಹೀಗೆ ಹಿತ ವಚನ ಹೇಳುತ್ತಿದ್ದ ಅಪ್ಪ ದಿಢೀರ್ ಎಂದು ತನ್ನ ಮಗನ್ನು ವೀಕ್ ಎಂಡ್‌ಗೆಂದು ಬಾರ್‌ಗೆ ಕರೆದುಕೊಂಡು ಹೋಗಿ ಹೆಂಡ ಕುಡಿಸಲು ಪ್ರಯತ್ನಿಸುವುದು ತೀರಾ ಅಸಹಜವಾಗಿದೆ ಮತ್ತು ಯಾವುದೇ ಕೆಳ ಮಧ್ಯಮವರ್ಗದ ಕುಟುಂಬದಲ್ಲಿ ಅಪ್ಪ ಮಗನ ನಡುವೆ ಇದು ಸಂಭವಿಸಲಾರದು. ಹಾಗೆಯೇ ಕೇವಲ ಕುಟುಂಬದ ಸಮಸ್ಯೆ ಮತ್ತು ಟೈಮ್ ಪಾಸ್‌ಗಾಗಿ ಕೋಮುವಾದಿ ಸಂಘಟನೆಗೆ ಮಗ ಸೇರಿ, ಕೋಮುವಾದಿಯಾಗ...
ಕಾರಣವಾಗುತ್ತದೆ ಎಂದು ತೋರಿಸಿರು...
ಕೋಮುವಾದ ಮತ್ತದರ ಬೆಳವಣಿಗೆಯ...
ಅದರ ಎಲ್ಲಾ ಆಯಾಮಗಳೊ...
ಅರ್ಥಮಾಡಿಕೊಳ್ಳುವುದಕ್ಕೆ ನಿರ್ದೇಶಕ...
ಸಾಧ್ಯವಾಗಿಲ್ಲ ಎನ್ನುವುದನ್ನು ತೋರಿಸು...
ಗೋಧ್ರಾ ಘಟನೆಯ ಹಿನ್ನೆಲೆಯಲ್ಲಿನ ಗಲಭ...
ಚಿತ್ರಣವನ್ನು ಇನ್ನೂ ಶಕ್ತಿಯುತವ...
ಚಿತ್ರಿಸಬಹುದಾಗಿತ್ತು.

ಆದರೆ ಮುಸ್ಲಿಂ ಕುಟುಂಬದ ಚಿತ್ರಣ, ...
ಗೆಳೆತನ, ವೇಶ್ಯೆಯರೊಡನೆ ಆತ್ಮೀಯ, ...
ಸ್ನೇಹ ಮನೋಜ್ಞವಾಗಿ ಮೂಡಿ ಬಂ...
'ಮುಸ್ಲಿಂ ಕುಟುಂಬ ಎಲ್ಲಾ ಪಾತ್ರಧಾರಿಗ...
ವೇಶ್ಯೆಯ ಪಾತ್ರದ ಯುವತಿ ಚೆ...
ನಟಿಸಿದ್ದಾರೆ. ಮಧ್ಯದಲ್ಲಿ ವಚನಗಳ...
ಒಳ್ಳೆಯ ಪ್ರಯೋಗ. ಛಾಯಾಗ್ರ...
ಸಾಮಾನ್ಯ. ಏನೇ ಇರಲಿ ಇಂತಹ ಮ...
ಚಿತ್ರಗಳು ಮೂಡಿಬರಬೇಕೆಂಬುದು ...
ಆಶಯವಾಗಬೇಕು. ನಿರ್ದೇಶಕರು ...
ಸಾಕಷ್ಟು ಪಕ್ವವಾಗಬೇಕು.

- ಕೃಷ್ಣೇಗೌಡ .ಟಿ...

ಸಂಗಾತಿ ಜಿ.ಆರ್. ಅವರಿಗೆ ಆತ್ಮೀಯ ಸನ್ಮಾನ

ಹೋರಾಟ ಪ್ರಖರ ವೈಚಾರಿಕತೆಗೆ ಹೆಸರಾಗಿರುವ ಹಿರಿಯ ಅಧ್ಯಾಪಕ, ಮಾರ್ಕ್ಸ್‌ವಾದಿ, ಲೇಖಕ ಡಾ.ಜಿ.ರಾಮಕೃಷ್ಣ ಅವರನ್ನು ಸೆಪ್ಟಂಬರ್ 5 ರಂದು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಅಪಾರ ಸಂಖ್ಯೆಯಲ್ಲಿ ಸೇರಿದ್ದ ಸಾಹಿತಿಗಳು, ಲೇಖಕರು, ವಿಚಾರವಾದಿಗಳು, ಅವರ ವಿದ್ಯಾರ್ಥಿಗಳು, ರಾಜಕೀಯ ಮುಖಂಡರು 'ಸೌಜನ್ಯ'ದ 'ಸಂಗಾತಿ' ಪ್ರೀತಿ-ಅಭಿಮಾನದದಿಂದ ಅಭಿನಂದಿಸಿದರು.

ಜಾತಿ-ಧರ್ಮ-ವರ್ಗದ ಹಿತಾಸಕ್ತಿ-ದೇಶ-ಬಾಷೆಯ ಗಡಿ ಮೀರಿದ ಅದಮ್ಯ ಮಾನವ ಪ್ರೇಮ ಇರುವ ಅಪರೂಪದ ಅಧ್ಯಾಪಕ ಎಂದು 'ಸಂಗಾತಿ' ಅಭಿನಂದನ ಗ್ರಂಥಧ ಸಂಪಾದಕ ಲೇಖಕ ಡಾ. ಕೆ.ಮರುಳಸಿದ್ದಪ್ಪ ಹೇಳಿದರು.

ರಾಮಕೃಷ್ಣ ಅವರು ಪ್ರಗತಿಶೀಲ ಚಿಂತನೆ, ಜಾತ್ಯತೀತ ಮತ್ತು ಶೋಷಿತರ ಪರವಾಗಿರುವ ಸಂಕೇತ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅಪರೂಪದ ಸಾಧನೆಗೈದ ಅವರು ಪ್ರಾಥಮಿಕ ಕ್ಷೇತ್ರದಲ್ಲಿ ನಡೆಯುತ್ತಿರುವ ಅನ್ಯಾಯ - ಅಕ್ರಮಗಳ ವಿರುದ್ದವೂ ಹೋರಾಟ ನಡೆಸಬೇಕು ಎಂದು ರಮೇಶ ಕುಮಾರ್ ಮನವಿ ಮಾಡಿದರು.

ರಾಮಕೃಷ್ಣ ಅವರು ತಮ್ಮ ಎಂದಿನ ನೇರ, ಸರಳ ಮಾತು, ಹಾಸ್ಯ ನಡೆ ನುಡಿಗಳ ಮೂಲಕ ಪ್ರತಿಕ್ರಿಯಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅರಣ್ಯ ಸಚಿವ ಕೆ.ಹೆಚ್. ರಂಗನಾಥ ಮಾತನಾಡಿ, ಬೂಟಾಟಿಕೆಯ ದೇಶ ಪ್ರೇಮ ನಮ್ಮನ್ನು ಎಲ್ಲಿಗೂ ತಲುಪಿಸುವುದಿಲ್ಲ ಎಂಬ ಎಚ್ಚರ ಇರಬೇಕೇಂದರು.

ಸೌಜನ್ಯ ಸಂಸ್ಮರಣ ಸಂಚಿಕೆಯ ಸಂಪಾದಕ ಪ್ರೊ. ಎಂ.ಹೆಚ್.ಕೃಷ್ಣಯ್ಯ, ಫಕ್ ಟ್ಯಾಕ್ ಅಧ್ಯಕ್ಷ ಪ್ರೊ. ಪ್ರಭುಸ್ವಾಮಿ, ಹೃದ್ರೋಗ ತಜ್ಞ ಡಾ.ಜಿ.ಎನ್.ರೆಡ್ಡಿ, ಮಂಗಳೂರು ವಿವಿಯ ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ಸಬೀಹಾ ಭೂಮಿಗೌಡ, ಹೆಚ್.ವಿ.ನಟರಾಜ ಅಭಿನಂದಿಸಿದರು. ಲೇಖಕಿ ಡಾ.ವಿಜಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಬೆಂಗಳೂರು ವಿವಿ ಕುಲಪತಿ ಡಾ.ತಿಮ್ಮಪ್ಪ ಸ್ವಾಗತಿಸಿದರು.

ಕಟ್ಟಡ - ಮನಸ್ಸುಗಳನ್ನು ಒಡೆಯ...
ಮೂಲಕ ಕೋಮುವಾದಿಗಳು ಯಶಸ...
ಪಡೆದಿದ್ದಾರೆ. ಆದ್ದರಿಂದ ನಾವು ನಂಬಿ...
ಮೌಲ್ಯಗಳಿಗೆ ಹಿನ್ನೆಡೆಯಾಗಿದೆ. ಈ
ಸೋಲು ಹಿಂಜರಿಕೆ ಯಾವಾಗಲೂ
ಇರುವುದಿಲ್ಲ. ಕಟ್ಟು ಸಂಸ್ಕಾರದಲ್ಲಿ ನ...
ಇಟ್ಟುಕೊಂಡು ಸಾಮೂಹಿಕ ಕ್ರಿಯೆಯ...
ತೊಡಗಿಸಿಕೊಂಡ ಜನರೊಡನೆ ಸೇರಿ...
ಗೆಲ್ಲುವ ಆಶಯದೊಂದಿಗೆ ಮತ್ತೆ ಬಾ...
ಹಿಡಿದು ಬೀದಿಗೆ ಬರುತ್ತೇವೆ. ನಿಜವಾ...
ಸಂಸತಿ ಜೀವಂತವಾಗುವ ನಿಟ್ಟಿನಲ್ಲಿ...
ಮಾಡುತ್ತೇವೆ.

- ಡಾ.ಜಿ.ರಾ...

65 ತುಂಬಿದ ಜಿ.ಆರ್. ರವರಿಗೆ ಆತ್ಮೀಯ ಸನ್ಮಾನ. ಚಿಂತನೆ-ಚಳುವಳಿಗೆ ನೀಡಿದ ಅವರ ಅನನ್ಯ ಕೊಡುಗೆಗಳ ಮೆಲುಕು ಈ ಸಮಾರಂಭದಲ್ಲಿ



ಕಾರ್ಯಕ್ರಮಗಳು

ಸಂಗಾತಿ ಡಾ. ಜಿ.ಆರ್. ಅಭಿನಂದನಾ ಸಮಾರಂಭದಲ್ಲಿ ಪ್ರಮುಖ ಕಲಾಪವೆಂದರೆ ಚಿಂತನ-ಮಂಥನ. ಉದ್ಘಾಟನೆಯಲ್ಲಿ ಸಚಿವ ರಂಗನಾಥ್, ಬೆಂಗಳೂರು ವಿ.ವಿ. ಕುಲಪತಿ ಡಾ. ಎಂ.ಎಸ್.ತಿಮ್ಮಪ್ಪ, ಜವಹರಲಾಲ ನೆಹರೂ ವಿ.ವಿ. ಇತಿಹಾಸ ಪ್ರಾಧ್ಯಾಪಕ ಡಾ. ಮುಷೀರ್ ಉಲ್‌ಹಸನ್, ಮಾತನಾಡಿ ಚಾಲನೆ ನೀಡಿದರು. ಡಾ. ಎಂ.ವಿ. ನಾಡಕರ್ಣಿ, ಡಾ. ಎಸ್.ಜಯರಾಂ, ಡಾ. ಎಸ್.ಸೀತಾರಾಮು ಭಾಗವಹಿಸಿದ್ದ 'ಆಶಯದಿಂದ ನಿಯಂತ್ರಣ' ಕ್ಕೆ ಮತ್ತು 'ಸಂಸತಿ, ಸಮಾಜ ಮತ್ತು ಅಭಿವೃದ್ಧಿ' - ಉನ್ನತೀಕರಣ ಪಾತ್ರ, ಎರಡನೇ ಗೋಷ್ಠಿ - ಉನ್ನತ ಶಿಕ್ಷಣದ ರಾಜಕೀಯ ಅರ್ಥಶಾಸ್ತ್ರ, ಜಾಗತೀಕರಣದ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ, ಕರ್ನಾಟಕದಲ್ಲಿ ಗ್ರಾಂಟ್ ಇನ್ ಎಡ್ ಪದ್ಧತಿ - ಡಾ. ವೆಂಕಟೇಶ್ ಆತ್ರೇಯ, ಡಾ. ಟಿ.ಕೆ.ದೇಕೆದತ್, ಪ್ರೊ. ನರಹರಿ, ರಮೇಶ್‌ಕುಮಾರ್ ಸಂಜೆ ಸಂಗಾತಿಯೊರಿಗೆ ಸೌಜನ್ಯ ಸಂಜೆ'' ಜ್ಞಾನ ಜ್ಯೋತಿ ಸಭಾಂಗಣದಲ್ಲಿ.

ನಾವು ಗೆದ್ದವರೂ ಅಲ್ಲ; ಸೋತಿದ್ದರೂ ಸುಮ್ಮನಾದವರಲ್ಲ, ಗೆದ್ದವರದ್ದೇ ಬೇರೆ ಅನುಭವ. ಆದರೆ ನಾವು ಗೆಲ್ಲುತ್ತೇವೆಂಬ ವಿಶ್ವಾಸವಿರಿಸಿಕೊಂಡು ಕ್ರಿಯಾಶೀಲರಾಗಿರವವರು. ಹತಾಶೆಯಿಂದ ಕೆಂಗೆಟ್ಟು ಕುಳಿತಿಲ್ಲ. 1848 ರಿಂದಲೇ ಬಹಳಷ್ಟು ಜನ ಮಾರ್ಕ್ಸ್‌ವಾದ ಸತ್ತಿತು, ರಷ್ಯಾ ಒಡೆಯಿತು - ಕಮ್ಯುನಿಸ್ಟ್ ಚಳುವಳಿ ಸತ್ತಿತು ಎನ್ನುತ್ತಾ ಬಂದರು. ಆದರೂ ಅವರಿಗೆ ನಾವು (ಕಮ್ಯುನಿಸ್ಟರು, ಮಾರ್ಕ್ಸ್‌ವಾದ) ಸತ್ತಿದ್ದೇವೆಂಬುದಕ್ಕೆ ಖಚಿತವಿಲ್ಲ. ಅದಕ್ಕೇ ಇಂದಿಗೂ ಅದೇ ಜನ ಕಮ್ಯುನಿಸ್ಟ್ ಸತ್ತಿತು ಎಂದೇ ಹೇಳುತ್ತಿದ್ದಾರೆ. ಹಾಗಾಗಿ ಸೋತರೂ ಗೆಲ್ಲುವವೆಂಬ ನಂಬಿಕೆಯಿಂದ ಕಾರ್ಯ ನಿರತರಾಗಿರುವವರು'

- ಜಿ.ಆರ್

ಸಂಶೋದನೆಗಳು ಯಾವ ದಿಕ್ಕು ಹಿಡಿದಿದೆ ಎಂಬುದಕ್ಕೆ ಕೇಂದ್ರ ಸರ್ಕಾರದ ನಿಲುವೇ ಸಾಕ್ಷಿ. ಅಲ್ಲಿನ ಮಂತ್ರಿಯೊಬ್ಬರು ಪಿಂಡ ಪ್ರಧಾನವನ್ನು ಸಂಶೋಧನೆ ಮಾಡಲು ಸೂಚಿಸುತ್ತಾರೆ. ಇದು ಎಂತಹ ಹೀನಾಯ ...
ಸಾರ್ವಜನಿಕರ ಹಣ ಹೀಗೆ ದುರುಪಯೋಗ ಮಾಡುವುದೇ? ಇವರಿಗೆ ಯಾರು ಬುದ್ಧಿ ಹೇಳುವವರ...
ಹಣವಿದ್ದವರು ಶಿಕ್ಷಣ ಪಡೆಯಲಿ, ಇಲ್ಲದಿದ್ದವರು ಹಾಗೆಯೇ ಇರಲಿ ಎನ್ನುವ ಇಂದಿನ ಸರಕಾರಗಳ ಧೋ...
ಎಷ್ಟು ಸರಿ? ಪಾಂಡಿತ್ಯ, ವಿದ್ವತ್ತು, ಸಂಸತಿ, ಸಂಶೋ...
ಅಧ್ಯಯನ ಎಲ್ಲಾ ಕ್ಷೇತ್ರಗಳಲ್ಲೂ ವೈಜ್ಞಾನಿಕ ತಳಹದಿಯ...
ಕುಸಿಯುತ್ತಿದೆ"

- ಜಿ...

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH